ಸ್ಥಾಪನೆ : 1939

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ

ದೂರವಾಣಿ: (08182) 250513, 250514 (ಕೇಂದ್ರ ಕಛೇರಿ)
ಇ-ಮೇಲ್ : ho@mamcos.info ವೆಬ್‌ಸೈಟ್ : www.mamcos.info

# 2023-24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ




ವಾರ್ಷಿಕ ಮಹಾಸಭೆಯ ದಿನಾಂಕ: 23-09-2024
ಸೋಮವಾರ, ಬೆಳಿಗ್ಗೆ 11-00 ಗಂಟೆಗೆ

# ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ

# ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ ಇದರ ಸನ್ 2023-24ನೇ ಸಾಲಿನ ಲೆಕ್ಕಪರಿಶೋಧನಾ ವರದಿ

## ಭಾಗ-1

## ಸಂಘದ ಪರಿಚಯಾತ್ಮಕ ವಿವರಗಳು

**1) ಸಂಘದ ವಿವರಗಳು:**

| | |
|---|---|
| 1) ಸಂಘದ ಪೂರ್ಣ ಹೆಸರು (ನೋಂದಣಿ ಪ್ರಮಾಣ ಪತ್ರದಲ್ಲಿ ಇದ್ದಂತೆ) | ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ, ಶಿವಮೊಗ್ಗ |
| 2) ನೋಂದಣಿ ಸಂಖ್ಯೆ ಹಾಗೂ ದಿನಾಂಕ | ಸಹಕಾರ ಸಂಘಗಳ ನಿಬಂಧಕರು, ಮೈಸೂರು ಇದರ ನೋಂದಣಿ ಪತ್ರ ಸಂಖ್ಯೆ: 5158 ನೋಂದಣಿ ಸಂಖ್ಯೆ: ಆರ್.ಸಿ.ಎಸ್. 1540, ದಿನಾಂಕ: 08/11/1939 |
| 3) ಸಂಪೂರ್ಣ ಅಂಚೆ ವಿಳಾಸ | ಎ.ಪಿ.ಎಂ.ಸಿ. ಯಾರ್ಡ್, ಸಾಗರ ರಸ್ತೆ, ಶಿವಮೊಗ್ಗ |
| 4) ದೂರವಾಣಿ/ಮೊಬೈಲ್ ಸಂಖ್ಯೆ | 08182-250513, ಮೊಬೈಲ್ 94498-63251 |
| 5) ಮಿಂಚಂಚೆ ವಿಳಾಸ (email id) | homamcos@gmail.com |
| 6) ಕಾರ್ಯಕ್ಷೇತ್ರ (ಸಂಘದ ಉಪನಿಯಮ ಸಂಖ್ಯೆಯೊಂದಿಗೆ ವಿವರಿಸಿ) | ಉಪನಿಯಮ 4(5)-ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳು (ಸಹಕಾರ ಸಂಘದ ಕಾರ್ಯ ವ್ಯಾಪ್ತಿಯು, ಕರ್ನಾಟಕ ರಾಜ್ಯದ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳ ಹಾಗೂ ದಾವಣಗೆರೆ ಜಿಲ್ಲೆಯ ಹೊನ್ನಾಳಿ, ನ್ಯಾಮತಿ ಮತ್ತು ಚನ್ನಗಿರಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ.) |

## 2) ಸಂಘದ ಉದ್ದೇಶಗಳ ಬಗ್ಗೆ :

| ಬೈಲಾ ಕಂಡಿಕೆ ಸಂಖ್ಯೆ | ಉದ್ದೇಶಗಳು | ಚಟುವಟಿಕೆಗಳು |
|---|---|---|
| 5(1) | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮೀಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳುವುದು. | ಸಂಘದ ಸದಸ್ಯರ ಮತ್ತು ಬೆಳೆಗಾರರ ಬಾಗಾಯ್ತು ಉತ್ಪನ್ನಗಳಾದ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನ ಬೆಳೆಗಳಿಗೆ ಉತ್ತಮ ಬೆಲೆ ಸಿಗಲು ಅನುಕೂಲವಾಗುವಂತೆ ಎ.ಪಿ.ಎಂ.ಸಿ. ನಿಯಮಗಳಿಗೊಳಪಟ್ಟು ಕಮೀಷನ್ ಏಜೆಂಟ್ ಆಗಿ ಅವುಗಳ ಮಾರಾಟಕ್ಕೆ ವ್ಯವಸ್ಥೆ ಮಾಡುವುದು ಹಾಗೂ ಇವುಗಳನ್ನು ಖರೀದಿಸಿ, ಸಂಸ್ಕರಿಸಿ ರಾಜ್ಯದ ಒಳಗೂ ಹೊರಗೂ ಮತ್ತು ದೇಶ ವಿದೇಶಗಳಲ್ಲಿ ವ್ಯಾಪಾರ ಮಾಡುವುದು ಮತ್ತು ಮಾರುಕಟ್ಟೆಯನ್ನು ಕಂಡುಕೊಳ್ಳಲಾಗುತ್ತಿದೆ. |
| 5(2) | ಉತ್ತಮ ದರ್ಜೆಯ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯವಾದ ನೆರವು ನೀಡುವುದು. | ಉತ್ತಮ ದರ್ಜೆಯ ಅಡಿಕೆ, ಕಾಳು ಮೆಣಸು, ಕೋಕೋ, ಏಲಕ್ಕಿ, ಶುಂಠಿ ಮುಂತಾದ ತೋಟೋತ್ಪನ್ನಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯಲು ಸದಸ್ಯರನ್ನು ಪ್ರೋತ್ಸಾಹಿಸಲಾಗುತ್ತಿದೆ. |
| 5(3) | ಅಡಿಕೆ ಕೊಳೆರೋಗ (ಶಿಲೀಂದ್ರ ರೋಗ) ನಿವಾರಣೆಗೆ ಅಗತ್ಯವಾದ ಕೊಳೆ ಔಷಧಿಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಸಂಘದ ಸದಸ್ಯರಿಗೆ ಒದಗಿಸುವುದು. | ಅಡಿಕೆ ಕೊಳೆರೋಗ (ಶಿಲೀಂದ್ರ ರೋಗ) ನಿವಾರಣೆಗೆ ಅಗತ್ಯವಾದ ಕೊಳೆ ಔಷಧಿಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಸಂಘದ ಸದಸ್ಯರಿಗೆ ಒದಗಿಸಲಾಗುತ್ತಿದೆ. |

| | | |
|---|---|---|
| 5(4) | ಬಾಗಾಯ್ತು ಕೃಷಿಗೆ ಅಗತ್ಯವಾದ ರಾಸಾಯನಿಕ ಮತ್ತು ಇತರೆ ಗೊಬ್ಬರಗಳನ್ನು ಮತ್ತು ಜಾನುವಾರು ಆಹಾರಗಳನ್ನು, ವ್ಯವಸಾಯೋಪಕರಣಗಳು, ಕೃಷಿ ಯಂತ್ರೋಪಕರಣಗಳೇ ಮುಂತಾದವು ಗಳನ್ನು ನಗದಾಗಿ ಅಥವಾ ಸಾಲದ ರೂಪದಲ್ಲಿ ಒದಗಿಸುವುದು.<br>ಅಸ್ತ್ರ ಒಲೆ, ಡ್ರೈಯರ್, ಗಟಾರ್ ಸ್ಪ್ರೇಯರ್ ಮತ್ತು ಪವರ್ ಸ್ಪ್ರೇಯರ್ ಯಂತ್ರಗಳ ಖರೀದಿಗೆ ಸಹಾಯಧನ ಒದಗಿಸುವುದು. | ರೈತರಿಗೆ ಅನುಕೂಲವಾಗುವಂತೆ ಉತ್ತಮ ದರ್ಜೆಯ ಸಾವಯವ ಗೊಬ್ಬರವನ್ನು ಮಾರಾಟ ಮಾಡಲಾಗುತ್ತಿದೆ.<br>ಅಸ್ತ್ರ ಒಲೆ, ಡ್ರೈಯರ್, ಗಟಾರ್ ಸ್ಪ್ರೇಯರ್ ಖರೀದಿಗೆ ಸಹಾಯಧನ ಒದಗಿಸಲಾಗು ತ್ತಿದೆ. |
| 5(5) | ತೋಟದ ಉತ್ಪನ್ನಗಳ ಬೆಳೆಗಾರರಿಗೆ ಫಸಲು ಸಂರಕ್ಷಣೆಗೆ ಅನುಕೂಲವಾಗುವಂತೆ ಮದ್ದುಗುಂಡುಗಳ ವ್ಯವಹಾರವನ್ನು ಸಕ್ಷಮ ಪ್ರಾಧಿಕಾರದ ಪರವಾನಿಗೆ ಪಡೆದು ನಡೆಸುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(6) | ಸಂಘದ ಸದಸ್ಯರಿಗೆ ಅಗತ್ಯವಾದ, ಸಂಘದ ಸಾಮಾನ್ಯ ಸಭೆಯಲ್ಲಿ ಅನುಮೋದನೆಗೊಂಡ ವಿವಿಧ ರೀತಿಯ ಸಾಲಗಳನ್ನು ಸದಸ್ಯರಿಗೆ ನೀಡುವುದು. | ಸಂಘದ ಸದಸ್ಯರಿಗೆ ಅಗತ್ಯವಾದ ಕಟಾವು ಸಾಲ, ಕೊಳೆಸಾಲ ಮತ್ತು ಅಡಿಕೆ ಆಧಾರ ಸಾಲಗಳನ್ನು ಸಂಘದ ಆಯಾ ವರ್ಷದ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಗೊಂಡು ಸಾಲಗಳನ್ನು ಸದಸ್ಯರಿಗೆ ನೀಡಲಾಗುತ್ತಿದೆ. |
| 5(7) | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳ ಸಂಗ್ರಹಣೆಗಾಗಿ ಸದಸ್ಯರಿಂದ ವಿವಿಧ ಪ್ರಕಾರದ ಠೇವಣಿಗಳನ್ನು ಸ್ವೀಕರಿಸುವುದು. ಸಂಘದ ಹಾಗೂ ಸಾರ್ವಜನಿಕ ಸರ್ವೋಪಯೋಗಿ ಉದ್ದೇಶಕ್ಕಾಗಿ ಸದಸ್ಯರು ಮತ್ತು ಸಾರ್ವಜನಿಕರಿಂದ ದೇಣಿಗೆ, ಚಂದಾ ಮುಂತಾದವುಗಳ ಮೂಲಕ ನಿಧಿ ಸಂಗ್ರಹಿಸುವುದು ಮತ್ತು ಯಾವುದೇ ವ್ಯಕ್ತಿ, ಹಣಕಾಸಿನ ಸಂಸ್ಥೆಗಳು ಹಾಗೂ ಸಂಘಟನೆಗಳು, ಸಹಕಾರಿ ಬ್ಯಾಂಕುಗಳು, | ಸಂಘಕ್ಕೆ ಅಗತ್ಯವಾದ ದುಡಿಯುವ ಬಂಡವಾಳವನ್ನು – ಸದಸ್ಯರಿಂದ ಉಳಿತಾಯ ಖಾತೆ, ನಿಗದಿತ ಠೇವಣಿ ಮತ್ತು ಕರೆ ಠೇವಣಿ ಹಾಗೂ ವಾಣಿಜ್ಯ ಬ್ಯಾಂಕುಗಳಿಂದ ನಗದು ಸಾಲದ ರೂಪಗಳಿಂದ ಸಂಗ್ರಹಿಸಲಾಗುತ್ತಿದೆ. |

| | | |
|---|---|---|
| | ವಾಣಿಜ್ಯ ಬ್ಯಾಂಕುಗಳು ಮತ್ತು ಸರ್ಕಾರದಿಂದ ಸಹಕಾರಿ ಕಾಯಿದೆ, ನಿಯಮಗಳು ಹಾಗೂ ಸಂಘದ ಉಪ ನಿಯಮಗಳಿಗೊಳಪಟ್ಟು ಸಾಲ ಮತ್ತು ಇನ್ನಿತರ ಸಹಾಯ ಪಡೆಯುವುದು. | |
| 5(8) | ಸಂಘದ ಸದಸ್ಯರಿಗೆ ಪರಸ್ಪರ ಸಹಕಾರ, ಸ್ವ ಸಹಾಯ, ಮಿತವ್ಯಯ ಮತ್ತು ಉಳಿತಾಯ ಮನೋಭಾವನೆಗಳ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಅವರಲ್ಲಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಹಾಗೂ ಅವುಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡುವುದು. | ಸಂಘದ ಸದಸ್ಯರಿಗೆ ಪರಸ್ಪರ ಸಹಕಾರ, ಸ್ವ ಸಹಾಯ, ಮಿತವ್ಯಯ ಮತ್ತು ಉಳಿತಾಯ ಮನೋಭಾವನೆಗಳ ಬಗ್ಗೆ ತಿಳುವಳಿಕೆ ನೀಡುವುದು ಮತ್ತು ಅವರಲ್ಲಿ ಅವುಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡು ವುದು ಹಾಗೂ ಅವುಗಳ ಅನುಷ್ಠಾನಕ್ಕೆ ಅವಕಾಶ ಮಾಡಿಕೊಡಲಾಗುತ್ತಿದೆ. |
| 5(9) | ಸಂಘದ ಮುಖ್ಯ ಉದ್ದೇಶ ಮತ್ತು ಹಿತಕ್ಕೆ ಧಕ್ಕೆ ಒದಗದ ರೀತಿಯಲ್ಲಿ ಸರ್ಕಾರವು ವಹಿಸಿ ಕೊಡಬಹುದಾದ ವ್ಯವಹಾರಗಳನ್ನು ನಿರ್ವಹಿಸುವುದು. | ಸಂಘದ ಮುಖ್ಯ ಉದ್ದೇಶ ಮತ್ತು ಹಿತಕ್ಕೆ ಧಕ್ಕೆ ಒದಗದ ರೀತಿಯಲ್ಲಿ ಸರ್ಕಾರವು ವಹಿಸಿದ ವರ್ಷಗಳಲ್ಲಿ ವ್ಯವಹಾರಗಳನ್ನು ನಿರ್ವಹಿಸಲಾಗುತ್ತಿದೆ. ಈ ಸಾಲಿನಲ್ಲಿ ಯಾವುದೇ ರೀತಿಯಲ್ಲಿ ಸರ್ಕಾರವು ಯಾವುದೇ ವ್ಯವಹಾರಗಳನ್ನು ವಹಿಸಿಲ್ಲ. |
| 5(10) | ತೋಟಗಾರಿಕೆ ಬೆಳೆಗಳ ಕೃಷಿ ಪದ್ಧತಿ, ಸಾವಯವ ಗೊಬ್ಬರ ತಯಾರಿಕೆ, ಎರೆಹುಳು ಗೊಬ್ಬರ ತಯಾರಿಕೆ, ಹೈನುಗಾರಿಕೆ, ಜೇನು ಸಾಕಾಣಿಕೆ, ಸೊಪ್ಪಿನ ಬೆಟ್ಟ ಸಂರಕ್ಷಣೆ ಮತ್ತು ಸಂವರ್ಧನೆ ಬಗ್ಗೆ ಮಾರ್ಗದರ್ಶನ ಮಾಡು ವುದು. ಹಸಿರೀಕರಣ, ಭೂ ಸಂರಕ್ಷಣೆ, ಹೂಗಳ ಬೆಳೆಸುವಿಕೆ ಮತ್ತು ನರ್ಸರಿಗಳ ಪೋಷಣೆಗಾಗಿ ಸಾಲ ಸೌಕರ್ಯಗಳನ್ನು ಒದಗಿಸುವುದು ಮತ್ತು ಈ ಬಗ್ಗೆ ಸಂಘದ ಸದಸ್ಯರು ಮತ್ತು ಅವರ ಕುಟುಂಬ ವರ್ಗದವರಿಗೆ ಅಲ್ಪಾವಧಿ ತರಬೇತಿ ನೀಡಲು ವ್ಯವಸ್ಥೆಗೊಳಿಸುವುದು, ಈ ಕುರಿತು ಸಹಾಯ–ಸಹಕಾರ ನೀಡುವ ಮತ್ತಿತರ ಸಂಸ್ಥೆಗಳ ಹಾಗೂ ಸರ್ಕಾರಗಳ ನಬಾರ್ಡ್ ಯೋಜನೆಗಳ ಉಪಯೋಗ ಪಡೆಯುವುದು. | ಷೇರುದಾರರ ಸಮಾವೇಶ ಕರೆಯುವ ಮೂಲಕ ಮಾರ್ಗದರ್ಶನ ನೀಡಲಾಗು ತ್ತಿದೆ. ಕೃಷಿ ಮತ್ತು ತೋಟಗಾರಿಕಾ ವಿಶ್ವವಿದ್ಯಾಲಯದ ವಿಜ್ಞಾನಿಗಳಿಂದ ಈ ಬಗೆಗೆ ಮಾಹಿತಿ ನೀಡಲಾಗುತ್ತಿದೆ. |

| | | |
|---|---|---|
| 5(11) | ಸದಸ್ಯರ ಅನುಕೂಲಕ್ಕಾಗಿ ಸಂಘದ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಯಾವುದೇ ಹೆಸರಿನಿಂದ ಕರೆಯಲ್ಪಡುವ ಶಾಖೆಗಳನ್ನು ತೆರೆಯುವುದು ಮತ್ತು ಅವುಗಳ ಕಾರ್ಯ ನಿರ್ವಹಣೆ ಬಗ್ಗೆ ನಿಯಮಗಳನ್ನು ರೂಪಿಸುವುದು ಮತ್ತು ಅನಗತ್ಯವೆಂದು ಕಂಡು ಬಂದಲ್ಲಿ ಮುಚ್ಚುವುದು. | ಸದಸ್ಯರ ಅನುಕೂಲಕ್ಕಾಗಿ ಸಂಘದ ಕಾರ್ಯವ್ಯಾಪ್ತಿಗೆ ಒಳಪಡುವ ಪ್ರದೇಶ ಗಳಲ್ಲಿ ಸಂಘದ ಹೆಸರಿನಲ್ಲಿ 12 ಶಾಖೆಗಳನ್ನು ತೆರೆಯಲಾಗಿದೆ ಹಾಗೂ ಶಾಖೆಗಳಿಗೆ ಹೊಂದಿಕೊಂಡಂತೆ 18 ಏಜೆನ್ಸಿಗಳ ಮೂಲಕ ಸದಸ್ಯರು ಸಂಘದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅನುಕೂಲ ಮಾಡಿಕೊಡಲಾಗಿದೆ.<br><br>ವರ್ಷಾಂತ್ಯಕ್ಕೆ ಸಹಕಾರಿಯು ಒಟ್ಟು 12 ಶಾಖೆ ಮತ್ತು 18 ಏಜೆನ್ಸಿಗಳು ಹಾಗು 6 ಖರೀದಿ ಕೇಂದ್ರ ಹೊಂದಿರುತ್ತದೆ. |
| 5(12) | ಸಂಘದ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಸಮುದಾಯ ಭವನ ಮತ್ತು ವ್ಯಾಪಾರ ಮಳಿಗೆಗಳ ಸಂಕೀರ್ಣ ಗಳನ್ನು ನಿರ್ಮಿಸಿ ನಿರ್ವಹಿಸುವುದು. | ಸಂಘದ ಸದಸ್ಯರ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ವ್ಯಾಪಾರ ಮಳಿಗೆಗಳ ಸಂಕೀರ್ಣಗಳನ್ನು ನಿರ್ಮಿಸಿ ಹಾಗೂ ಬಾಡಿಗೆ ಪಡೆದು ನಿರ್ವಹಿಸಲಾಗಿದೆ. |
| 5(13) | ಸಂಘದ ವ್ಯವಹಾರಗಳಿಗೆ ಹಾಗೂ ಕಾರ್ಯ ನಿರ್ವಹಣೆಗೆ ಅಗತ್ಯವಾದ ನಿವೇಶನ ಅಥವಾ ಕಟ್ಟಡಗಳನ್ನು ಖರೀದಿಸುವುದು, ಸ್ವಾಧೀನಪಡಿಸಿಕೊಳ್ಳುವುದು, ಕಟ್ಟಡಗಳನ್ನು ನಿರ್ಮಿಸುವುದು, ಬದಲಾವಣೆ ಮಾಡುವುದು ಇತರೆ ಚರ ಸ್ವತ್ತುಗಳನ್ನು ಖರೀದಿಸುವುದು ಹಾಗೂ ಅವುಗಳನ್ನು ಸಂಘಕ್ಕೆ ಅವಶ್ಯಕತೆ ಇಲ್ಲದೇ ಇದ್ದ ಸಂದರ್ಭಗಳಲ್ಲಿ ಬಾಡಿಗೆಗೆ ಅಥವಾ ಲೀಸಿಗೆ ಕೊಡುವುದು ಅಥವಾ ಸಾಮಾನ್ಯ ಸಭೆಯ ಅನುಮತಿ ಪಡೆದು ನಿಯಮಾನುಸಾರ ವಿಲೇವಾರಿ ಮಾಡುವುದು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಇತರೆ ಕಾರ್ಯಗಳನ್ನು ನಿರ್ವಹಿಸುವುದು. | ಅನುಬಂಧ 11 ರಲ್ಲಿ ವಿವರ ನೀಡಲಾಗಿದೆ. |
| 5(14) | ಸದಸ್ಯರ ಮತ್ತು ಸಾರ್ವಜನಿಕರ ಅನುಕೂಲ ಕ್ಕಾಗಿ ಪ್ರವಾಸಿ ಸ್ಥಳಗಳಲ್ಲಿ ವಸತಿ ಗೃಹ ನಿರ್ಮಿಸುವುದು ಮತ್ತು ಇತರ ಸೌಕರ್ಯಗಳನ್ನು ಒದಗಿಸುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |

| | | |
|---|---|---|
| 5(15) | ಸಂಘದ ಸದಸ್ಯರ ಮತ್ತು ನೌಕರರ ಕ್ಷೇಮಕ್ಕಾಗಿ, ಸಂಘದ ನಿವ್ವಳ ಲಾಭದಿಂದ ನಿಧಿಗಳನ್ನು ಸ್ಥಾಪಿಸಿ, ಸಹಾಯ ಅಗತ್ಯವಾದಾಗ ಅಂತಹ ಸದಸ್ಯರ ಅಥವಾ ನೌಕರರ ಕುಟುಂಬಕ್ಕೆ ಆ ನಿಧಿಯಿಂದ, ಆ ಸಂಬಂಧ ರಚಿಸಲಾದ ನಿಯಮಾನುಸಾರ ಸಹಾಯ ನೀಡುವುದು. | ನೌಕರರ ಕ್ಷೇಮ ನಿಧಿಗೆ ನಿವ್ವಳ ಲಾಭದ ಶೇಕಡ 2 ಮೀರದಂತೆ ಮತ್ತು ಸದಸ್ಯರ ಕ್ಷೇಮ ನಿಧಿಗೆ ಶೇಕಡ 40 ಮೀರದಂತೆ ನಿವ್ವಳ ಲಾಭದಲ್ಲಿ ತೆಗೆದಿರಿಸಲಾಗುತ್ತಿದೆ. ಅಗತ್ಯವಾದಾಗ ಅಂತಹ ಸದಸ್ಯರ ಅಥವಾ ನೌಕರರ ಕುಟುಂಬಕ್ಕೆ ಆ ನಿಧಿಯಿಂದ, ಆ ಸಂಬಂಧ ರಚಿಸಲಾದ ನಿಯಮಾನುಸಾರ ಸಹಾಯ ನೀಡಲಾಗುತ್ತಿದೆ. |
| 5(16) | ಸಂಘದ ಸದಸ್ಯರ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆಯಲು, ಪ್ರೋತ್ಸಾಹಿಸಲು, ಸದಸ್ಯರಿಂದ ಮತ್ತು ಇತರರಿಂದ ದಾನ ಅಥವಾ ದೇಣಿಗೆಗಳನ್ನು ಸಂಗ್ರಹಿಸಿ, ಅಗತ್ಯವಿದ್ದಲ್ಲಿ ಸಂಘದ ನಿವ್ವಳ ಲಾಭದಿಂದಲೂ ಸೇರಿಸಿ, ವಿದ್ಯಾನಿಧಿಯನ್ನು ಸ್ಥಾಪಿಸಿ, ಆಡಳಿತ ಮಂಡಳಿ ಈ ಸಂಬಂಧ ರೂಪಿಸಿ, ಸಾಮಾನ್ಯ ಸಭೆ ಅನುಮೋದನೆಗೊಳಪಟ್ಟ ಒಳ ನಿಯಮಗಳಿಗನುಸಾರ ಆ ನಿಧಿಯಿಂದ ಸದಸ್ಯರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಸಹಾಯ ಮಾಡುವುದು. | ವಿದ್ಯಾನಿಧಿಯನ್ನು ಸ್ಥಾಪಿಸಿಲ್ಲದಿದ್ದರೂ ಸಹ, ಸಹಕಾರಿಯು ಶಿವಮೊಗ್ಗ ಶಾಖೆಯಲ್ಲಿ ವಿಶೇಷ ನಿಧಿ ಎಂಬ ಹೂಡಿಕೆಯನ್ನು ಮಾಡಿ, ಅದರಿಂದ ಬಂದಿರುವ ಬಡ್ಡಿಯಲ್ಲಿ ಕ್ರೀಡೆ ಹಾಗೂ ಎಸ್.ಎಸ್.ಎಲ್.ಸಿ ಮತ್ತು ಅದಕ್ಕಿಂತ ಉನ್ನತ ಶಿಕ್ಷಣದಲ್ಲಿ ಅತಿ ಹೆಚ್ಚು ಅಂಕ ಪಡೆದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹ ಧನವನ್ನು ನೀಡಲಾಗಿದೆ. |
| 5(17) | ಸಂಘದ ಸದಸ್ಯರ ಕುಟುಂಬಗಳಿಗೆ, ಸದಸ್ಯರ ಮರಣೋತ್ತರ ವಿಧಿಗಳನ್ನು ನಿರ್ವಹಿಸಲು ನೆರವು ನೀಡುವ ಬಗ್ಗೆ ಮತ್ತು ಅಗತ್ಯವಿದ್ದಲ್ಲಿ ಅಂತ್ಯ ಸಂಸ್ಕಾರ ನಿಧಿ ಪ್ರಾರಂಭಿಸಿ, ಅದಕ್ಕೆ ಅಗತ್ಯವಾದ ಹಣವನ್ನು ಸದಸ್ಯರಿಂದ ಸಂಗ್ರಹಿಸಿ ಅಥವಾ ಈ ಸಂಬಂಧ ರೂಪಿಸಲಾದ ನಿಯಮಾನುಸಾರ ಸದಸ್ಯರ ಕುಟುಂಬಗಳಿಗೆ ಆರ್ಥಿಕ ಸಹಾಯ ನೀಡುವುದು. | ಸದಸ್ಯರ ಮರಣೋತ್ತರ ನಿಧಿ ಮತ್ತು ಅಂತ್ಯಸಂಸ್ಕಾರ ನಿಧಿಗೆ ಆಯಾ ವರ್ಷಗಳಲ್ಲಿ ನಿವ್ವಳ ಲಾಭದಿಂದ ಮೊತ್ತವನ್ನು ತೆಗೆದಿರಿಸಿ ಫಲಾನುಭವಿಗಳಿಗೆ ನಿಯಾಮಾನುಸಾರ ಸಹಾಯ ನೀಡಲಾಗುತ್ತಿದೆ. |
| 5(18) | ಸಂಘದ ಸದಸ್ಯರ ಮಕ್ಕಳು ಸ್ವಂತ ಉದ್ಯೋಗ ಪ್ರಾರಂಭಿಸಲು ಪ್ರೋತ್ಸಾಹಿಸುವುದು ಮತ್ತು ಅದಕ್ಕೆ ಅಗತ್ಯ ಮಾರ್ಗದರ್ಶನ ನೀಡುವುದು. | ಇರುವುದಿಲ್ಲ. |

| | | |
|---|---|---|
| 5(19) | ಸದಸ್ಯರಿಗೆ ಹಾಗೂ ಅವರ ಅವಲಂಬಿತರಿಗೆ, ಆರ್ಥಿಕ ಭದ್ರತೆ ಹಾಗೂ ಆರೋಗ್ಯ ಭದ್ರತೆಗಾಗಿ ಸಾಮಾನ್ಯ ವಿಮಾ ನಿಗಮ, ಜೀವ ವಿಮಾ ನಿಗಮ, ಇತರೆ ಜೀವ ವಿಮಾ ಸಂಸ್ಥೆಗಳು ನೀಡುವ ಸಾಮೂಹಿಕ ವಿಮಾ ಯೋಜನೆ ಹಾಗೂ ಇತರೆ ಸಂಸ್ಥೆಗಳು ಕೊಡ ಮಾಡುವ ಮೆಡಿಕ್ಲೈಮ್ ಸೌಲಭ್ಯಗಳ ನೀಡಿಕೆ, ಇವುಗಳನ್ನು ಸದಸ್ಯರಿಗೆ ಒದಗಿಸಲು ಅಂತಹ ಸಂಸ್ಥೆಗಳ ನಿಯೋಗಿಯಾಗಿ ಕಾರ್ಯ ನಿರ್ವಹಿಸುವುದು. | ದಿ ಓರಿಯಂಟಲ್ ಇನ್ಸುರೆನ್ಸ್ ಕಂಪನಿ ಮತ್ತು ಐ.ಸಿ.ಐ.ಸಿ.ಐ. ಜನರಲ್ ಇನ್ಸುರೆನ್ಸ್ ಕಂಪೆನಿಯ ಸಹಯೋಗದೊಂದಿಗೆ ಗುಂಪು ವಿಮಾ ಅಭಿರಕ್ಷಾ ಯೋಜನೆ ಹಾಗು ಸದಸ್ಯರ ಮತ್ತು ಅವರ ಕುಟುಂಬದ ಸದಸ್ಯರ ಆರೋಗ್ಯ ವಿಮೆ ಮಾಡಲಾಗಿದೆ. |
| 5(20) | ಸಂಘದ ಕಾರ್ಯವ್ಯಾಪ್ತಿಯಲ್ಲಿ ಬರುವ ಕೃಷಿ ಪತ್ತಿನ ಸಹಕಾರ ಸಂಘಗಳು ತಮ್ಮ ಅಡಿಕೆ ಬೆಳೆಗಾರ ಸದಸ್ಯರಿಗೆ ನೀಡಿದ ಸಾಲಗಳ ವಸೂಲಾತಿಗೆ, ಅಂತಹ ಸದಸ್ಯರ ಸಂಘದಲ್ಲಿನ ಮಾರಾಟದ ಮೊಬಲಗಿನಲ್ಲಿ ಅವರ ಅನುಮತಿಯೊಂದಿಗೆ ಅಂತಹ ಸಂಘಗಳಿಗೆ ಅವರಿಂದ ಸಂದಾಯವಾಗತಕ್ಕ ಬಾಕಿಯನ್ನು ಕಡಿತ ಮಾಡಿ, ಅವುಗಳ ಲೆಕ್ಕಕ್ಕೆ ಜಮಾ ಮಾಡುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(21) | ಸಂಘದ ಸದಸ್ಯರು ರಬ್ಬರ್ ಬೆಳೆಯಲು ಸಹಾಯ, ಸಹಕಾರ ನೀಡಿ ಪ್ರೋತ್ಸಾಹಿಸುವುದು ಮತ್ತು ರಬ್ಬರ್ ಹಾಗೂ ರಬ್ಬರ್ ಉತ್ಪನ್ನಗಳ ತಯಾರಿಕೆ, ಖರೀದಿ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(22) | ಸದಸ್ಯರು ಮತ್ತು ಸಾರ್ವಜನಿಕರ ಅನುಕೂಲ ಕ್ಕಾಗಿ ಶಾಲಾ ಕಾಲೇಜುಗಳೇ ಮುಂತಾದ ವಿವಿಧ ಸ್ತರದ ಶೈಕ್ಷಣಿಕ ಸಂಸ್ಥೆಗಳನ್ನು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿ ನಿಲಯಗಳನ್ನು, ಕೃಷಿ ಹಾಗೂ ಸಹಕಾರಿ ಶಿಕ್ಷಣ ತರಬೇತಿ ಕೇಂದ್ರಗಳನ್ನು, ವ್ಯಾಯಾಮ ಶಾಲೆ (ಜಿಮ್) ಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |

| | | |
|---|---|---|
| 5(23) | ಸದಸ್ಯರು ಮತ್ತು ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಅಗತ್ಯವಾದ ವೈದ್ಯಾಲಯಗಳು, ಆಸ್ಪತ್ರೆಗಳು, ಶುಶ್ರೂಶಾಲಯಗಳು, ಔಷಧಾಲಯಗಳೇ ಮುಂತಾದವುಗಳನ್ನು ಸ್ಥಾಪಿಸುವುದು ಹಾಗೂ ನಿರ್ವಹಿಸುವುದು. | ಸದಸ್ಯರು ಮತ್ತು ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಅಗತ್ಯವಾದ ವೈದ್ಯಾಲಯಗಳು, ಆಸ್ಪತ್ರೆಗಳು, ಶುಶ್ರೂಶಾಲಯಗಳು, ಔಷಧಾಲಯಗಳೇ ಮುಂತಾದವುಗಳನ್ನು ಸ್ಥಾಪಿಸಿಲ್ಲ ಹಾಗೂ ನಿರ್ವಹಿಸದಿದ್ದರೂ ಸಹ ಶಂಕರ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ ಇವರ ಜೊತೆ ಒಪ್ಪಂದದ ಪ್ರಕಾರ ಸದಸ್ಯರಿಗೆ ಹೊರರೋಗ ಚಿಕಿತ್ಸೆಗೆ ತಲಾ ಗರಿಷ್ಠ ರೂ.150ರಂತೆ ವೆಚ್ಚವನ್ನು ಭರಿಸಲಾಗಿದೆ. |
| 5(24) | ಸಾರ್ವಜನಿಕ ಸುರಕ್ಷತೆಗಾಗಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಶುದ್ಧ ನೀರಿನ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವುದು ಮತ್ತು ಶುದ್ಧ ನೀರನ್ನು ಸರಬರಾಜು ಮಾಡುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(25) | ಲಾರಿ, ಗೂಡ್ಸ್ ಕ್ಯಾರಿಯರ್ ಮುಂತಾದ ಸಾರಿಗೆ ವಾಹನಗಳನ್ನು ಬಳಸಿ ಅಡಿಕೆ ಮತ್ತಿತರ ಸರಕು ಸಾಗಣೆ ವ್ಯವಸ್ಥೆಯನ್ನು ನಿರ್ವಹಿಸುವುದು. | ಶಿವಮೊಗ್ಗ ಎ.ಪಿ.ಎಂ.ಸಿ.ಯಿಂದ ಐಷರ್ ವಾಹನ ನೀಡಿದ್ದು ಈ ವಾಹನವನ್ನು ಬಳಸಿಕೊಂಡು ಅಡಿಕೆ ಮೂಟೆಗಳ ಸಾಗಣೆ ವ್ಯವಸ್ಥೆಯನ್ನು ಸದಸ್ಯರ ಅನುಕೂಲಕ್ಕಾಗಿ ನಿರ್ವಹಿಸಲಾಗುತ್ತಿದೆ. |
| 5(26) | ಸದಸ್ಯರಿಗೆ ಅಗತ್ಯವಾದ ಅಡಿಕೆ ಸುಲಿಯುವ ಯಂತ್ರ ಮುಂತಾದ ಕೃಷಿ ಉಪಕರಣಗಳನ್ನು ಖರೀದಿಸಿ ಬಾಡಿಗೆಗೆ ನೀಡುವುದು ಮತ್ತು ಕೃಷಿ ಸೇವಾ ಕೇಂದ್ರಗಳನ್ನು ತೆರೆಯುವುದು | ಕೃಷಿಯ ಬಗ್ಗೆ ಸಂಘದ ಷೇರುದಾರರ ಸಭೆಗಳಲ್ಲಿ ಮತ್ತು ಡೈರಿ ಕ್ಯಾಲೆಂಡರ್‌ಗಳಲ್ಲಿ ಅಗತ್ಯ ಮಾಹಿತಿಗಳನ್ನು ನೀಡಲಾಗುತ್ತಿದೆ. |
| 5(27) | ಸೌರಶಕ್ತಿ ಉಪಕರಣಗಳ ತಯಾರಿಕಾ ಸಂಸ್ಥೆಗಳ ಸಹಯೋಗದೊಂದಿಗೆ ಅಂತಹ ಉಪಕರಣಗಳ ಸಗಟು ಹಾಗೂ ಚಿಲ್ಲರೆ ಮಾರಾಟ ಕಾರ್ಯ ನಿರ್ವಹಿಸುವುದು ಮತ್ತು ಸಂಘದ ಸದಸ್ಯರು ಇವುಗಳನ್ನು ಉಪಯೋಗಿಸಲು ಪ್ರೋತ್ಸಾಹಿಸುವುದು. ಆ ಬಗ್ಗೆ ಅಗತ್ಯವಾದ ಆರ್ಥಿಕ ನೆರವು ಪಡೆಯಲು ಸಹಾಯ ನೀಡುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |

| | | |
|---|---|---|
| 5(28) | ಗೊಬ್ಬರ, ಕ್ರಿಮಿನಾಶಕಗಳು, ವ್ಯವಸಾಯೋಪ ಕರಣಗಳು, ಕೃಷಿ ಯಂತ್ರೋಪಕರಣಗಳ ತಯಾರಿಕಾ ಕಂಪನಿಗಳ ಉತ್ಪನ್ನಗಳನ್ನು ಸಗಟಾಗಿ ಖರೀದಿಸಿ, ಸಗಟು ಹಾಗೂ ಚಿಲ್ಲರೆಯಾಗಿ ಮಾರಾಟ ಮಾಡಲು ಅಂತಹ ಕಂಪನಿಗಳ ಮಾರಾಟದ ಏಜೆನ್ಸಿಯನ್ನು (ಡೀಲರ್‌ಶಿಪ್) ಪಡೆಯುವುದು | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(29) | ಕೊಳೆ ರೋಗದ ಔಷಧಿಗಳಾದ ಮೈಲುತುತ್ತ, ರಾಳ ಮುಂತಾದವುಗಳನ್ನು ಮತ್ತು ರಾಸಾಯನಿಕ ಗೊಬ್ಬರಗಳನ್ನು ತಯಾರಿಸಲು ಕಾರ್ಖಾನೆಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು. | ಕೊಳೆ ರೋಗದ ಔಷಧಿಗಳಾದ ಮೈಲುತುತ್ತ, ಸುಣ್ಣ, ರಾಳ ಮುಂತಾದವುಗಳನ್ನು ತಯಾರಕರಿಂದ ಖರೀದಿಸಿ ಸದಸ್ಯರಿಗೆ ನೀಡಲಾಗುತ್ತಿದೆ. |
| 5(30) | ಸಂಘವು ಕೇಂದ್ರೀಯ ಅಡಿಕೆ ಹಾಗೂ ಕೋಕೋ ಮಾರಾಟ ಮತ್ತು ಪರಿಷ್ಕರಣ ಸಹಕಾರಿ ನಿ., ಮಂಗಳೂರು (ಕ್ಯಾಂಪ್ಕೋ) ಇದರ ಏಜೆಂಟ್ ಆಗಿ ಕಾರ್ಯ ನಿರ್ವಹಿಸುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(31) | ಪೆಟ್ರೋಲ್ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಮಾರಾಟವನ್ನು ಸಕ್ಷಮ ಪ್ರಾಧಿಕಾರದ ಪರವಾನಿಗೆ ಪಡೆದು ನಿರ್ವಹಿಸುವುದು. | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(32) | ಬೆಳೆಗಾರರಿಗೆ ಅಗತ್ಯವಾದ ನೀರಾವರಿ ಪಂಪುಗಳು ಹಾಗೂ ಅದರ ಬಿಡಿಭಾಗಗಳು ಮತ್ತು ಪೈಪುಗಳೇ ಮುಂತಾದ ಇತರೇ ಸಾಮಗ್ರಿಗಳ ಖರೀದಿ ಹಾಗೂ ಮಾರಾಟ ವ್ಯವಹಾರ ನಿರ್ವಹಿಸುವುದು | ಕಾರ್ಯಚಟುವಟಿಕೆ ಕೈಗೊಂಡಿರುವುದಿಲ್ಲ. |
| 5(33) | **ಹೊಸದಾಗಿ ಸೇರ್ಪಡೆ:** ಆಡಳಿತ ಮಂಡಳಿ ಅಗತ್ಯವಿದೆಯೆಂದು ನಿರ್ಧರಿಸಿದಾಗ ಸಂಘದ ವಿವಿಧ ಶಾಖೆ/ಏಜೆನ್ಸಿಗಳಲ್ಲಿ ಅಥವಾ ಆಡಳಿತ ವ್ಯಾಪ್ತಿಯ ಯಾವುದೇ ಸ್ಥಳ/ಸ್ಥಳಗಳಲ್ಲಿ ಸಂಘದ ಸದಸ್ಯರಿಗೆ ತರಬೇತಿಯನ್ನು ನೀಡುವುದು ಮತ್ತು ಸದಸ್ಯರ ಸಮಾಲೋಚನಾ/ಸಂಪರ್ಕ/ಜಾಗೃತಿ ಅಥವಾ ಯಾವುದೇ ಹೆಸರಿನಿಂದ | ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) ಬೆಂಗಳೂರು ಇವರು ತಮ್ಮ ಆದೇಶ ಸಂಖ್ಯೆ: ಆರ್‌ಸಿಎಸ್/ಎಂಕೆಟಿ-2/ಉ.ತಿ./17/2023-24 ದಿನಾಂಕ 28-12-2023 ರಲ್ಲಿ ಈ ತಿದ್ದುಪಡಿಯನ್ನು ತಿರಸ್ಕರಿಸಿದ್ದರಿಂದ ಸಂಘದಿಂದ ಮಾನ್ಯ ಸಹಕಾರ ಸಂಘಗಳ ನಿಬಂಧಕರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ವಿಚಾರಣೆ ಹಂತದಲ್ಲಿರುತ್ತದೆ. |

| | | |
|---|---|---|
| | ಕರೆಯಲ್ಪಡುವ ಷೇರುದಾರರ ಸಭೆಗಳನ್ನು ನಡೆಸಿ ಸದಸ್ಯರ ಅನಿಸಿಕೆ, ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಆಡಳಿತ ಮಂಡಳಿ ಮುಂದೆ ಅಥವಾ ಅಗತ್ಯವಿದ್ದಾಗ ಸರ್ವ ಸದಸ್ಯರ ಸಭೆಯ ಮುಂದೆ ಮಂಡಿಸಿ ಸೂಕ್ತ ತೀರ್ಮಾನ ಕೈಗೊಳ್ಳುವುದು. | ಸಂಘದ ಉಪವಿಧಿ 49(7)ರ ಪ್ರಕಾರ ಅಧ್ಯಕ್ಷರು ಸದಸ್ಯರ ಸಂಪರ್ಕ ಸಭೆಯನ್ನು ನಡೆಸಲು ಅಧಿಕಾರವನ್ನು ಹೊಂದಿದ್ದು ಅದರ ಪ್ರಕಾರ ಕಳೆದ ಹಲವಾರು ವರ್ಷಗಳಿಂದ ಸಂಪರ್ಕ/ಸಮಾಲೋಚನಾ ಸಭೆಗಳನ್ನು ನಡೆಸಿಕೊಂಡು ಬಂದಿರುತ್ತಾರೆ. |
| 5(34) | ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಅಭಿವೃದ್ಧಿಗೆ ಪೂರಕವಾಗುವ ಹಾಗೂ ಕಾನೂನು ಮತ್ತು ಸಾಮಾಜಿಕ ಹಿತಾಸಕ್ತಿಗೆ ವಿರುದ್ಧವಾಗಿಲ್ಲದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. | ಮೇಲ್ಕಂಡ ಉದ್ದೇಶಗಳ ಈಡೇರಿಕೆಗಾಗಿ ಮತ್ತು ಸಂಘದ ಅಭಿವೃದ್ಧಿಗೆ ಪೂರಕ ವಾಗುವ ಹಾಗೂ ಕಾನೂನು ಮತ್ತು ಸಾಮಾಜಿಕ ಹಿತಾಸಕ್ತಿಗೆ ವಿರುದ್ಧವಾಗಿಲ್ಲದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳ ಲಾಗುತ್ತಿದೆ. |

2.1

| | | |
|---|---|---|
| 1 | ಉಪ ವಿಧಿಗಳಲ್ಲಿ ಇಲ್ಲದ ಚಟುವಟಿಕೆಗಳನ್ನು ನಿರ್ವಹಿಸುತ್ತಿದೆಯೇ? | ಯಾವುದು ಇರುವುದಿಲ್ಲ |

**3) ಸಂಘದ ಪದಾಧಿಕಾರಿಗಳ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಹೆಸರು, ಹುದ್ದೆ ಮತ್ತು ಅವಧಿ:**

**(ದಿನಾಂಕ 31–03–2024 ರಲ್ಲಿದ್ದಂತೆ)**

| | |
|---|---|
| 1) ಅಧ್ಯಕ್ಷರು | **ಡಾ.ಸೆಲ್ವಮಣಿ ಆರ್**. ಐ.ಎ.ಎಸ್., ಮಾನ್ಯ ಜಿಲ್ಲಾಧಿಕಾರಿಗಳು (ದಿನಾಂಕ:12.01.2022 ರಿಂದ 28.01.2024 ವರೆಗೆ) ಮತ್ತು **ಶ್ರೀ ಗುರುದತ್ತ ಹೆಗಡೆ,** ಐ.ಎ.ಎಸ್., ಮಾನ್ಯ ಜಿಲ್ಲಾಧಿಕಾರಿಗಳು (ದಿನಾಂಕ: 28.01.2024ರಿಂದ ತಹಲ್‌ವರೆಗೆ) ಅಧ್ಯಕ್ಷರಾಗಿರುತ್ತಾರೆ. |
| 2) ಉಪಾಧ್ಯಕ್ಷರು | **ಶ್ರೀ ಹೆಚ್.ಎಸ್. ಮಹೇಶ್,** ಉಪಾಧ್ಯಕ್ಷರಾಗಿರುತ್ತಾರೆ (ದಿನಾಂಕ:15.09.2021 ರಿಂದ ತಹಲ್‌ವರೆಗೆ) |
| 3) ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ | **ಶ್ರೀ ಆರ್. ರಾಘವೇಂದ್ರ,** ವ್ಯವಸ್ಥಾಪಕ ನಿರ್ದೇಶಕರು. (ದಿನಾಂಕ:31.05.2023ರ ವರೆಗೆ) **ಶ್ರೀಮತಿ ಜಯಂತಿ ಪಿ.ಎಂ.,** ಪ್ರಧಾನ ವ್ಯವಸ್ಥಾಪಕರು ಮತ್ತು ಪ್ರಭಾರ ವ್ಯವಸ್ಥಾಪಕ ನಿರ್ದೇಶಕರು (ದಿನಾಂಕ:01.06.2023 ರಿಂದ 24.07.2024 ವರೆಗೆ) **ಶ್ರೀ ಶ್ರೀಕಾಂತ್ ಬರುವೆ,** ವ್ಯವಸ್ಥಾಪಕ ನಿರ್ದೇಶಕರು (ದಿನಾಂಕ:24.07.2024 ರಿಂದ ತಹಲ್‌ವರೆಗೆ) |

## 4) ಶಾಖೆಗಳು ಮತ್ತು ಅವುಗಳ ವಿಳಾಸ

| ಶಾಖೆಯ ಹೆಸರು, ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ | ಶಾಖಾ ವ್ಯವಸ್ಥಾಪಕರು (ಸಂಪೂರ್ಣ ವಿಳಾಸ, ದೂರವಾಣಿ ಸಂಖ್ಯೆ.) | ಲೆಕ್ಕಪರಿಶೋಧನೆಯಲ್ಲಿ ಪರಿಶೀಲಿಸಿದ ದಾಖಲೆಗಳ ವಿವರ |
|---|---|---|
| 1) ಶಿವಮೊಗ್ಗ ಶಾಖೆ | **ಶ್ರೀಮತಿ ಪ್ರಭ ಕೆ.** ಹಿರಿಯ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್ ಸಾಗರ ರಸ್ತೆ, ಶಿವಮೊಗ್ಗ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 2) ಸಾಗರ ಶಾಖೆ | **ಶ್ರೀ ಚನ್ನಕೇಶವ ಸಿ.ಸಿ.** ಹಿರಿಯ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್ ಈಳಿ ರಸ್ತೆ, ಸಾಗರ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 3) ಹೊಸನಗರ ಶಾಖೆ | **ಶ್ರೀ ಗಣಪತಿ ಎಸ್.ಕೆ.** ಶಾಖಾ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್ ಹೊಸನಗರ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 4) ತೀರ್ಥಹಳ್ಳಿ ಶಾಖೆ | **ಶ್ರೀ ಅರವಿಂದ ಎ.** ಹಿರಿಯ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್, ಆಗುಂಬೆ ರಸ್ತೆ, ತೀರ್ಥಹಳ್ಳಿ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |

| | | |
|---|---|---|
| 5) ಕೊಪ್ಪ ಶಾಖೆ | **ಶ್ರೀ ಮಹೇಶ್ ಎಲ್.ವಿ.**<br>ಹಿರಿಯ ವ್ಯವಸ್ಥಾಪಕರು<br>ಮೇಲಿನ ಪೇಟೆ, ಕೊಪ್ಪ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 6) ಶೃಂಗೇರಿ ಶಾಖೆ | **ಶ್ರೀ ಪರಶುರಾಮ್ ಸಿ.ಆರ್.**<br>ಶಾಖಾ ವ್ಯವಸ್ಥಾಪಕರು<br>ಭಾರತಿಬೀದಿ ಶೃಂಗೇರಿ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 7) ಭದ್ರಾವತಿ ಶಾಖೆ | **ಶ್ರೀ ಮುರುಗೇಶ ಬಿ.ಎನ್.**<br>ಹಿರಿಯ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಚನ್ನಗಿರಿರಸ್ತೆ,ಭದ್ರಾವತಿ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 8) ಚನ್ನಗಿರಿ ಶಾಖೆ | **ಶ್ರೀ ಚನ್ನೇಶ ಸಿ.ಎಂ.**<br>ಶಾಖಾ ವ್ಯವಸ್ಥಾಪಕರು<br>ಎಪಿಎಂಸಿ ಯಾರ್ಡ್<br>ಚನ್ನಗಿರಿ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 9) ತರೀಕೆರೆ ಶಾಖೆ | **ಶ್ರೀಮತಿ ಪುಷ್ಪಲತಾ ಹೆಚ್.ಪಿ.**<br>ಹಿರಿಯ ವ್ಯವಸ್ಥಾಪಕರು<br>ಬಿ ಹೆಚ್‌ರಸ್ತೆ, ತರೀಕೆರೆ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |

| | | |
|---|---|---|
| 10) ಬೀರೂರು ಶಾಖೆ | **ಶ್ರೀಮತಿ ಪಲ್ಲವಿ ಆರ್.** ಶಾಖಾ ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್ ಬಿಹೆಚ್‌ರಸ್ತೆ, ಬೀರೂರು | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 11) ಶಿಕಾರಿಪುರ ಶಾಖೆ | **ಶ್ರೀ ಶ್ರೀನಿವಾಸ ಹೆಚ್.** ವ್ಯವಸ್ಥಾಪಕರು ಎಪಿಎಂಸಿ ಯಾರ್ಡ್ ಶಿಕಾರಿಪುರ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 12) ಸೊರಬ ಶಾಖೆ | **ಶ್ರೀ ಮಹೇಶ್ವರಪ್ಪ ಕೆ.** ಹಿರಿಯ ವ್ಯವಸ್ಥಾಪಕರು ಎಪಿಎಮ್‌ಸಿ ಯಾರ್ಡ್ ಸೊರಬ | ಅಗತ್ಯವಿರುವ ಲೆಕ್ಕಪತ್ರಗಳು, ಆವಕ-ಜಾವಕ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ವರ್ತಕರ ಖರೀದಿ ಮಿತಿ, ದಾಸ್ತಾನು, ಸುಸ್ತಿ ಸಾಲಗಳ ವಿವರ, ಸಾಲ ಮಂಜೂರಾತಿ ದಾಖಲೆಗಳು, ಠೇವಣಿ ಸಂಗ್ರಹಣೆ ಇತ್ಯಾದಿ. |
| 13) ಅಡಿಕೆ ಖರೀದಿ ಶಾಖೆ, ಶಿವಮೊಗ್ಗ | **ಶ್ರೀ ವಿಠಲ ಶೆಟ್ಟಿ,** ವ್ಯವಸ್ಥಾಪಕರು ಕೋಟೆರಸ್ತೆ, ಶಿವಮೊಗ್ಗ | ಅಗತ್ಯವಿರುವ ಲೆಕ್ಕಪತ್ರಗಳು, ಖರೀದಿ, ಮಾರಾಟ ಮತ್ತು ಶಿಲ್ಕಿನ ವಿವರ, ನಗದು ಮತ್ತು ಬ್ಯಾಂಕ್ ಶಿಲ್ಕು, ಬ್ಯಾಂಕ್ ಸಮನ್ವಯ ಪಟ್ಟಿ, ಸಾಗಾಣಿಕೆದಾರರು ಮತ್ತು ದಲ್ಲಾಲಿ ದಾರರ ದಾಖಲೆ, ಅಡಿಕೆ ಸಾರ್ಟಿಂಗ್ & ಗ್ರೇಡಿಂಗ್ ವಿವರ ಹಾಗೂ ಇತ್ಯಾದಿ |

**5) ಲೆಕ್ಕಪರಿಶೋಧನೆ ಮತ್ತು ಆಂತರಿಕ ಲೆಕ್ಕಪರಿಶೋಧನೆಗೆ ದಾಖಲೆಗಳನ್ನು ಒದಗಿಸಿದವರ ಹೆಸರು ಮತ್ತು ಹುದ್ದೆ**

| ಲೆಕ್ಕ ಪುಸ್ತಕಗಳನ್ನು ನಿರ್ವಹಿಸಿದವರ ಹೆಸರು/ಹುದ್ದೆ | | | |
|---|---|---|---|
| **ಕ್ರ. ಸಂ.** | **ಹೆಸರು** | **ಪದನಾಮ** | **ಕಛೇರಿ** |
| 1 | ಶ್ರೀ ಶ್ರೀಕಾಂತ್ ಬರುವೆ | ವ್ಯವಸ್ಥಾಪಕ ನಿರ್ದೇಶಕರು | ಕೇಂದ್ರ ಕಚೇರಿ |
| 2 | ಶ್ರೀಮತಿ ಜಯಂತಿ ಪಿ.ಎಂ. | ಪ್ರಧಾನ ವ್ಯವಸ್ಥಾಪಕರು | ಕೇಂದ್ರ ಕಚೇರಿ |
| 3 | ಶ್ರೀ ರಮಾನಂದ ವಿ.ಎಸ್. | ಹಿರಿಯ ಸಹಾಯಕರು | ಕೇಂದ್ರ ಕಚೇರಿ |

| | | | |
|---|---|---|---|
| 4 | ಶ್ರೀ ಭರತ್‌ಕುಮಾರ್ ಎಂ.ವಿ. | ಹಿರಿಯ ಸಹಾಯಕರು | ಕೇಂದ್ರ ಕಚೇರಿ |
| 5 | ಶ್ರೀಮತಿ ಪ್ರಭ ಕೆ. | ಹಿರಿಯ ವ್ಯವಸ್ಥಾಪಕರು | ಶಿವಮೊಗ್ಗ ಶಾಖೆ |
| 6 | ಶ್ರೀ ಅರವಿಂದ ಎ. | ಹಿರಿಯ ವ್ಯವಸ್ಥಾಪಕರು | ತೀರ್ಥಹಳ್ಳಿ ಶಾಖೆ |
| 7 | ಶ್ರೀ ಚನ್ನಕೇಶವ ಸಿ. ಸಿ. | ಹಿರಿಯ ವ್ಯವಸ್ಥಾಪಕರು | ಸಾಗರ ಶಾಖೆ |
| 8 | ಶ್ರೀ ಮಹೇಶ ಎಲ್. ವಿ. | ಹಿರಿಯ ವ್ಯವಸ್ಥಾಪಕರು | ಕೊಪ್ಪ ಶಾಖೆ |
| 9 | ಶ್ರೀ ಎಸ್. ಕೆ. ಗಣಪತಿ | ಶಾಖಾ ವ್ಯವಸ್ಥಾಪಕರು | ಹೊಸನಗರ ಶಾಖೆ |
| 10 | ಶ್ರೀ ಶ್ರೀನಿವಾಸ ಹೆಚ್. | ಹಿರಿಯ ವ್ಯವಸ್ಥಾಪಕರು | ಶಿಕಾರಿಪುರ ಶಾಖೆ |
| 11 | ಶ್ರೀ ಬಿ ಎನ್ ಮುರುಗೇಶ್ | ಹಿರಿಯ ವ್ಯವಸ್ಥಾಪಕರು | ಭದ್ರಾವತಿ ಶಾಖೆ |
| 12 | ಶ್ರೀಮತಿ ಪುಷ್ಪಲತಾ ಹೆಚ್.ಪಿ. | ಹಿರಿಯ ವ್ಯವಸ್ಥಾಪಕರು | ತರಿಕೆರೆ ಶಾಖೆ |
| 13 | ಶ್ರೀ ಮಹೇಶ್ವರಪ್ಪ ಕೆ. | ಹಿರಿಯ ವ್ಯವಸ್ಥಾಪಕರು | ಸೊರಬ ಶಾಖೆ |
| 14 | ಶ್ರೀ ಪರಶುರಾಮ್ ಸಿ.ಆರ್. | ಶಾಖಾ ವ್ಯವಸ್ಥಾಪಕರು | ಶೃಂಗೇರಿ ಶಾಖೆ |
| 15 | ಶ್ರೀ ಚನ್ನೇಶ್ ಸಿ.ಎಂ. | ಶಾಖಾ ವ್ಯವಸ್ಥಾಪಕರು | ಚನ್ನಗಿರಿ ಶಾಖೆ |
| 16 | ಶ್ರೀಮತಿ ಪಲ್ಲವಿ ಆರ್. | ಶಾಖಾ ವ್ಯವಸ್ಥಾಪಕರು | ಬೀರೂರು ಶಾಖೆ |
| 17 | ಶ್ರೀ ವಿಠ್ಠಲ ಶೆಟ್ಟಿ | ವ್ಯವಸ್ಥಾಪಕರು (ಒಪ್ಪಂದದ ಮೇರೆಗೆ) | ಖರೀದಿ ಶಾಖೆ |

**6) ಹಿಂದಿನ ಸಾಲಿನ ಲೆಕ್ಕ ಪರಿಶೋಧಕರ ವಿವರ :**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಶ್ರೀ ಕುಮಾರ ಜೆ.ಸಿ. |
| ಹುದ್ದೆ ಹಾಗೂ ವಿಳಾಸ | ಕುಮಾರ ಜೆ.ಸಿ. ಅಂಡ್ ಕೋ.<br>ಲೆಕ್ಕಪರಿಶೋಧಕರು, ನಂ.18, ಮೊದಲ ಮಹಡಿ<br>ದುರ್ಗಿಗುಡಿ ಕೋ–ಆಪರೇಟಿವ್ ಸೊಸೈಟಿ ಸಂಕೀರ್ಣ<br>ಪಾರ್ಕ್ ಎಕ್ಸ್‌ಟೆನ್‌ಶನ್, ಶಿವಮೊಗ್ಗ – 577 201 |
| ದೂರವಾಣಿ ಸಂಖ್ಯೆ. ಮಿಂಚಂಚೆ ವಿಳಾಸ (email id) | kumarajc@gmail.com<br>94802-80963 |
| ಎಂಪಾನಲ್‌ಮೆಂಟ್ ನಂಬರ್ | C-07/3/2014-15-15:59:47 |
| ಲೆಕ್ಕಪರಿಶೋಧನಾ ಅವಧಿ | 2022-23 |

**7) ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನೆಯ ವಿವರ:**

| | |
|---|---|
| ಲೆಕ್ಕಪರಿಶೋಧಕರ ಹೆಸರು | ಮಧುಕರ ಹೆಗಡೆ & ಕಂ. |
| ಹುದ್ದೆ ಹಾಗೂ ವಿಳಾಸ | 616/ಎ, 1ನೇ ಮಹಡಿ, 1ನೇ ಮುಖ್ಯರಸ್ತೆ, 2ನೇ ಹಂತ, ಇ ಬ್ಲಾಕ್, ರಾಜಾಜಿನಗರ–10, ಬೆಂಗಳೂರು |
| ದೂರವಾಣಿ ಸಂಖ್ಯೆ. ಮಿಂಚಂಚೆ ವಿಳಾಸ (email id) | madhukarhegdeandco@gmail.com 94481–51454 |
| ಎಂಪಾನಲ್‌ಮೆಂಟ್ ನಂಬರ್ | ಸಿ–27/2/2013 |
| ವಾರ್ಷಿಕ ಮಹಾಸಭೆಯ ನೇಮಕಾತಿ ದಿನಾಂಕ ಹಾಗೂ ಠರಾವು ಸಂಖ್ಯೆ/ನಿರ್ದೇಶಕರ ಆದೇಶ ಸಂಖ್ಯೆ ಮತ್ತು ದಿನಾಂಕ | ದಿನಾಂಕ:20–09–2023 ಠರಾವು ಸಂಖ್ಯೆ:14 |
| ಲೆಕ್ಕಪರಿಶೋಧನೆ ಆರಂಭದ ದಿನಾಂಕ | 05.04.2024 |
| ಲೆಕ್ಕಪರಿಶೋಧನೆ ಮುಕ್ತಾಯದ ದಿನಾಂಕ | 25.07.2024 |
| ಲೆಕ್ಕಪರಿಶೋಧನೆಗೆ ತೆಗೆದುಕೊಂಡ (ಮಾನವ) ದಿನಗಳು | 115 ಮಾನವ ದಿನಗಳು |
| ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿಯನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದ ದಿನಾಂಕ | ಕ್ರ.ಸಂ.814/2023–24 ದಿನಾಂಕ:25.09.2023 |

**8) ಲೆಕ್ಕ ಪರಿಶೋಧನಾ ವರ್ಗೀಕರಣ :**

(ನಿರ್ದೇಶಕರ ಲೆಕ್ಕ ಪರಿಶೋಧನಾ ಮಾರ್ಗಸೂಚಿ (Audit Instruction) ಕ್ರಮಸಂಖ್ಯೆಯೊಂದಿಗೆ ವಿಮರ್ಷಿಸಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು.)

| | |
|---|---|
| ಪ್ರಸಕ್ತ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | 'ಎ' |
| ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರ್ಗೀಕರಣ | 'ಎ' |

**ಆಂತರಿಕ/ಸಮವರ್ತಿ ಲೆಕ್ಕ ಪರಿಶೋಧನೆ ಬಗ್ಗೆ ವಿಮರ್ಶೆ :**

| | |
|---|---|
| 1) ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆಯೇ? | ಸಂಘದ ವ್ಯವಹಾರಕ್ಕನುಗುಣವಾಗಿ ಆಂತರಿಕ ಲೆಕ್ಕಪರಿಶೋಧನೆಗೆ ಕ್ರಮವಿಡಲಾಗಿದೆ. |
| 2) ಆಂತರಿಕ ಲೆಕ್ಕಪರಿಶೋಧನೆ ಕೈಗೊಂಡಿರುವ ಲೆಕ್ಕಪರಿಶೋಧಕರ ಹೆಸರು, ಹುದ್ದೆ ಹಾಗೂ ವಿಳಾಸ. | ಶ್ರೀ ಬಿ.ವಿ. ರವೀಂದ್ರನಾಥ್, ಸನ್ನದು ಲೆಕ್ಕಪರಿಶೋಧಕರು, ಸಾಗರ |

| | |
|---|---|
| 3) ಆಂತರಿಕ ಲೆಕ್ಕಪರಿಶೋಧನಾ ವರದಿಯನ್ನು ಪ್ರತಿ ತ್ರೈಮಾಸಿಕಕ್ಕೆ ನೀಡಲಾಗಿದೆಯೇ? | ಪ್ರತಿ ತ್ರೈಮಾಸಿಕಕ್ಕೆ ವರದಿಯನ್ನು ನೀಡಲಾಗಿದೆ. |
| 4) ಆಂತರಿಕ ಪರಿಶೋಧನಾ ವರದಿಯಲ್ಲಿ ಗುರುತಿಸಿರುವ ಗಂಭೀರ ನ್ಯೂನತೆಗಳು. | ಗಂಭೀರ ನ್ಯೂನತೆಗಳು ಇರುವುದಿಲ್ಲ. |
| 5) ಅವುಗಳನ್ನು ಸರಿಪಡಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ವಿವರ. | ಆಂತರಿಕ ಲೆಕ್ಕಪರಿಶೋಧನೆಯು ನಡೆದಿರುತ್ತದೆ. ಸಾಮಾನ್ಯ ನ್ಯೂನತೆಗಳನ್ನು ಗುರುತಿಸಿರುತ್ತಾರೆ. ವರದಿಗಳನ್ನು ಆಡಳಿತ ಮಂಡಳಿಗೆ ಸಲ್ಲಿಸಿರುತ್ತಾರೆ ಮತ್ತು ಅನುಪಾಲನಾ ವರದಿಯನ್ನು ನೀಡಲಾಗಿರುತ್ತದೆ. |
| 6) ಅಂತಹ ಗಂಭೀರ ಸ್ವರೂಪದ ನ್ಯೂನತೆಗಳು ಮುಂದುವರೆದಿದ್ದಲ್ಲಿ ಅವುಗಳನ್ನು ಶಾಸನಬದ್ಧ ಅಂತಿಮ ವರದಿಯಲ್ಲಿ ಅಳವಡಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |

**10) ಕರ್ನಾಟಕ ಸಹಕಾರ ಸಂಘಗಳ ನಿಯಮ 29 ರಲ್ಲಿ ನಿರ್ದಿಷ್ಟಪಡಿಸಿದಂತೆ ಈ ಕೆಳಕಂಡ ದಾಖಲೆಗಳು ಮತ್ತು ಪುಸ್ತಕಗಳನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರು ಪಡಿಸಿದ್ದಾರೆಯೇ?**

| | | |
|---|---|---|
| ಎ | ಸಹಕಾರಿಯ ಕಾರ್ಯನಿರ್ವಹಣೆ ಮತ್ತು ಸಾಮಾನ್ಯ ಮಾಹಿತಿಯ ತಃಖ್ತೆ | ಹೌದು |
| ಬಿ | ಸಹಕಾರಿ ವರ್ಷಾಂತ್ಯಕ್ಕೆ ಆಡಳಿತ ಮಂಡಳಿಯು ನಗದು ಮತ್ತು ದಾಸ್ತಾನು ಪರಿಶೀಲನೆ ಮಾಡಿದ ತಃಖ್ತೆ; | ಹೌದು |
| ಸಿ | ಬ್ಯಾಂಕ್ ತಾಳೆ ಮತ್ತು ಉಳಿಕೆ ಮೊಬಲಗು ದೃಢೀಕರಣ ತಃಖ್ತೆ; | ಹೌದು |
| ಡಿ | ಸದಸ್ಯತ್ವ ಮತ್ತು ಷೇರು ಷೆಡ್ಯೂಲು; | ಹೌದು |
| ಇ | ಆಡಳಿತ ಮಂಡಳಿಯ ಸದಸ್ಯರ ಮತ್ತು ನೌಕರರ ಪಟ್ಟಿ; | ಹೌದು |
| ಎಫ್ | ಸದಸ್ಯರಿಗೆ ಮತ್ತು ನಿರ್ದೇಶಕರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಜಿ | ನೌಕರರಿಗೆ ನೀಡಿರುವ ಸಾಲ ಮತ್ತು ಮುಂಗಡಗಳು; | ಹೌದು |
| ಹೆಚ್ | ತಗಾದೆ ವಸೂಲಿ ಮತ್ತು ಉಳಿಕೆ (ಬಾಕಿ) ತಃಖ್ತೆ; | ಹೌದು |
| ಐ | ಸುಸ್ತಿದಾರ ಸದಸ್ಯರ ಪಟ್ಟಿ; | ಹೌದು |
| ಜೆ | ಮತದಾನದ ಹಕ್ಕುಳ್ಳ ಸದಸ್ಯರ ಪಟ್ಟಿ; | ಹೌದು |
| ಕೆ | ಹೂಡಿಕೆಗಳ ಮತ್ತು ಅವುಗಳ ದೃಢೀಕರಣ ಷೆಡ್ಯೂಲುಗಳು; | ಹೌದು |
| ಎಲ್ | ಕರಡು ಮತ್ತು ಸಂದೇಹಾಸ್ಪದ ಸಾಲಗಳ ಷೆಡ್ಯೂಲುಗಳು; | ಹೌದು |
| ಎಂ | ಸಾಲ ದೃಢೀಕರಣ ತಃಖ್ತೆಗಳು; | ಹೌದು |
| ಎನ್ | ವರ್ಷದಲ್ಲಿ ಆಸ್ತಿಗಳಲ್ಲಿ ಹೂಡಿರುವ ಮೊಬಲಗಿನ ತಃಖ್ತೆ; | ಹೌದು |

| | | |
|---|---|---|
| ಒ | ಮೂರು ಅಥವಾ ಹೆಚ್ಚು ಆಡಳಿತ ಮಂಡಳಿಯ ಸಭೆಗಳಿಗೆ ಗೈರು ಹಾಜರಾದ ನಿರ್ದೇಶಕರುಗಳ ಷೆಡ್ಯೂಲು; | ಹೌದು |
| ಪಿ | ಮೂರು ಅಥವಾ ಹೆಚ್ಚು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ ಸದಸ್ಯರ ಷೆಡ್ಯೂಲು; | ಹೌದು |
| ಕ್ಯೂ | ಉಪವಿಧಿಗಳಲ್ಲಿ ಉಕ್ತವಾಗಿರುವ ಸದಸ್ಯರ ಹೊಣೆಗಾರಿಕೆಗಳನ್ನು ಪಾಲಿಸದ ಸದಸ್ಯರ ಷೆಡ್ಯೂಲು; | ಹೌದು |
| ಆರ್ | ಹಣ ದುರುಪಯೋಗ ಮತ್ತು ಆರ್ಥಿಕ ಅವ್ಯವಹಾರಗಳ ಪ್ರಕರಣಗಳ ತಃಖ್ತೆ; | ಹೌದು |
| ಎಸ್ | ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲ ಮುಂಗಡಗಳ ಷೆಡ್ಯೂಲು; | ಹೌದು |
| ಟಿ | ವ್ಯಾಜ್ಯ ಮತ್ತು ಜಾರಿ ಪ್ರಕರಣಗಳ ಷೆಡ್ಯೂಲು; | ಹೌದು |
| ಯು | ಮೀಸಲು ಇತರೆ ನಿಧಿಗಳ ಷೆಡ್ಯೂಲು; | ಹೌದು |
| ವ್ಹಿ | ಠೇವಣಿದಾರರ ಷೆಡ್ಯೂಲು; | ಹೌದು |
| ಡಬ್ಲ್ಯೂ | ಆಸ್ತಿ ಮತ್ತು ಸ್ವತ್ತುಗಳ ಷೆಡ್ಯೂಲು; | ಹೌದು |
| ಎಕ್ಸ್ | ಆಖೈರು ದಾಸ್ತಾನಿನ ಷೆಡ್ಯೂಲು; | ಹೌದು |
| ವೈ | ಉಪವಿಧಿಗಳಲ್ಲಿ ತಿಳಿಸಲಾಗಿರುವ ಉದ್ದೇಶಗಳಿಗೆ ಸಂಬಂಧಿಸಿದಂತೆ ಅವುಗಳನ್ನು ಎಷ್ಟರಮಟ್ಟಿಗೆ ಸಾಧಿಸಲಾಗಿದೆ ಎಂಬ ಷೆಡ್ಯೂಲು ವರ್ಗವಾರು; | ಹೌದು |
| ಝೆಡ್ | ಸದಸ್ಯರಿಗೆ ನೀಡಿರುವ ಸಾಲ ಮತ್ತು ಮುಂಗಡಗಳ ಷೆಡ್ಯೂಲು; | ಹೌದು |

**ನ್ಯೂನತೆಗಳು, ಅನುಪಾಲನೆಗಳು, ಶಾಸನಬದ್ಧ ಕಾರ್ಯಗಳ ನಿರ್ವಹಣೆ :**

**ಸಂಘವು ಹಿಂದಿನ ಸಾಲಿನ ವರದಿಯ ಬಗ್ಗೆ ಮತ್ತು ನ್ಯೂನತೆಗಳಿದ್ದಲ್ಲಿ ಅವುಗಳ ಅನುಪಾಲನಾ ಸ್ಥಿತಿಯ ಬಗ್ಗೆ ಟಿಪ್ಪಣಿ:**

1) **ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(10) ರಂತೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆಯೇ?**

   **ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸಿದ್ದಾರೆ.**

2) **ಸಲ್ಲಿಸಿದ್ದಲ್ಲಿ ಪತ್ರ ಸಂಖ್ಯೆ. ಕ್ರಸಂ. ಕೌನ್ಸಿಲ್ 810 ದಿನಾಂಕ: 23–09–2023 ರಂದು ವಿದ್ಯುಕ್ತವಾಗಿ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ.**

3) **ಗಂಭೀರ ಸ್ವರೂಪದ ನ್ಯೂನತೆಗಳು/ಆಕ್ಷೇಪಣೆಗಳು ಹಿಂದಿನ ಸಾಲಿನಿಂದ ಮುಂದುವರೆದಿದ್ದರೆ ಕೆಳಗಿನ ನಮೂನೆಯಲ್ಲಿ ವಿವರಿಸುವುದು.**

ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಗಂಭೀರ ಸ್ವರೂಪದ ಆಕ್ಷೇಪಣೆಗಳು ಯಾವುದೂ ಇರುವುದಿಲ್ಲ. ಆದರೆ ಹಿಂದಿನ ಸಾಲಿನಲ್ಲಿ ವರದಿಸಿದ್ದ ಇತರೆ ನ್ಯೂನ್ಯತೆಗಳು ಈ ಸಾಲಿನಲ್ಲಿ ಮುಂದುವರೆದಿದ್ದು ಅನುಬಂಧ–21 ರಲ್ಲಿ ವಿವರಿಸಿದೆ.

| ಕ್ರ.ಸ. | ಪುಟ ಸಂಖ್ಯೆ | ಕಂಡಿಕೆ ಸಂಖ್ಯೆ | ನ್ಯೂನತೆಯ ವಿವರ | ನೀಡಿದ ಸಮಜಾಯಿಷಿ | ಪ್ರಸ್ತುತ ಸ್ಥಿತಿ |
|---|---|---|---|---|---|
| 1 | **ಅನುಬಂಧ –21** | | | | |

**ಸಹಕಾರ ಸಂಘಕ್ಕೆ ಅನ್ವಯಿಸುವ ಕಾನೂನುಗಳ ಉಲ್ಲಂಘನೆ ಕುರಿತು**
**(ವರದಿ ಸಾಲಿನಲ್ಲಿ ಸಹಕಾರ ಕಾಯ್ದೆ ಕಾನೂನಿನ ಉಲ್ಲಂಘನೆ ಹಾಗೂ ಉಪವಿಧಿಗಳ ಉಲ್ಲಂಘನೆ ಇದ್ದಲ್ಲಿ ಸಂಕ್ಷಿಪ್ತವಾಗಿ ವಿವರಿಸಿ)**

| | | |
|---|---|---|
| 1 | ಸಹಕಾರಿ ಕಾಯ್ದೆ, ನಿಯಮಗಳ ಉಲ್ಲಂಘನೆ ಬಗ್ಗೆ ಟಿಪ್ಪಣಿ | ಸಹಕಾರಿ ಕಾಯ್ದೆ, ನಿಯಮಗಳ ಪಾಲನೆ ಸಾಮಾನ್ಯವಾಗಿ ಆಗಿರುತ್ತದೆ. |
| 2 | ಉಪವಿಧಿಗಳ ಉಲ್ಲಂಘನೆ ಬಗ್ಗೆ ವರದಿ | 1. ಸಹಕಾರಿ ಕಾಯ್ದೆಯ ಪ್ರಕಾರ ಆಪದ್ಧನ ನಿಧಿಯನ್ನು ನಿಗದಿತ ಠೇವಣಿಯಲ್ಲಿ ಗುಂತಾಯಿಸುವುದು ಅವಶ್ಯಕವಾಗಿರುತ್ತದೆ. ಆದರೆ ಸಂಘವು ಆಪದ್ಧನ ನಿಧಿಯನ್ನು ಸಂಪೂರ್ಣವಾಗಿ ವಿನಿಯೋಗಿಸದೆ ತನ್ನ ವ್ಯವಹಾರದಲ್ಲಿ ತೊಡಗಿಸಿರುತ್ತದೆ.<br>ಸಹಕಾರ ಸಂಘಗಳ ಅಪರ ನಿಬಂಧಕರ ಅನುಮತಿಯನ್ನು ಪಡೆದು ಕಟ್ಟಡ ನಿಧಿಗೆ ವರ್ಗಾಯಿಸಿದ ಆಪದ್ಧನ ನಿಧಿ ಹಣದಲ್ಲಿ ಭಾಗಶಃ ಮರುಪೂರಣ ಮಾಡಲಾಗಿದ್ದು, ಉಳಿದ ಹಣವನ್ನು ಮರುಪೂರಣ ಮಾಡಬೇಕಾಗಿರುತ್ತದೆ.<br>**ಸಮಜಾಯಿಷಿ: ಸಹಕಾರ ಸಂಘಗಳ ನಿಬಂಧಕರಿಂದ ಕಟ್ಟಡ ನಿರ್ಮಾಣ ಕಾಮಗಾರಿಗೆ ಮತ್ತು ನಿವೇಶನ ಖರೀದಿಗೆ ಒಟ್ಟು ರೂ.12.25 ಕೋಟಿ ಮೀಸಲು ನಿಧಿಯನ್ನು ಉಪಯೋಗಿಸಲು ಅನುಮತಿ ಪಡೆದಿದ್ದು, ಇದುವರೆಗೆ ರೂ.8.20 ಕೋಟಿ ಮರುಪೂರಣಗೊಂಡಿದ್ದು, ವರ್ಷಾಂತ್ಯಕ್ಕೆ ರೂ.4.05 ಕೋಟಿ ಮರುಪೂರಣ ಮಾಡಲು ಬಾಕಿ ಇರುತ್ತದೆ.**<br>2. ಬೈಲಾ ಕ್ರಮ ಸಂಖ್ಯೆ 16ರ ಪ್ರಕಾರ ಪ್ರತಿಯೊಬ್ಬ ಶೇರುದಾರನು ಸಂಸ್ಥೆಯೊಂದಿಗೆ ಕನಿಷ್ಟ ಅಡಿಕೆ ವಹಿವಾಟು ನಡೆಸುವುದು ಕಡ್ಡಾಯವಾಗಿದ್ದರು ಸಹ, ಒಟ್ಟು ಸದಸ್ಯರಲ್ಲಿ ಶೇ.45.05 ರಷ್ಟು ಸದಸ್ಯರು |

| | | |
|---|---|---|
| | | ವಹಿವಾಟು ನಡೆಸದೆ ಇರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಶಾಖಾ ವ್ಯವಸ್ಥಾಪಕರು ಸದಸ್ಯರನ್ನು ಭೇಟಿ ಮಾಡಿ ಬೈಲಾದ ಬಗ್ಗೆ ತಿಳುವಳಿಕೆ ನೀಡಿ, ವಹಿವಾಟು ನಡೆಸುವಂತೆ ಸದಸ್ಯರನ್ನು ಪ್ರೇರೇಪಿಸಬೇಕಾಗಿರುತ್ತದೆ. ಇಲ್ಲದಿದ್ದರೆ ಅಂತಹ ಸದಸ್ಯರು ಸಂಘದ ಸರ್ವಸದಸ್ಯರ ಸಭೆಯಲ್ಲಿ ಅಥವಾ ಆಡಳಿತ ಮಂಡಲಿ ಸದಸ್ಯರ ಚುನಾವಣೆಯಲ್ಲಿ ತಮ್ಮ ಮತ ನೀಡುವ ಹಕ್ಕನ್ನು ಒಂದು ವರ್ಷದ ಅವಧಿಗೆ ಕಳೆದುಕೊಳ್ಳುತ್ತಾರೆ.<br>**ಸಮಜಾಯಿಷಿ: ಪ್ರತಿ ವರ್ಷ ತಾಲ್ಲೂಕು ಮಟ್ಟದಲ್ಲಿ ಷೇರುದಾರರ ಸಮಾಲೋಚನಾ ಸಭೆಯನ್ನು ನಡೆಸಿ ಸದಸ್ಯರಿಗೆ ತಿಳಿವಳಿಕೆ ನೀಡಲಾಗಿರುತ್ತದೆ ಹಾಗೂ ಸದಸ್ಯರನ್ನು ಖುದ್ದು ಸಂಪರ್ಕಿಸಿ ವ್ಯವಹಾರವನ್ನು ಮುಂದುವರೆಸುವಂತೆ ಮನವರಿಕೆ ಮಾಡಲಾಗುತ್ತಿದೆ.**<br>3. ಸಂಘದ ಬೈಲಾ ಸಂಖ್ಯೆ 29ರ ಪ್ರಕಾರ ನಾಮಮಾತ್ರ ಸದಸ್ಯತ್ವವು ಸಂಘದೊಂದಿಗೆ ಹೊಂದಿದ ನಿರ್ದಿಷ್ಟ ಕೆಲಸ ಅಥವಾ ವ್ಯವಹಾರ ಕೊನೆಗೊಂಡ ತಕ್ಷಣ ಕೊನೆಗೊಳ್ಳತಕ್ಕದ್ದು ನಾಮ ಮಾತ್ರ ಸದಸ್ಯತ್ವ ಕೊನೆಗೊಂಡವನು ಪುನಃ ನಿಯಮಾನುಸಾರ ಹೊಸ ಸದಸ್ಯತ್ವ ಪಡೆಯಬೇಕಾಗಿರುತ್ತದೆ. ಈ ಕುರಿತು ಕ್ರಮವಿಡಲು ಸಲಹೆ ನೀಡಲಾಗಿದೆ. ಅದರಂತೆ ಸಂಘದ ಬೈಲಾ ಪ್ರಕಾರ ನಾಮಮಾತ್ರ ಸದಸ್ಯರನ್ನು ಸೇರಿಸಿಕೊಳ್ಳಲು ಕಾರ್ಯಕ್ಷೇತ್ರದ ಮಿತಿ ಇರುವುದಿಲ್ಲ. ಆದಾಗ್ಯೂ ಹೊರ ರಾಜ್ಯದ ವರ್ತಕರನ್ನು ನಾಮಮಾತ್ರ ಸದಸ್ಯರಾಗಿ ಸೇರ್ಪಡೆ ಮಾಡಿಕೊಂಡಿದ್ದನ್ನು ಗಮನಿಸಲಾಗಿದ್ದು, ಇದು ಕಾಯ್ದೆಯ ಉಲ್ಲಂಘನೆ ಯಾಗಿರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br>**ಸಮಜಾಯಿಷಿ: ಸಂಘದ ಬೈಲಾ 29(3)ರ ಪ್ರಕಾರ ನಾಮಮಾತ್ರ ಸದಸ್ಯತ್ವದ ಅವಧಿಯು ಸದಸ್ಯತ್ವ ಪಡೆದ ದಿನಾಂಕದಿಂದ ಮೂರು ವರ್ಷಗಳು ಅಥವಾ ಅವರು ಸಂಘದಲ್ಲಿ ಮಾಡುವ ವ್ಯವಹಾರ ಮುಕ್ತಾಯ ಗೊಳ್ಳುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಗೆ ಕೊನೆಗೊಳ್ಳಲಿದ್ದು, ಈ ಸದಸ್ಯತ್ವವು ಕೊನೆಗೊಂಡಲ್ಲಿ ಪುನಃ ನಿಯಮಾನುಸಾರ ಹೊಸ** |

| | | |
|---|---|---|
| | | **ಸದಸ್ಯತ್ವವನ್ನು ಪಡೆಯಲಾಗುತ್ತಿದೆ. ಸಂಘವು ರೈತ ಸದಸ್ಯರ ಅಡಿಕೆ ಖರೀದಿಸಿ ಉತ್ತರ ಭಾರತದ ಕಡೆ ಅಂದರೆ ಕೋಲ್ಕತ್ತಾ, ಲಕ್ನೋ. ಕಾನ್ಪುರ ಮುಂತಾದ ಕಡೆಗಳಲ್ಲಿ ಇರುವ ಏಜೆಂಟರಿಗೆ ಮಾರಾಟ ಮಾಡುತ್ತಿರುವುದರಿಂದ ವ್ಯವಹಾರಕ್ಕೋಸ್ಕರ ಅಂತಹ ಏಜೆಂಟರನ್ನು ನಾಮಮಾತ್ರ ಸದಸ್ಯರನ್ನಾಗಿ ಸೇರ್ಪಡೆ ಮಾಡಿಕೊಳ್ಳಲಾಗುತ್ತಿದ್ದು, ಲೆಕ್ಕಪರಿಶೋಧಕರ ಸಲಹೆ ಯನ್ನು ಗಮನದಲ್ಲಿಟ್ಟುಕೊಳ್ಳಲಾಗುವುದು.**<br>4. ಸದಸ್ಯರಿಗೆ ಷೇರು ಬಂಡವಾಳದ ಮೇಲಿನ ಲಾಭಾಂಶ: ಸಂಘದ ಉಪನಿಧಿ 86(ಎಫ್) ಪ್ರಕಾರ ಘೋಷಣೆ ಯಾದ ಮೂರು ತಿಂಗಳೊಳಗಾಗಿ ಸದಸ್ಯರಿಗೆ ಲಾಭಾಂಶ ಪಾವತಿಸತಕ್ಕದ್ದು. ಸಹಕಾರಿಯು ಲಾಭಾಂಶ ಪಾವತಿಸಿದ್ದು ಇನ್ನೂ ಕೆಲಸದಸ್ಯರು ಬಂಡವಾಳದ ಮೇಲಿನ ಲಾಭಾಂಶ ಪಡೆಯಬೇಕಾಗಿರುತ್ತದೆ.<br>**ಸಮಜಾಯಿಷಿ: ಲಾಭಾಂಶ ಪಡೆಯುವ ಬಗ್ಗೆ ಸದಸ್ಯರಿಗೆ ಸಂಘದ ವಾರ್ಷಿಕ ವರದಿ ಪುಸ್ತಕದಲ್ಲಿ ಮತ್ತು ದಿನಚರಿಯಲ್ಲಿ ಮುದ್ರಿಸುವ ಮೂಲಕ ಹಾಗೂ ಎಸ್.ಎಂ.ಎಸ್. ಮೂಲಕ ತಿಳಿಸಲಾಗುತ್ತಿದೆ.** |
| 3 | ನಿಬಂಧಕರ/ ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಲಾಗಿದೆಯೇ? ಅಳವಡಿಸಿಕೊಳ್ಳಲಾಗಿದೆಯೆ? ಅನುಸರಿಸಲಾಗುತ್ತಿದೆಯೆ? | ನಿಬಂಧಕರ/ನಿರ್ದೇಶಕರ ಇಲಾಖೆಯ ಸೂಚನೆ, ಸುತ್ತೋಲೆಗಳ ಅಂಶಗಳನ್ನು ಗಮನಿಸಿ ಅಳವಡಿಸಿಕೊಂಡು ಅನುಸರಿಸಲಾಗುತ್ತಿದೆ. |
| 4 | ಸಂಯುಕ್ತ ಸಹಕಾರಿ ಅಥವಾ ಆರ್.ಬಿ.ಐ ನಿರ್ದೇಶನಗಳ ಹಾಗೂ ಮಾರ್ಗಸೂಚಿಗಳ ಅನುಸರಣೆ | ಸಂಘಕ್ಕೆ ನಬಾರ್ಡ್ ಅಥವಾ ಆರ್.ಬಿ.ಐ. ನಿರ್ದೇಶನಗಳು ಹಾಗೂ ಮಾರ್ಗಸೂಚಿಗಳು ಅನ್ವಯಿಸುವುದಿಲ್ಲ. |

# ಭಾಗ–2

# ಸಂಘದ ಆರ್ಥಿಕ ವ್ಯಾವಹಾರಿಕ ವಿವರಗಳು

**ದಿನಾಂಕ 31–03–2024ರಲ್ಲಿರುವಂತೆ ಸದಸ್ಯತ್ವದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಸದಸ್ಯತ್ವ | ಸರಕಾರಿ ಸದಸ್ಯತ್ವ | | ಸಾಮಾನ್ಯ ಸದಸ್ಯತ್ವ | | ಸಹ ಸದಸ್ಯತ್ವ | | ನಾಮ ಮಾತ್ರ ಸದಸ್ಯತ್ವ | |
|---|---|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| 1) ವರ್ಷಾರಂಭದಲ್ಲಿ ಇದ್ದ ಸದಸ್ಯರು | – | – | 29,710 | 28,369 | 27 | 25 | 7,125 | – |
| 2) ಹೊಸದಾಗಿ ಸದಸ್ಯತ್ವ ಪಡೆದವರು | – | – | 1,772 | 1,728 | – | 2 | 1,277 | – |
| 3) ಸದಸ್ಯತ್ವದಿಂದ ಕಡಿಮೆ ಆದವರು | – | – | 344 | 387 | – | – | – | – |
| 4) ವರ್ಷಾಂತ್ಯಕ್ಕೆ ಇರುವ ಸದಸ್ಯರು | – | – | 31,138 | 29,710 | 27 | 27 | 8,402 | 7,125 |

**13(ಎ) ಸದಸ್ಯತ್ವದ ಬಗ್ಗೆ ವಿಮರ್ಶೆ :**

| | |
|---|---|
| 1) ಸಂಘದಲ್ಲಿ ಇರುವ ಸಹ ಸದಸ್ಯರು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಕಲಂ 18(1) ರ ಮಿತಿಯಲ್ಲಿ (15%) ಇದೆಯೇ? ಉಲ್ಲಂಘನೆ ಇದ್ದಲ್ಲಿ ವಿಮರ್ಶಿಸಿ. | ಸಂಘದಲ್ಲಿರುವ ಸಹ ಸದಸ್ಯರ ಸಂಖ್ಯೆ ಒಟ್ಟು ಸದಸ್ಯರ ಶೇ.15 ಕ್ಕಿಂತ ಕಡಿಮೆ ಇದ್ದು, ಇದು ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ 1959 ರ ಕಲಂ 18(1) ರ ಮಿತಿಯಲ್ಲಿ ಇರುತ್ತದೆ. ನಾಮಮಾತ್ರ ಸದಸ್ಯರ ಸಂಖ್ಯೆ ವರ್ಷಾಂತ್ಯಕ್ಕೆ 8402 ಇದ್ದು ಸದರಿ ಸಾಲಿನಲ್ಲಿ 1,277 ಸದಸ್ಯರು ಸೇರ್ಪಡೆಯಾಗಿದ್ದಾರೆ. |
| 2) ಒಂದು ವೇಳೆ ಸದರಿ ಪ್ರಮಾಣ 15 ಪ್ರತಿಶತಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಅಂತಹ ಸದಸ್ಯರು ಕಲಂ 16 ರನ್ವಯ ಕ್ರಮಬದ್ಧ ಸದಸ್ಯತ್ವ ಹೊಂದಲು ಅರ್ಹವಿದ್ದಲ್ಲಿ ಅಂತಹ ಸಹ ಸದಸ್ಯರನ್ನು ಕ್ರಮಬದ್ಧ ಸದಸ್ಯರೆಂದು ಮಾಡಿಕೊಳ್ಳಲು ಅಥವಾ ಅವರನ್ನು ಸಹ ಸದಸ್ಯತ್ವದಿಂದ ತೆಗೆದು ಹಾಕುವುದು ವರದಿಯಲ್ಲಿ ಸೂಚಿಸುವುದು. | ಅನ್ವಯಿಸುವುದಿಲ್ಲ. |

| | |
|---|---|
| 3) ಎಲ್ಲ ಸದಸ್ಯರಿಂದ ಕೆ.ವೈ.ಸಿ. ದಾಖಲಾತಿಗಳನ್ನು ಪಡೆದಿರುವುದರ ಬಗ್ಗೆ ಹಾಗೂ ಗುರುತಿನ ಚೀಟಿಗಳನ್ನು ನೀಡಿರುವ ಬಗ್ಗೆ ವಿಮರ್ಶಿಸುವುದು. | ಕೆವೈಸಿ ದಾಖಲಾತಿಗಳನ್ನು ಸಂಘದ ಸದಸ್ಯರಿಂದ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ವರ್ಷಾಂತ್ಯಕ್ಕೆ ಪರಿಶೀಲಿಸಲಾಗಿ ಒಟ್ಟು ಸದಸ್ಯರಿಗೆ ಹೋಲಿಸಿದಲ್ಲಿ ಶೇ.80% ಹಾಗು ಪ್ರಸಕ್ತ ಸಾಲಿನಲ್ಲಿ ಸಂಘದಲ್ಲಿ ವ್ಯವಹಾರ ನಡೆಸುತ್ತಿರುವ ಸದಸ್ಯರ ಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡಲ್ಲಿ ಶೇ.100%ರಷ್ಟು ಸದಸ್ಯರಿಂದ ದಾಖಲೆಗಳನ್ನು ಪಡೆಯಲಾಗಿರುವುದನ್ನು ಗಮನಿಸಿದೆ. |
| 4) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 122 ರನ್ವಯ ಸದಸ್ಯರ ರಿಜಿಸ್ಟರ ಪೂರ್ಣ ವಿವರಗಳೊಂದಿಗೆ ಬರೆದಿಡಲಾಗಿದೆಯೇ? ಇಲ್ಲದಿದ್ದಲ್ಲಿ ವಿಮರ್ಶಿಸಿ. | ಸದಸ್ಯರ ರಿಜಿಸ್ಟರ್ ಪೂರ್ಣ ವಿವರಗಳೊಂದಿಗೆ ಬರೆದಿಡಲಾಗಿದ್ದನ್ನು ಗಮನಿಸಲಾಗಿದೆ. ಸದಸ್ಯರ ರಿಜಿಸ್ಟರ್‌ನಲ್ಲಿ ಸದಸ್ಯರ ಸಹಿ ಇರುವುದಿಲ್ಲ. ಪರಂತು ಸದಸ್ಯರ ಸಹಿ ಒಳಗೊಂಡ ಸಂಪೂರ್ಣ ವಿವರವನ್ನು ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಲಾಗಿದೆ. |

**13(ಬಿ) ಸಂಘದ ಸದಸ್ಯರೊಡನೆ ಕೈಗೊಂಡ ವ್ಯವಹಾರಗಳಲ್ಲಿ ಇರುವ ನ್ಯೂನತೆಗಳ ಬಗ್ಗೆ ವಿಮರ್ಶೆ :**

| | | |
|---|---|---|
| 1 | ನಿಯತ ಸದಸ್ಯರು ಸಂಘದ ವ್ಯವಹಾರಗಳಲ್ಲಿ ತೊಡಗಿಸಿಕೊಂಡ ಬಗ್ಗೆ ಟಿಪ್ಪಣಿ | ಸಂಘದಲ್ಲಿ ವರದಿ ಸಾಲಿನ ಅಂತ್ಯಕ್ಕೆ 31165 ಜನ ಸದಸ್ಯರಿದ್ದು, ಅದರಲ್ಲಿ 16822 ಜನ ಸದಸ್ಯರು ಉಪವಿಧಿ ಪ್ರಕಾರ ವ್ಯವಹಾರವನ್ನು ನಡೆಸಿರುತ್ತಾರೆ. 303 ಜನ ಸದಸ್ಯರು ಉಪವಿಧಿಯಲ್ಲಿ ನಿಗದಿಪಡಿಸಿದ ಮಿತಿಗಿಂತ ಕಡಿಮೆ ವ್ಯವಹಾರವನ್ನು ನಡೆಸಿರುತ್ತಾರೆ. ಉಳಿದ 14050 ಜನ ಸದಸ್ಯರು ಉಪವಿಧಿ ಪ್ರಕಾರ ಯಾವುದೇ ವ್ಯವಹಾರವನ್ನು ನಡೆಸಿರುವುದಿಲ್ಲ. ವ್ಯವಹಾರ ನಡೆಸಿದ ಸದಸ್ಯರ ಪ್ರಮಾಣ ಶೇ.54.99 ಇದ್ದು, ವ್ಯವಹಾರ ನಡೆಸದೇ ಇರುವ ಸದಸ್ಯರ ಸಂಖ್ಯೆ ಶೇ.45.05 ಇದ್ದು ಈ ಕುರಿತು ಕ್ರಮವಿಡಲು ಸೂಚಿಸಿದೆ.<br><br>**ಸಮಜಾಯಿಷಿ: ದಿನಾಂಕ 31-03-2022ಕ್ಕೆ ಇದ್ದಂತೆ ಸಂಘದಲ್ಲಿ ಹಿಂದಿನ 5 ವರ್ಷಕ್ಕೂ ಹೆಚ್ಚು ಕಾಲ ವ್ಯವಹರಿಸದ 5537 ಸದಸ್ಯರಿಗೆ ನೋಂದಣಿ ಅಂಚೆ ಮೂಲಕ ಪತ್ರ ಬರೆದಿದ್ದು, ತತ್ಪರಿಣಾಮವಾಗಿ ಇದರಲ್ಲಿ 399 ಸದಸ್ಯರು ಪುನಃ ಸಂಘದಲ್ಲಿ ಅಡಿಕೆ ಹಾಕಿ ವ್ಯವಹರಿಸಿರುತ್ತಾರೆ. 180 ಸದಸ್ಯರ ಷೇರು ಖಾತೆ ಮುಕ್ತಾಯಗೊಂಡಿದ್ದು, 3611 ಸದಸ್ಯರು ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.** |

| | | |
|---|---|---|
| | | **1347 ಮೃತ ಪ್ರಕರಣಗಳಿದ್ದು, ಇದರಲ್ಲಿ 58 ಸುಸ್ತಿ ಪ್ರಕರಣಗಳನ್ನು ಹೊರತುಪಡಿಸಿ ದಿನಾಂಕ:30-05-2024ರ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ಉಳಿದ 1289 ಮೃತ ಸದಸ್ಯರ ಪ್ರಕರಣಗಳನ್ನು ಮುಕ್ತಾಯಗೊಳಿಸಿ ಅಮಾನತ್ತು ಖಾತೆಗೆ ವರ್ಗಾಯಿಸಲಾಗಿದೆ. ಅಮಾನತ್ತು ಖಾತೆಗೆ ವರ್ಗಾಯಿಸಿದ ಪ್ರಕರಣಗಳಲ್ಲಿ ವಾರಸುದಾರರು ಸೂಕ್ತ ದಾಖಲೆಗಳೊಂದಿಗೆ ಪಾವತಿಗೆ ಕೋರಿಕೆ ಸಲ್ಲಿಸಿದ್ದಲ್ಲಿ ಅಗತ್ಯ ಕ್ರಮವಿಡಲಾಗುವುದು. ಹಾಗೆಯೇ, ಸಂಘದ ವಾರ್ಷಿಕ ವರದಿ ಪುಸ್ತಕದಲ್ಲಿ ಮತ್ತು ದಿನಚರಿಯಲ್ಲಿ ಕಡ್ಡಾಯವಾಗಿ ಸಂಘಕ್ಕೆ ಅಡಿಕೆ ಹಾಕಿ ವ್ಯವಹರಿಸುವಂತೆ ಮುದ್ರಿಸುತ್ತಿರುವುದಲ್ಲದೆ, ಸಂಘದ ಷೇರುದಾರರ ಸಮಾಲೋಚನಾ ಸಭೆಗಳಲ್ಲಿ ಈ ಬಗ್ಗೆ ಸದಸ್ಯರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.** |
| 2 | ಸದಸ್ಯೇತರರೊಂದಿಗಿನ ವ್ಯವಹಾರಗಳ ಬಗ್ಗೆ ಟಿಪ್ಪಣಿ | ಸದಸ್ಯೇತರರೊಂದಿಗಿನ ಯಾವುದೇ ವ್ಯವಹಾರಗಳು ಇರುವುದಿಲ್ಲ. |
| 3 | ಸಂಘದ ಕಾರ್ಯಕ್ಷೇತ್ರ ಮೀರಿ ಮಾಡಿಕೊಂಡಿರುವ ಸದಸ್ಯರ ಸಂಖ್ಯೆ ಮತ್ತು ವ್ಯವಹಾರಗಳ ವಿವರ | ವ್ಯಾಪ್ತಿ ಮೀರಿ 'ಎ' ತರಗತಿ ಸದಸ್ಯರೊಂದಿಗೆ ನಡೆಸಿದ ವ್ಯವಹಾರಗಳಿರುವುದಿಲ್ಲ. |

**14) ಷೇರು ಬಂಡವಾಳ ಬಗ್ಗೆ ವಿಮರ್ಶೆ :**

**ದಿನಾಂಕ 31-03-2024 ಕ್ಕೆ ಇರುವಂತೆ ಸಂಘದ ಸಂದಾಯವಾದ ಷೇರು ಬಂಡವಾಳದ ವಿವರ ಈ ಕೆಳಕಂಡಂತೆ ಇರುತ್ತದೆ.**

| ಷೇರು ಬಂಡವಾಳ | ಸರಕಾರಿ ಷೇರು | | ಸಾಮಾನ್ಯ ಸದಸ್ಯರ ಷೇರು | | ಸಹ ಸದಸ್ಯರ ಷೇರು | |
|---|---|---|---|---|---|---|
| | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು | ಪ್ರಸಕ್ತ ಸಾಲು | ಹಿಂದಿನ ಸಾಲು |
| ವರ್ಷಾರಂಭದಲ್ಲಿದ್ದಂತೆ | – | – | 8,11,40,330 | 7,93,36,710 | 2,700 | 2,500 |
| ಪ್ರಸಕ್ತ ಸಾಲಿನಲ್ಲಿನ ಜಮಾ | – | – | 80,13,800 | 34,50,120 | – | 200 |
| ಪ್ರಸಕ್ತ ಸಾಲಿನಲ್ಲಿನ ಖರ್ಚು | – | – | 15,38,880 | 16,46,500 | – | – |
| ಸಾಲಾಖೈರಿಗೆ ಇದ್ದಂತೆ | – | – | 8,76,15,250 | 8,11,40,330 | 2,700 | 2,700 |

| | |
|---|---|
| **ಎ) ಸರಕಾರದ ಷೇರು ಬಂಡವಾಳದ ಬಗ್ಗೆ ವಿಮರ್ಶೆ:** ಸರ್ಕಾರದಿಂದ ಷೇರುಧನ ಪಡೆದಿದ್ದಲ್ಲಿ ಮಂಜೂರಾತಿ ಆದೇಶ ಸಂಖ್ಯೆ, ಷರತ್ತುಗಳು ಮತ್ತು ಮರುಪಾವತಿಯ ಅವಧಿ, ವಿಧಾನ, ಬಡ್ಡಿದರ, ದಂಡ ಮುಂತಾದವುಗಳ ಬಗ್ಗೆ ವಿವರ ನೀಡುವುದು ಮತ್ತು ಅವುಗಳ ಪಾಲನೆ ಆಗಿರುವ ಬಗ್ಗೆ ವಿಮರ್ಶಿಸುವುದು. | ಸರ್ಕಾರದ ಷೇರು ಬಂಡವಾಳವಿರುವುದಿಲ್ಲ. |

| **ಬಿ) ಸಂದಾಯವಾದ ಷೇರು ಬಂಡವಾಳದ ಬಗ್ಗೆ ವಿಮರ್ಶೆ** | |
|---|---|
| 1) ಸದಸ್ಯರಿಂದ ವಸೂಲಿಸಿದ ಷೇರಿನ ಮೊತ್ತವು ಸಂಘದ ಉಪ ನಿಯಮ ಭಾಗ–3 ಸಂಖ್ಯೆ 7(ಎ) (1)ರನ್ವಯ ಷೇರಿನ ಮುಖ ಬೆಲೆಗೆ ಅನುಗುಣವಾಗಿ ಇದೆಯೇ? | ಸಂಘದ ಉಪವಿಧಿಯ ಭಾಗ–3 ಸಂಖ್ಯೆ 7(ಎ)ರ ಪ್ರಕಾರ ಸಂಘದ ಪ್ರತಿ ಷೇರಿನ ಮೌಲ್ಯವು ರೂ.100/– ಗಳಿದ್ದು ಕನಿಷ್ಠ 5 ಷೇರುಗಳನ್ನು ಸದಸ್ಯರಿಗೆ ನೀಡಲಾಗುತ್ತಿದ್ದು, 3 ಜನ ಸದಸ್ಯರು ಭಾಗಶಃ ಷೇರು ಬಂಡವಾಳವನ್ನು ಹೊಂದಿರುತ್ತಾರೆ.<br>ಹಾಗೂ 'ಎ' ತರಗತಿಯ ಸದಸ್ಯರಿಗೆ ಗರಿಷ್ಠ ರೂ.20,000/– ಷೇರು ಬಂಡವಾಳ ಮಿತಿಯನ್ನು ನಿಗದಿಪಡಿಸಲಾಗಿದೆ. ದಿನಾಂಕ:19/09/2018 ರ ಸಾಮಾನ್ಯ ಸಭೆಯಲ್ಲಿ ವಿಷಯ ಸಂಖ್ಯೆ 31 ರಂತೆ ಸಂಘದ ಅಧಿಕೃತ ಷೇರು ಬಂಡವಾಳದ ಮಿತಿಯನ್ನು ರೂ.15.00 ಕೋಟಿಗಳವರೆಗೆ ನಿಗದಿಪಡಿಸಲಾಗಿದೆ.<br>**ಸಮಜಾಯಿಷಿ: ಭಾಗಶಃ ಷೇರು ಬಂಡವಾಳವನ್ನು ಹೊಂದಿದ 3 ಪ್ರಕರಣಗಳು ಮೃತ ಸದಸ್ಯರ ಪ್ರಕರಣಗಳಾಗಿದ್ದು, ದಿನಾಂಕ 30–05–2024ರ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇರೆಗೆ ಅಮಾನತ್ತು ಖಾತೆಗೆ ವರ್ಗಾವಣೆಗೊಂಡ 1289 ಮೃತ ಸದಸ್ಯರ ಪ್ರಕರಣಗಳಲ್ಲಿ ಈ 3 ಪ್ರಕರಣಗಳು ಸೇರಿದ್ದರಿಂದ ಪ್ರಸ್ತುತ ಸಂಘದಲ್ಲಿ ಯಾವುದೇ ಭಾಗಶಃ ಷೇರು ಇರುವುದಿಲ್ಲ.** |
| 2) ಎಷ್ಟು ಸದಸ್ಯರಿಗೆ ಷೇರು ಪ್ರಮಾಣ ಪತ್ರ ನೀಡಲಾಗಿದೆ? | ಎಲ್ಲಾ ಸದಸ್ಯರುಗಳಿಗೆ ಷೇರು ಪ್ರಮಾಣಪತ್ರ ನೀಡಲಾಗಿದ್ದು, ಸದಸ್ಯರ ರಿಜಿಸ್ಟರ್‌ನಲ್ಲಿ ಬರೆದಿಡಲಾಗಿದೆ. |

| | |
|---|---|
| 3) ನಾಮ ಮಾತ್ರ ಸದಸ್ಯರಿಂದ ಕಲಂ 18(1) ಹಾಗೂ ಸಂಘದ ಉಪನಿಯಮ ಭಾಗ–3 ಸಂಖ್ಯೆ 7(ಎ)(4)ರಂತೆ ವಸೂಲಿಸಿದ ನಾಮ ಮಾತ್ರ ಸದಸ್ಯರ ಶುಲ್ಕ ಸಂಘದ ಲಾಭ ಹಾನಿ ಖಾತೆಗೆ ವರ್ಗಾಯಿಸಲಾಗಿದೆಯೇ? | ವರದಿ ಸಾಲಿನಲ್ಲಿ 1277 ಜನ ನಾಮ ಮಾತ್ರ ಸದಸ್ಯರಿಂದ ವಸೂಲಿಸಿದ ರೂ.1,27,700/– ನಾಮ ಮಾತ್ರ ಸದಸ್ಯರ ಶುಲ್ಕ ಸಂಘದ ಲಾಭ ಹಾನಿ ಖಾತೆಗೆ ವರ್ಗಾಯಿಸಲಾಗಿದೆ. |
| ಸಿ) ಪ್ರತಿಯೊಂದು ಷೇರು ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳವಾರು ಪಟ್ಟಿಯ ಮೊತ್ತ ಅಡಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ಸದಸ್ಯರ ಷೇರು ಖಾತೆ ಗಣಕೀಕೃತವಾಗಿದ್ದು, ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ. ಕುಳುವಾರು ಪಟ್ಟಿ ತಯಾರಿಸಿದ್ದು, ಅದು ಅಡಾವೆ ಮೊತ್ತಕ್ಕೆ ತಾಳೆಯಿರುತ್ತದೆ. |
| ಡಿ) ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಮೊತ್ತ | ಯಾವುದೇ ವ್ಯತ್ಯಾಸ ಇರುವುದಿಲ್ಲ. |
| ಇ) ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ, ಮತ್ತು ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು.) | ಲೆಕ್ಕ ಪರಿಶೋಧನಾ ಅವಧಿಯಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿರುವುದಿಲ್ಲ. |
| ಎಫ್) ವರ್ಷಾಂತ್ಯದ ಷೇರು ಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ದೃಢೀಕರಿಸಿ ಅದರ ಸಂಕ್ಷಿಪ್ತವನ್ನು ಈ ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | (see table below) |
| ಜಿ) ಸಂಘದಲ್ಲಿ ಗಣಕೀಕೃತ ವ್ಯವಸ್ಥೆ ಇದ್ದಲ್ಲಿ ವರ್ಷಾಂತ್ಯದ ಷೇರು ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ, ಪರಿಶೀಲಿಸಿ ಅದನ್ನು ದೃಢೀಕರಿಸಿ ಸಂಘಕ್ಕೆ ನೀಡುವುದು. | |

| ವಿವರ | ಹಿಂದಿನ ಸಾಲಿನ | ಪ್ರಸಕ್ತ ಸಾಲಿನ |
|---|---|---|
| ಖಾತೆಗಳ ಸಂಖ್ಯೆ | 29,710 | 31,138 |
| ಅಢಾವೆ ಮೊತ್ತ | 8,11,40,330 | 8,76,15,250 |
| ಕುಳುವಾರು ಮೊತ್ತ | 8,11,40,330 | 8,76,15,250 |
| ಅಂತರ ರೂ. | – | – |

**15) ಮೀಸಲು ನಿಧಿ ಮತ್ತು ಇತರೆ ನಿಧಿಗಳು :**

<table>
<tr><td>1</td><td>ಸಂಘದಲ್ಲಿರುವ ಮೀಸಲು ನಿಧಿಯನ್ನು ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಿಲಾಗಿದೆಯೇ? ಪ್ರತ್ಯೇಕವಾಗಿ ಗುಂತಾಯಿಸದೆ ಇದ್ದಲ್ಲಿ ಸಹಕಾರ ಸಂಘಗಳ ನಿಬಂಧಕರ ಅನುಮತಿ ಪಡೆದಿದ್ದಾರೆಯೇ? ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ ಆಗಿದೆಯೇ? ಇಲ್ಲದಿದ್ದಲ್ಲಿ ಅವಧಿ ಸಮೇತ ಕಾರಣ ತಿಳಿಸಿ.</td><td>ಸಂಘದಲ್ಲಿರುವ ಮೀಸಲು ನಿಧಿಯಲ್ಲಿ ಭಾಗಶಃವನ್ನು ಮಾತ್ರ ಸಹಕಾರಿ ಸಂಘಗಳ ನಿಯಮ 23 ರಂತೆ ಪ್ರತ್ಯೇಕವಾಗಿ ಗುಂತಾಯಿಸಲಾಗಿದೆ.<br><br>ಒಟ್ಟು ಆಪದ್ಧನ ನಿಧಿ ವರ್ಷಾಂತ್ಯಕ್ಕೆ ರೂ.22,58,75,091.04 ಇದ್ದು ಈ ನಿಧಿಯಲ್ಲಿ ಗುಂತಾಯಿಸಿದ ಬಾಬ್ತು ರೂ.19,77,80,000.00 ಗಳು ಮಾತ್ರ ಇರುತ್ತದೆ. ಉಳಿದ ರೂ.2,80,95,091.04 ಗಳನ್ನು ಸಹಕಾರಿಯು ತನ್ನ ವ್ಯವಹಾರದಲ್ಲಿ ತೊಡಗಿಸಿಕೊಂಡಿದೆ. ಗುಂತಾವಣಿಯ ಮೇಲಿನ ಬಡ್ಡಿ ಸಾಲಾಖ್ಯೆರಿಗೆ ಸಂಘಕ್ಕೆ ಜಮಾ ಆಗಿದೆ.</td></tr>
<tr><td>2</td><td>ನಿಧಿಗಳ ನಿಯೋಜನೆ ಮಾಡುವಾಗ ಕಾಯ್ದೆ ಪ್ರಕರಣ 58ರ ಅಂಶಗಳನ್ನು ಪಾಲಿಸಲಾಗಿದೆಯೆ?</td><td>ಪಾಲಿಸಲಾಗಿದೆ.<br><br><u>ಆಪದ್ಧನ ನಿಧಿ:</u><br><table><tr><th>ವಿವರ</th><th>ಮೊತ್ತ (ರೂ.)</th></tr><tr><td>ದಿನಾಂಕ 31.03.2023ಕ್ಕೆ</td><td>20,92,22,884.22</td></tr><tr><td>2022–23ನೇ ಸಾಲಿನ ಲಾಭ ವಿಲೇವಾರಿ</td><td>1,11,11,362.00</td></tr><tr><td>ಮೂರು ವರ್ಷ ಮೇಲ್ಪಟ ಪಾವತಿಯಾಗದ ಡಿವಿಡೆಂಡ್ ಮೊತ್ತ</td><td>26,67,336.00</td></tr><tr><td>2023–2024 ಸಾಲಿನಲ್ಲಿ ಲಾಭ / ನಷ್ಟದ ತ:ಖ್ತೆಯಿಂದ</td><td>20,00,000.00</td></tr><tr><td>ನಿಷ್ಕ್ರಿಯ ಖಾತೆಗಳಿಂದ</td><td>6,62,874.82</td></tr><tr><td>ವಾಹನ ಮಾರಾಟದಿಂದ ಬಂದ ಲಾಭ</td><td>2,10,634.00</td></tr><tr><td>– ಆಪದ್ಧನ ನಿಧಿಯಿಂದ ಕಟ್ಟಡ ನಿಧಿಗೆ ವರ್ಗಾಯಿಸಿದ್ದು</td><td>–</td></tr><tr><td>ದಿನಾಂಕ 31.03.2024ಕ್ಕೆ</td><td>22,58,75,091.04</td></tr></table><br><u>ಸಿಬ್ಬಂದಿ ಕ್ಷೇಮ ನಿಧಿ:</u> ವರದಿ ಸಾಲಿನಲ್ಲಿ ಸಿಬ್ಬಂದಿ ಕ್ಷೇಮನಿಧಿಯಿಂದ ರೂ.10,000.00 ಸಂಘದ ನಿಯಮದಂತೆ ಮೃತ ಸಿಬ್ಬಂದಿ ಕುಟುಂಬದವರಿಗೆ ಪಾವತಿಸಲಾಗಿದೆ.</td></tr>
</table>

| | | |
|---|---|---|
| | | **ಸಿಬ್ಬಂದಿ ಮರಣ ಪರಿಹಾರ ನಿಧಿ:** ವರದಿ ಸಾಲಿನಲ್ಲಿ ಸಿಬ್ಬಂದಿ ಮರಣ ಪರಿಹಾರ ನಿಧಿಯಿಂದ ಸಂಘದ ನಿಯಮದ ಪ್ರಕಾರ ನಿವೃತ್ತಿ ಹೊಂದಿದ ನೌಕರರಿಗೆ ರೂ.24,170.00 ಮತ್ತು ಮರಣ ಹೊಂದಿದ ನೌಕರರ ಕುಟುಂಬಕ್ಕೆ ರೂ.610.00 ಪಾವತಿಸಲಾಗಿದೆ.<br><br>**ಸದಸ್ಯರ ಕ್ಷೇಮ ನಿಧಿ:** ವರದಿ ಸಾಲಿನಲ್ಲಿ ಸದಸ್ಯರ ಕ್ಷೇಮ ನಿಧಿಯಿಂದ ಅಡಿಕೆ ಮೊಬಲಗಿನ ಬೋನಸ್, ಗಟಾರ್ ಸ್ಪ್ರೇಯರ್, ಅಸ್ತ್ರ ಒಲೆ, ಡ್ರೈಯರ್‌ಗಳ ಮೇಲೆ ರಿಯಾಯಿತಿ ಮತ್ತು ಸದಸ್ಯರ ಆರೋಗ್ಯ ವಿಮೆಯ ಮೇಲಿನ ಜಿ.ಎಸ್.ಟಿ ಸೇರಿದಂತೆ ಒಟ್ಟು ರೂ.91,17,000.30 ಪಾವತಿಸಲಾಗಿದೆ. ಸದರಿ ನಿಧಿಯಿಂದ ಕರ್ನಾಟಕ ರಾಜ್ಯ ಅಡಿಕೆ ಸಹಕಾರ ಸಂಘಗಳ ಸಹಕಾರ ಮಹಾ ಮಂಡಳ ನಿ., ಶಿವಮೊಗ್ಗ ಇವರಿಗೆ ರೂ.2,69,680.00 ಕಾನೂನು ಹೋರಾಟಕ್ಕೆ ಪಾವತಿಸಲಾಗಿದೆ.<br><br>**ಸವಕಳಿ ನಿಧಿ:** ಸಂಸ್ಥೆಯ ಚರ ಮತ್ತು ಸ್ಥಿರಾಸ್ತಿಗಳ ಮೇಲೆ “ಇಳಿಕೆ ಕ್ರಮಾಂಕದಲ್ಲಿ” (written down value) ವಿಧಾನದಲ್ಲಿ ಕಟ್ಟಡ, ಪೀಠೋಪಕರಣ, ವಾಹನ ಮತ್ತು ಯಂತ್ರೋಪಕರಣಗಳ ಮೇಲೆ ಸವಕಳಿ ತೆಗೆದು ನಷ್ಟದ ಖಾತೆಗೆ ವರ್ಗಾಯಿಸಿ, ಸವಕಳಿ ನಿಧಿಯನ್ನು ಕಾಯ್ದಿರಿಸಿಕೊಳ್ಳಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ (ಅನುಬಂಧ–12) ರಲ್ಲಿ ಕಂಡಂತೆ ರೂ.2,27,20,196.00 ಕಾಯ್ದಿರಿಸಲಾಗಿದೆ. ಈ ನಿಧಿಯಲ್ಲಿ ದಿನಾಂಕ 31.03.2024ಕ್ಕೆ ಒಟ್ಟು ರೂ.18,59,84,534.48 ಶಿಲ್ಕು ಇರುತ್ತದೆ.<br><br>ಸಂಸ್ಥೆಯ ಚರ ಮತ್ತು ಸ್ಥಿರಾಸ್ತಿಗಳ ಮೇಲೆ ರಿಟನ್‌ಡೌನ್ ವ್ಯಾಲ್ಯು (written down value) ವಿಧಾನದಲ್ಲಿ ಸವಕಳಿ ತೆಗೆದಿರಿಸಲಾಗಿದೆ. ಸಂಘದ ಆಸ್ತಿ ಜವಾಬ್ದಾರಿ ತಃಖ್ತೆ ಪ್ರಕಾರ ಸಂಘದ ಚರ ಮತ್ತು ಸ್ಥಿರಾಸ್ತಿಯ (ನಿವೇಶನ ಹೊರತುಪಡಿಸಿ) ಮೂಲ ಮೌಲ್ಯ ರೂ. 37,44,73,306.21 ಇದ್ದು, ಈ ಮೌಲ್ಯದಲ್ಲಿ |

| | | |
|---|---|---|
| | | ಸವಕಳಿ ಮೊತ್ತವನ್ನು ಕಳೆದಲ್ಲಿ ಚರ ಮತ್ತು ಸ್ಥಿರಾಸ್ತಿಯ (ನಿವೇಶನ ಹೊರತುಪಡಿಸಿ) ಮೌಲ್ಯ (written down value) ರೂ.18,58,41,512.17 ಇರಬೇಕಿದ್ದು, ಸಂಘದ ಸವಕಳಿ ನಿಧಿಯ ಮೌಲ್ಯ ರೂ.18,59,84,534.48 ಗಳಿರುತ್ತದೆ. ಆದಕಾರಣ ಸವಕಳಿ ನಿಧಿಯಲ್ಲಿ ರೂ.1,43,022.31 ಹೆಚ್ಚಿರುವುದು ಕಂಡುಬರುತ್ತದೆ. ಈ ಮೊಬಲಗು ಹಿಂದಿನ ಸಾಲಿನಿಂದಲೂ ಮುಂದು ವರೆದಿರುತ್ತದೆ. ಸಂಘದಲ್ಲಿನ ಆಸ್ತಿವಾರು ಸವಕಳಿಯ ನಿಧಿಯ ವಿವರ ಲಭ್ಯವಿರುವುದಿಲ್ಲ. ಸವಕಳಿ ನಿಧಿ ಯಲ್ಲಿರುವ ವ್ಯತ್ಯಾಸವನ್ನು ಸಮತೋಲನಗೊಳಿಸಲು ಆಡಳಿತ ಮಂಡಳಿಯಲ್ಲಿ ನಿರ್ಧಾರ ಕೈಗೊಂಡು ಹೆಚ್ಚು ಉಳಿದಿರುವ ಮೊತ್ತವನ್ನು ಮೀಸಲು ನಿಧಿಗೆ ವರ್ಗಾಯಿಸಲು ಕ್ರಮವಿಡುವಂತೆ ಸಲಹೆ ನೀಡಲಾಗಿದೆ.<br><br>**ಸಮಜಾಯಿಷಿ: ಆಡಳಿತ ಮಂಡಳಿಯಲ್ಲಿ ಚರ್ಚಿಸಿ ಅಗತ್ಯ ಕ್ರಮವಿಡಲಾಗುವುದು.** |
| 3 | ಸಂಘವು ಕರ್ನಾಟಕ ಸಹಕಾರಿ ಸಂಘಗಳ ನಿಯಮ 23(2) ರನ್ವಯ ತನ್ನ ಕಾಯ್ದಿಟ್ಟ ನಿಧಿಯನ್ನು ಅಥವಾ ಅದರ ಒಂದು ಭಾಗವನ್ನು ನಿಬಂಧಕರ ಆದೇಶದನ್ವಯ ಸ್ವಂತ ವ್ಯಾಪಾರಕ್ಕಾಗಿ ಅಥವಾ ಸಂಘದ ಕಟ್ಟಡ ನಿರ್ಮಾಣ ಅಥವಾ ಖರೀದಿಗಾಗಿ ಅಥವಾ ಭೂಮಿಗಳ ಖರೀದಿಯಲ್ಲಿ ತೊಡಗಿಸಲು ಅನುಮತಿ ಪಡೆದಿದ್ದಲ್ಲಿ, ಸದರಿ ಆದೇಶದ ಶರತ್ತುಗಳ ಹಾಗೂ ಅವುಗಳ ಪಾಲನೆಯ ಕುರಿತು ವಿಮರ್ಷಿಸುವುದು. | ಸಂಸ್ಥೆಯ ಬೈಲಾ ಸಂಖ್ಯೆ ಭಾಗ–14/86 (ಎ)3ರ ಪ್ರಕಾರ ಕಟ್ಟಡ ನಿಧಿಗೆ ಶೇ.20ರಷ್ಟು ಮೀರದ ಮೊತ್ತವನ್ನು ತೆಗೆದಿರಿಸಬೇಕಿರುತ್ತದೆ. ಪ್ರಸಕ್ತ ಸಾಲಿನಲ್ಲಿ 2022–23ರ ಲಾಭಾಂಶದಿಂದ 20% ರಂತೆ ರೂ.64,91,119.00 ಜಮಾ ಬಂದಿರುತ್ತದೆ. ಸಾಲಾಂತ್ಯಕ್ಕೆ ಕಟ್ಟಡ ನಿಧಿಯಲ್ಲಿ ರೂ.26,14,14,388.04 ಇರುತ್ತದೆ. ಈ ನಿಧಿಯಲ್ಲಿರುವ ಮೊಬಲಗನ್ನು ಕಟ್ಟಡ ನಿರ್ಮಾಣ ಮತ್ತು ನಿವೇಶನ ಖರೀದಿಗೆ ಉಪಯೋಗಿಸಿದ್ದು, ಕಟ್ಟಡ ಮತ್ತು ನಿವೇಶನಗಳ ಒಟ್ಟು ಮೌಲ್ಯ ದಿನಾಂಕ: 31/03/2024 ಕ್ಕೆ ರೂ.30,02,98,877.97 ಗಳಾಗಿರುತ್ತದೆ.<br>ಆಪದ್ಧನ ನಿಧಿಯಿಂದ ಅಪರ ನಿಬಂಧಕರ ಅನುಮತಿ ಪಡೆದು ಕಟ್ಟಡ ನಿಧಿಗೆ ವರ್ಗಾಯಿಸಿದ ಮೊತ್ತದಲ್ಲಿ ರೂ.4,05,50,000.00 ಗಳನ್ನು ಆಪದ್ಧನ ನಿಧಿಗೆ ಮರುಪೂರಣ ಮಾಡಲು ಬಾಕಿ ಉಳಿದಿದ್ದು ಈ ಮೊತ್ತವನ್ನು ಆದಷ್ಟು ಶೀಘ್ರದಲ್ಲಿ ಆಪದ್ಧನ ನಿಧಿಗೆ ಮರುಪೂರಣ ಮಾಡಲು ಸೂಚಿಸಲಾಗಿದೆ.<br><br>**ಸಮಜಾಯಿಷಿ: ಲಾಭದ ಪ್ರಮಾಣಕ್ಕನುಗುಣವಾಗಿ ಪ್ರತಿ ವರ್ಷ ಹಂತಹಂತವಾಗಿ ಮರುಪೂರಣ ಮಾಡಲಾಗುತ್ತಿದೆ.** |

| | | |
|---|---|---|
| 4 | ಈ ಮೇಲಿನಂತೆ ವಿನಿಯೋಗಿಸಿದ ಕಾಯ್ದಿಟ್ಟ ನಿಧಿಯ ಮೊತ್ತ ಹಾಗೂ ಸ್ಥಿರಾಸ್ತಿಯಲ್ಲಿ ವಿನಿಯೋಗಿಸಿದ ಕಟ್ಟಡ ನಿಧಿಯ ಮೊತ್ತವನ್ನು ಸಂಘದ ಸಾಲ ಜಿಂದಗಿ (Balance Sheet) ತಖ್ತೆಯ ಸಂಬಂಧಿಸಿದ ನಿಧಿಯ ಕೆಳಗೆ ಒಳಗಿನ ಅಂಕಣದಲ್ಲಿ (Inner Column) ಕಡ್ಡಾಯವಾಗಿ ನಮೂದಿಸುವುದು. | ನಮೂದಿಸಲಾಗಿದೆ. |
| 5 | ಸಂಘವು ಸಹಕಾರ ಶಿಕ್ಷಣ ನಿಧಿಯ ವಂತಿಗೆಯನ್ನು ಪಾವತಿಸಿದೆಯೆ? ಸಹಕಾರ ಶಿಕ್ಷಣ ನಿಧಿಯನ್ನು ಪಾವತಿಸುವ ಮೊದಲೇ ಸಂಘದ ಸದಸ್ಯರಿಗೆ ಡಿವಿಡೆಂಡ್ ಹಂಚಿ ಸಹಕಾರ ಸಂಘಗಳ ಕಾಯಿದೆ ಕಲಂ 57(4)(ಬಿ)ಯ ಉಲ್ಲಂಘನೆಯಾಗಿದೆಯೇ? | ಬೈಲಾ ಪ್ರಕಾರ ಲಾಭಾಂಶದಲ್ಲಿ ಶೇ.2 ರಂತೆ ವರದಿ ಸಾಲಿನಲ್ಲಿ ರೂ.6,62,359.96 ತೆಗೆದಿರಿಸಿ ಸಹಕಾರ ಮಹಾಮಂಡಲ ಬೆಂಗಳೂರು, ಇವರಿಗೆ ಪಾವತಿಸಲಾಗಿದೆ. ಸಹಕಾರ ಸಂಘಗಳ ಕಾಯಿದೆ ಕಲಂ57(4)(ಬಿ)ಯ ಉಲ್ಲಂಘನೆಯಾಗಿರುವುದಿಲ್ಲ. |

**16) ಹೂಡಿಕೆಗಳು :**

**ದಿನಾಂಕ 31–03–2024 ಕ್ಕೆ ಸಂಘವು ರೂ20,33,79,023.00 ಹೂಡಿಕೆಗಳು ಹೊಂದಿರುತ್ತದೆ.**

| | |
|---|---|
| 1. ಹೂಡಿಕೆಗಳ ಅಂತಿಮ ಶಿಲ್ಕು ಆಯಾ ಸಂಸ್ಥೆಯವರು ನೀಡಿರುವ ಶಿಲ್ಕು ದೃಢೀಕರಣ ಪತ್ರಗಳಿಗೆ ತಾಳೆಯಾಗಿರುತ್ತದೆಯೆ? | ತಾಳೆಯಾಗಿರುತ್ತದೆ. |
| 2. ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆಯೆ? | ನಿಧಿಗಳ ನಿಯೋಜನೆಗೆ ಸೂಕ್ತ ಮಾರ್ಗದರ್ಶಿ ಸೂತ್ರಗಳನ್ನು ರಚಿಸಲಾಗಿದೆ. |
| 3. ನಿಧಿಗಳಲ್ಲಿನ ಹೂಡಿಕೆಗಳು ಕಾಯ್ದೆಗನುಗುಣವಾಗಿದೆಯೇ? | ಕಾಯ್ದೆಗನುಗುಣವಾಗಿದೆ. |
| 4. ಸದರಿ ಹೂಡಿಕೆಗಳ ಮೇಲಿನ ಲಾಭಾಂಶ, ಕಾಲಕಾಲಕ್ಕೆ ಸಂಘಕ್ಕೆ ಜಮಾ ಆಗಿದೆಯೇ? | ಹೂಡಿಕೆಗಳ ಮೇಲಿನ ಲಾಭಾಂಶ ಕಾಲ ಕಾಲಕ್ಕೆ ಸಂಘಕ್ಕೆ ಜಮಾ ಆಗಿರುತ್ತದೆ. |

| | |
|---|---|
| 5. ಹೂಡಿಕೆಗಳ ನಿರ್ವಹಣೆ ಬಗ್ಗೆ ಟಿಪ್ಪಣಿ | **ಸಂಘದಿಂದ ತೊಡಗಿಸಿದ ಠೇವಣಿಗಳ ಮೇಲಿನ ಬಡ್ಡಿ ವಿವರ :**<br><br>**ವಿನಿಯೋಗಗಳ ಮೇಲೆ ಟಿಪ್ಪಣಿ:** ಸಂಸ್ಥೆಯು ಎ.ಪಿ.ಎಂ.ಸಿ. ಯವರಿಂದ ಲೈಸನ್ಸ್ ಪಡೆಯುವ ಸಲುವಾಗಿ ಶಾಖೆಗಳಿಗೆ ಸಂಬಂಧಿಸಿದಂತೆ ಆಯಾ ಶಾಖೆಗಳಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕರ್ನಾಟಕ ಬ್ಯಾಂಕ್‌ಗಳಲ್ಲಿ ಠೇವಣಿ ಇರಿಸಿದ್ದು, ಪ್ರಸಕ್ತ ಸಾಲಿನ ಅಂತ್ಯಕ್ಕೆ ಒಟ್ಟು ರೂ.5,99,023.00ಗಳ ಮೊತ್ತದ ಠೇವಣಿ ಪತ್ರಗಳನ್ನು ಆಧಾರವಾಗಿ ಸಂಬಂಧಿಸಿದ ಎ.ಪಿ.ಎಂ.ಸಿ. ಯವರಿಗೆ ನೀಡ ಲಾಗಿದೆ. ಅಲ್ಲದೆ ಜಿಲ್ಲಾ ಸಹಕಾರ ಬ್ಯಾಂಕ್ ಆಪದ್ಧನ ನಿಧಿ ವಿನಿಯೋಗ ರೂ.2,77,80,000.00, ಯೂನಿಯನ್ ಬ್ಯಾಂಕ್ ಆಪದ್ಧನ ನಿಧಿ ರೂ.17,00,00,000.00 ಇದ್ದು ಈ ವಿನಿಯೋಗದ ಮೇಲೆ ರೂ.2,28,31,226.00 ಬಡ್ಡಿ ಜಮಾ ಬಂದಿರುತ್ತದೆ. ಕಳೆದ ಸಾಲಿನ ಅಂತ್ಯಕ್ಕೆ ಒಟ್ಟು ಹೂಡಿಕೆಗಳು ರೂ.23.54 ಕೋಟಿ ಇದ್ದು, ವರದಿ ಸಾಲಿನ ಅಂತ್ಯಕ್ಕೆ ರೂ.20.34 ಕೋಟಿ ಆಗಿದ್ದು ಹೂಡಿಕೆಯಲ್ಲಿ ಶೇ.13.59 ಇಳಿಕೆಯಾಗಿರುತ್ತದೆ. ಮೇಲೆ ತಿಳಿಸಿದ ಹೂಡಿಕೆ ಯಲ್ಲಿ ರೂ.50,00,000.00 ಶಿವಮೊಗ್ಗ ಶಾಖೆಯಲ್ಲಿ ಪಾರಿತೋಷಕ ಠೇವಣಿ ಎಂದು ನಿಗದಿತ ಠೇವಣಿಯಲ್ಲಿ ಹೂಡಿಕೆ ಮಾಡಲಾಗಿದ್ದು, ಇದನ್ನು ಹೂಡಿಕೆ ಎಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಸದರಿ ಹೂಡಿಕೆಯನ್ನು ವ್ಯವಹಾರದಿಂದ ಹೊರತುಪಡಿಸಿ ಅನುಸೂಚಿತ ಬ್ಯಾಂಕಿನಲ್ಲಿ ಹೂಡುವುದು ಸೂಕ್ತವಾಗಿರುತ್ತದೆ.<br><br>**ಸಮಜಾಯಿಷಿ: ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು.** |

**ಇತರೆ ಸಂಘ ಸಂಸ್ಥೆಗಳಲ್ಲಿ ಪಾಲು ಬಂಡವಾಳ:** ಸಂಸ್ಥೆಯು ದಿನಾಂಕ:31–03–2024ರ ಅಂತ್ಯಕ್ಕೆ ಆಸ್ತಿ ಜವಾಬ್ದಾರಿ ತಃಖ್ತೆಯಲ್ಲಿ ಆಸ್ತಿ ಕಡೆ ತೋರಿಸಿರುವಂತೆ ರೂ.53,91,100–00 ಗಳ ಪಾಲು ಬಂಡವಾಳವನ್ನು ವಿವಿಧ ಸಂಸ್ಥೆಗಳಲ್ಲಿ ಹೊಂದಿರುತ್ತದೆ. ಮೇಲ್ಕಂಡ ಪಾಲು ಬಂಡವಾಳಗಳ ಪೈಕಿ ಈ ಕೆಳಕಂಡ ಸಂಸ್ಥೆಗಳಿಂದ ಮಾತ್ರ ಲಾಭಾಂಶ ಬಂದಿದ್ದು, ಉಳಿದ ಯಾವುದೇ ಸಂಘ ಸಂಸ್ಥೆಗಳಲ್ಲಿ ತೊಡಗಿಸಿದ ಪಾಲು ಬಂಡವಾಳ ಸಂಬಂಧ ಯಾವುದೇ ಲಾಭಾಂಶ ಬಂದಿರುವುದಿಲ್ಲ.

| ಕ್ರ.ಸಂ | ಸಂಸ್ಥೆಯ ಹೆಸರು | ಪಾಲು ಬಂಡವಾಳ | ಬಂದ ಲಾಭಾಂಶ |
|---|---|---|---|
| 1 | ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ | 45,000 | 6,750 |
| 2 | ಇಫ್ಕೋ, ನವದೆಹಲಿ | 10,000 | 4,000 |
| 3 | ಕ್ಯಾಂಪ್ಕೋ. ಮಂಗಳೂರು | 25,00,000 | – |
| 4 | ಹಾಪ್ಕೋಸ್. ನಿ ಹಾಸನ | 1,000 | 120 |
| 5 | ಕೇಂದ್ರ ಉಗ್ರಾಣ ಸಂಸ್ಥೆ | 5,000 | 12,371 |
| 6 | ಜಿಲ್ಲಾ ಸಹಕಾರ ಬ್ಯಾಂಕ್ | 1,05,000 | 4,200 |
| 7 | ಕರ್ನಾಟಕ ರಾಜ್ಯ ವಿಮಾ ಸಹಕಾರ ಸಂಘ ನಿ., | 25,000 | – |
| 8 | ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳ | 1,00,000 | 20,000 |
| 9 | ಕೋಮಾರ್ಕ ಹಾಸನ | 25,000 | – |
| 10 | ಬೆಳಗಾಂಕ್ರೀಡಾ ಪ್ರೋತ್ಸಾಹ &ಅಭಿವೃದ್ಧಿ ಸಹಕಾರ ನಿ., | 50,000 | – |
| 11 | ಜಿಲ್ಲಾ ಸಹಕಾರ ಮಾರಾಟ ಮಂಡಳಿ | 25,000 | – |
| 12 | ಕರ್ನಾಟಕ ರಾಜ್ಯ ಅಡಿಕೆ ಮಾರಾಟ ಸಹಕಾರ ಮಂಡಳ | 25,00,000 | – |
| 13 | ಶಾರದಾ ವಿವಿಧೋದ್ದೇಶ ಸೌಹಾರ್ದಸಹಕಾರ ಸಂಘ | 100 | – |
| | **ಒಟ್ಟು** | **53,91,100** | **47,441** |

| | |
|---|---|
| 6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಯೆ? ಹೊಂದಿದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ (ಶೇರು ಮತ್ತು ಭದ್ರತಾ ಪತ್ರಗಳಲ್ಲಿ ಹೊರತುಪಡಿಸಿ) ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿರುವುದಿಲ್ಲ. |
| 7. ಸಂಘವು ವಿನಿಯೋಗಿಸಿರುವ ಸಂಸ್ಥೆ/ಬ್ಯಾಂಕುಗಳು ನಿಷ್ಕ್ರಿಯ ಅಥವಾ ಅವಸಾನಗೊಂಡಿದ್ದಲ್ಲಿ ಹೂಡಿಕೆಗಳನ್ನು ಹಿಂಪಡೆಯಲು ಸೂಚಿಸುವುದು. | ಸಂಘವು ಈ ಮೇಲೆ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ.<br>**ಸಮಜಾಯಿಷಿ: ಪರಿಶೀಲಿಸಿ, ಅಗತ್ಯ ಕ್ರಮವಿಡಲಾಗುವುದು.** |
| 8. ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ | ಕ್ರಮ ಸಂಖ್ಯೆ 5 ರಲ್ಲಿ ವಿವರಿಸಿದಂತೆ ಆದಾಯ ಬಾರದೇ ಇರುವ ಖಾತೆಗಳನ್ನು ಸಮಾಪ್ತಿಗೊಳಿಸಲು ಸೂಚಿಸಿದೆ.<br>**ಸಮಜಾಯಿಷಿ: ಪರಿಶೀಲಿಸಿ, ಅಗತ್ಯ ಕ್ರಮವಿಡಲಾಗುವುದು.** |
| 9. ಕೋರಿಕೆಯ ಮೇರೆಗೆ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಸಂಘವು ಯಾವುದೇ ಹೂಡಿಕೆಯನ್ನು ಮರಳಿ ಪಡೆಯಲು ಈವರೆಗೆ ಕೋರಿಕೆ ನೀಡಿಲ್ಲ. ಹಾಗಾಗಿ ಯಾವುದೇ ಅವಕಾಶ ಕಲ್ಪಿಸಲಾಗಿಲ್ಲ. |
| 10. ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯ ಇದೆಯೇ? ಲೆಕ್ಕಪರಿಶೋಧನಾ ಕಾಲಕ್ಕೆ ಪರಿಶೀಲಿಸಿ ಪ್ರತಿಯೊಂದು ವಿನಿಯೋಗಗಳ ವರ್ಷಾಂತ್ಯದ ದೃಢೀಕರಣವನ್ನು ವರದಿಗೆ ಲಗತ್ತಿಸುವುದು. | ಸಂಘವು ವರ್ಷಾಂತ್ಯಕ್ಕೆ ಹೊಂದಿರುವ ಎಲ್ಲ ಗುಂತಾವಣಿಗಳ ಮೂಲ ದಾಖಲಾತಿಗಳು ಸಂಘದಲ್ಲಿ ಲಭ್ಯವಿರುತ್ತವೆ. |

## 17) ಹೊರಗಿನಿಂದ ಪಡೆದ ಸಾಲಗಳು, ಮುಂಗಡಗಳು ಹಾಗೂ ಸರಕಾರದ ಸಾಲಗಳು:

| | |
|---|---|
| ಸಂಘವು ಹೊರಗಿನಿಂದ ಪಡೆದ ಸಾಲಗಳು / ಮುಂಗಡಗಳು ಉಪನಿಯಮದ ಮಿತಿಯಲ್ಲಿ ಇರುವುದರ ಬಗ್ಗೆ ಅಥವಾ ಮಿತಿಮೀರಿ ಇರುವ ಬಗ್ಗೆ ಅಂಕಿ-ಅಂಶಗಳಂತೆ ವಿಮರ್ಶಿಸುವುದು. | ಸಹಕಾರಿಯ ಬೈಲಾ ಕ್ರಮ ಸಂಖ್ಯೆ 9ರ ಪ್ರಕಾರ ಸಂಘದ ಸಾಮಾನ್ಯ ನಿಕಾಯ ಪ್ರತಿ ವರ್ಷ ಸಾಮಾನ್ಯ ಸಭೆಯಲ್ಲಿ ನಿರ್ಧರಿಸುವ ಮಿತಿಗೊಳಪಟ್ಟು, ಸದಸ್ಯರಿಂದ ಮತ್ತು ಇತರರಿಂದ ಪಡೆಯುವ ಠೇವಣಿ ಮತ್ತು ಹೊರಗಿನ ವ್ಯಕ್ತಿ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆಯುವ ಸಾಲಗಳ ಒಟ್ಟು ಮೊತ್ತ, ಸಂಘದ ಪಾವತಿಯಾದ ಷೇರುಧನ, ಸಂಚಿತ ಕಾಯ್ದಿರಿಸಿದ ನಿಧಿ ಮತ್ತು ಕಟ್ಟಡ ನಿಧಿಯ ಒಟ್ಟು ಮೊತ್ತದಲ್ಲಿ, ಕೂಡಿ ಬಿದ್ದ ನಷ್ಟವಿದ್ದಲ್ಲಿ ಅದನ್ನು ಕಳೆದು ಉಳಿಯುವ ಮೊಬಲಗಿನ ಮೂವತ್ತು ಪಟ್ಟಿಗಿಂತ ಜಾಸ್ತಿ ಇರತಕ್ಕದ್ದಲ್ಲ. ಆದರೆ, ಮೇಲ್ಕಂಡ ಮಿತಿ ಏನೇ ಆಗಿದ್ದರೂ, ಸಂಘದ ಸಾಮಾನ್ಯ ನಿಕಾಯವು, ಸಾಮಾನ್ಯ ಸಭೆಯಲ್ಲಿ ಗೊತ್ತುಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಪತ್ತಿನ ಏಜೆನ್ಸಿಯಿಂದ ಸಾಲ ತೆಗೆದುಕೊಳ್ಳಲು ಅನುಮತಿ ನೀಡುವ ಅಧಿಕಾರ ಹೊಂದಿರುತ್ತದೆ.<br><br>ದಿನಾಂಕ 20.09.2023ರ ಸಾಮಾನ್ಯ ಸಭೆ ವಿಷಯ ಸಂಖ್ಯೆ 30ರ ಅನ್ವಯ 2023-24ನೇ ಸಾಲಿಗೆ ಠೇವಣಿಗಳ ಮೊತ್ತವನ್ನು ರೂ.250 ಕೋಟಿ ಹಾಗು ಸಾಲದ ಮೊತ್ತ ರೂ.200 ಕೋಟಿವರೆಗೆ ಪಡೆಯುವ ಅನುಮತಿಯನ್ನು ಸಾಮಾನ್ಯ ಸಭೆಯಲ್ಲಿ ಪಡೆಯಲಾಗಿದೆ. ಸಂಘ ಪಡೆದ ಸಾಲ ಮತ್ತು ಠೇವಣಿ ನಿಗದಿಪಡಿಸಿದ ಮಿತಿಯೊಳಗೆ ಇರುವುದನ್ನು ಗಮನಿಸಲಾಗಿದೆ. |
| ಎ) ಹಣಕಾಸು ಬ್ಯಾಂಕಿನಿಂದ ಹಾಗೂ ಸಂಘ ಸಂಸ್ಥೆಗಳಿಂದ ಪಡೆದಿರುವ ಸಾಲಗಳು : | |
| 1. ಸಾಲ ಪಡೆದಿರುವ ಬ್ಯಾಂಕಿನ/ಸಂಸ್ಥೆಯ ಹೆಸರು ಮತ್ತು ಶಾಖೆಯ ಸಂಪೂರ್ಣ ವಿವರ ನೀಡಿ. | ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬಿ.ಹೆಚ್ ರಸ್ತೆ, ಶಿವಮೊಗ್ಗ. |

| ಕ್ರ ಸಂ | ಸಾಲದ ಅಸಲು ವಿವರ | ವರ್ಷಾಂತ್ಯದ ಬಾಕಿ ಮೊತ್ತ | ಬ್ಯಾಂಕಿನ ದೃಢೀಕರಣ ದಂತೆ ಬಾಕಿ ಮೊತ್ತ | ವ್ಯತ್ಯಾಸದ ಮೊತ್ತ | ಸಮನ್ವಯ ತ:ಖ್ತೆ ತಯಾರಿಸಿ ತಾಳೆ ಮಾಡಿ ಲಗತ್ತಿಸ ಲಾಗಿದೆಯೇ? | ಬಾಕಿ ಸಾಲದ ಪೈಕಿ ಸುಸ್ತಿ ಮೊತ್ತ ರೂ. ಹಾಗೂ ಶೇಕಡಾ ಪ್ರಮಾಣ |
|---|---|---|---|---|---|---|
| 1 | ನಗದು ಪತ್ತಿನ ಸಾಲ | 99,94,88,948.46 | 99,04,88,948.46 | 90,00,000.00 | ಲಗತ್ತಿಸಲಾಗಿದೆ. | ಸುಸ್ತಿಯಾಗಿರುವುದಿಲ್ಲ |
| 2 | ಇತರೆ ಸಾಲಗಳು (ಆಕ್ಸಿಸ್ ಬ್ಯಾಂಕ್) | 10,00,00,000.00 | 10,00,00,000.00 | - | - | ಸುಸ್ತಿಯಾಗಿರುವುದಿಲ್ಲ |
| | ಒಟ್ಟು ರೂ. | 109,94,88,948.46 | 109,04,88,948.46 | 90,00,000.00 | | |

| | |
|---|---|
| 2. ಸಾಲಗಳ ಮೇಲೆ ಪಾವತಿಸಿರುವ ಬಡ್ಡಿಯ ತಗಾದೆ ಪರಿಶೀಲಿಸಿ ಸರಿ ಇರುವ ಬಗ್ಗೆ ದೃಢೀಕರಿಸಿಕೊಳ್ಳಲಾಗಿದೆಯೇ? | ಸಾಲಗಳ ಮೇಲೆ ಪಾವತಿಸಿರುವ ಬಡ್ಡಿಯನ್ನು ಪರಿಶೀಲಿಸಿದಾಗ ಸಂಘದ ಕ್ರೆಡಿಟ್ ರೇಟಿಂಗ್ ಆಧಾರದ ಮೇಲೆ ನಿಗದಿಗಿಂತ ಹೆಚ್ಚಿನ ಬಡ್ಡಿಯನ್ನು ವಿಧಿಸಿರುವುದನ್ನು ಗಮನಿಸಲಾಗಿದೆ. ಈ ಕುರಿತು ಸಂಘವು ಯೂನಿಯನ್ ಬ್ಯಾಂಕಿನೊಡನೆ ಪತ್ರ ವ್ಯವಹಾರ ಕೈಗೊಂಡಿದ್ದು, ಸದರಿ ಬ್ಯಾಂಕಿನಿಂದ ಈ ಕುರಿತು ಕ್ರಮ ಜಾರಿಯಲ್ಲಿದೆ ಎಂದು ತಿಳಿಸಿರುತ್ತಾರೆ. ಈ ಕುರಿತು ಬ್ಯಾಂಕಿನೊಡನೆ ಸಮಾಲೋಚಿಸಿ ಸೂಕ್ತ ನಿರ್ಧಾರ ಕೈಗೊಂಡು ವ್ಯತ್ಯಾಸವೇನಾದರೂ ಇದ್ದಲ್ಲಿ ಕೂಡಲೇ ಬಗೆಹರಿಸಿಕೊಳ್ಳಲು ಸೂಚಿಸಲಾಗಿದೆ.<br>**ಸಮಜಾಯಿಷಿ: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದವರೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ವರದಿ ಸಾಲಿನ ವ್ಯತ್ಯಾಸದ ಬಡ್ಡಿ ಬಾಬ್ತು ಮೊಬಲಗಿನಲ್ಲಿ ರೂ.22.00 ಲಕ್ಷಗಳನ್ನು ಮರುಪಾವತಿಸಿದ್ದು, ಉಳಿದ ವ್ಯತ್ಯಾಸದ ಬಡ್ಡಿ ಹಣವನ್ನು ಪಡೆಯಲು ಪತ್ರ ವ್ಯವಹಾರ ನಡೆಸಲಾಗಿದೆ.** |
| 3. ಪರಿಶೀಲನೆಯಲ್ಲಿ ಕಂಡುಬಂದ ವ್ಯತ್ಯಾಸಗಳನ್ನು ವರದಿಯಲ್ಲಿ ಸೂಕ್ತ ಟಿಪ್ಪಣಿ ನೀಡಿ, ಅಢಾವೆಯಲ್ಲಿ ಅಳವಡಿಸುವುದು. | ವ್ಯತ್ಯಾಸದ ಮೊತ್ತ ಇನ್ನೂ ನಿರ್ಧಾರವಾಗದೇ ಇರುವುದರಿಂದ ಅಢಾವೆಯಲ್ಲಿ ಅಳವಡಿಸಲು ಸಾಧ್ಯವಿರುವುದಿಲ್ಲ. |
| 4. ನಿಯಮ 22ರಂತೆ ಸಾಲಾಂತ್ಯ ದಿ:31.3.2024 ಕ್ಕೆ ಹಣಕಾಸು ಬ್ಯಾಂಕಿಗೆ ಪಾವತಿಗೆ ಬಾಕಿ ಇರುವ ಬಡ್ಡಿಯ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಬಡ್ಡಿಯನ್ನು ಕಾಲ ಕಾಲಕ್ಕೆ ಪಾವತಿಸಲಾಗಿದೆ. ಹಾಗೂ ಯಾವುದೇ ಬಾಕಿ ಇರುವುದಿಲ್ಲ. |
| 5. ಲೆಕ್ಕಪರಿಶೋಧನಾ ಕಾಲಕ್ಕೆ ಇವುಗಳ ಖಾತೆ ವಿವರ (Extract) ಹಾಗೂ ವರ್ಷಾಂತ್ಯಕ್ಕೆ ಪಾವತಿಸಲು ಬಾಕಿ ಇರುವ ಸಾಲಗಳ ಬಾಬ್ತು ಸಂಬಂಧಿಸಿದ ಸಂಸ್ಥೆಗಳಿಂದ ಪಡೆದ ದೃಢೀಕರಣ ಪತ್ರಕ್ಕೆ ತಾಳೆ ಇರುವ ಬಗ್ಗೆ ಲೆಕ್ಕಪರಿಶೋಧನಾ ವರದಿಯಲ್ಲಿ ವಿಮರ್ಶಿಸುವುದು. | ಧೃಡೀಕರಣ ಪತ್ರ ಪಡೆಯಲಾಗಿದ್ದು, ಮೇಲೆ ತಿಳಿಸಿದ ವ್ಯತ್ಯಾಸ ಹೊರತುಪಡಿಸಿ ಬಾಕಿ ಧೃಡೀಕರಣ ಪತ್ರಕ್ಕೆ ತಾಳೆಯಿರುತ್ತದೆ. |
| 6. ಪಡೆದ ಸಾಲಗಳಲ್ಲಿ ಇರುವ ಸುಸ್ತಿ ಸಾಲಗಳ ವಿವರ | (see table below) |

| **ಕ್ರ. ಸಂ.** | **ಸಾಲದ ವಿವರ** | **ಕೊಡತಕ್ಕ ಬಾಕಿ** | **ಸುಸ್ತಿ ಬಾಕಿ** |
|---|---|---|---|
| ಯಾವುದೇ ಸಾಲಗಳು ಸುಸ್ತಿಯಾಗಿರುವುದಿಲ್ಲ. | | | |

| | |
|---|---|
| 7. ಸರ್ಕಾರದ ಸಾಲಗಳು:<br>[ಸರ್ಕಾರದಿಂದ ಪಡೆದಿರುವ ವಿವಿದ ಸಾಲಗಳ ವರ್ಗಾವಾರು ವಿವರ, ಪಡೆದ ಸಾಲಗಳ ವಿನಿಯೋಗದ ಬಗ್ಗೆ ಹಾಗೂ ಸಾಲಾಂತ್ಯ ದಿ: 31.3.2024 ಕ್ಕೆ ಬಾಕಿ ಇರುವ ಮೊತ್ತಕ್ಕೆ ದೃಢೀಕರಣ ಪತ್ರದೊಂದಿಗೆ ತಾಳೆ ಇರುವ ಬಗ್ಗೆ ವಿಮರ್ಷೆ] | ಸರ್ಕಾರದಿಂದ ಯಾವುದೇ ಸಾಲ ಪಡೆದಿರುವುದಿಲ್ಲ. |

**18) ಠೇವಣಿಗಳು:**

| | |
|---|---|
| ಸಂಘವು ಠೇವಣಿ ಸಂಗ್ರಹಣೆ ಮಾಡಲು ಉಪವಿಧಿಗಳಲ್ಲಿ ಇರುವ ಅವಕಾಶಗಳ ಬಗ್ಗೆ ಹಾಗೂ ಸಂಘವು ಸಂಗ್ರಹಿಸಿರುವ ಠೇವಣಿ ಸದರಿ ಮಿತಿಯೊಳಗೆ ಇರುವ ಬಗ್ಗೆ ವರದಿಯಲ್ಲಿ ವಿವರಿಸಲಾಗಿದೆಯೇ? ಎಲ್ಲಾ ಠೇವಣಿದಾರರು ಸಂಘದ ಸದಸ್ಯತ್ವ ಪಡೆದಿರುವರೇ? ಎಲ್ಲಾ ಠೇವಣಿದಾರರಿಂದ ಕೆ.ವೈ.ಸಿ. ಮಾದರಿಯ ವಿವರಗಳನ್ನು ಪಡೆಯಲಾಗಿದೆಯೇ? | ದಿನಾಂಕ: 20.09.2023ರ ಸಂಘದ ಸಾಮಾನ್ಯ ನಿಕಾಯವು ನಿಗದಿಪಡಿಸಿದ ರೂ.250 ಕೋಟಿ ಮಿತಿಯಲ್ಲಿ, ಸಂಘದ ಆಡಳಿತ ಮಂಡಳಿ ರಚಿಸುವ ಹಾಗೂ ಕಾಲಕಾಲಕ್ಕೆ ತಿದ್ದುಪಡಿ ಮಾಡುವ ಒಳ ನಿಯಮಗಳಿಗೊಳಪಟ್ಟು ವಿವಿಧ ರೀತಿಯ ಠೇವಣಿಗಳನ್ನು ಸ್ವೀಕರಿಸಿದೆ. |

ಸಂಘವು ಸಂಗ್ರಹಣೆ ಮಾಡಿರುವ ವಿವಿಧ ಠೇವಣಿಗಳ ವಿವರಗಳು

| ಕ್ರ. ಸಂ | ಠೇವಣಿಗಳ ವಿವರ | ವರ್ಷಾಂತ್ಯದ ಬಾಕಿ ಮೊತ್ತ | ಕುಳುವಾರಿನಂತೆ ಬಾಕಿ ಮೊತ್ತ | ವ್ಯತ್ಯಾಸದ ಮೊತ್ತ |
|---|---|---|---|---|
| 1 | ನಿಶ್ಚಿತ ಠೇವಣಿ | 1,00,53,19,820.00 | 1,00,53,19,820.00 | – |
| 2 | ಉಳಿತಾಯ ಠೇವಣಿ | 83,96,28,124.80 | 83,96,28,124.80 | – |
| 3 | ಕರೆ ಠೇವಣಿ | – | – | – |
| 4 | ಸಣ್ಣ ಉಳಿತಾಯ ಖಾತೆ | 47,77,608.76 | 47,77,608.76 | |
| | ಒಟ್ಟು ರೂ | 1,84,97,25,553.56 | 1,84,97,25,553.56 | – |

| | | |
|---|---|---|
| 1 | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? | ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿಲ್ಲ. |
| 2 | ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆಯೇ? ವರದಿ ವರ್ಷದಲ್ಲಿ ಪಾವತಿಸಿದ ಬಡ್ಡಿಯ ಮೊತ್ತ | ಠೇವಣಿಯ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ಆಡಳಿತ ಮಂಡಳಿ ನಿರ್ಧರಿಸಿರುವ ತೀರ್ಮಾನಕ್ಕೆ ಅನುಗುಣವಾಗಿದೆ. ವರದಿ ಸಾಲಿನಲ್ಲಿ ಪಾವತಿಸಿದ ಬಡ್ಡಿ ರೂ.10,66,99,594.00 |

| | | |
|---|---|---|
| 3 | ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ? | ಠೇವಣಿದಾರರಿಗೆ ಪಾಸ್ ಪುಸ್ತಕ/ ಸರ್ಟಿಫಿಕೇಟ್ ನೀಡಲಾಗಿದೆ. |
| 4 | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಕೊಟ್ಟಿದೆಯೇ? ಬಡ್ಡಿ ಪಾವತಿ ಆಗದೇ ಇದ್ದಲ್ಲಿ ಸಾಲಾಂತ್ಯಕ್ಕೆ ಹೊರಬಾಕಿ ಆಗುವ ಬಡ್ಡಿ ಮೊಬಲಗಿಗೆ ಸೂಕ್ತವಾಗಿ ಲೆಕ್ಕಾಚಾರ ಮಾಡಿ [ಕುಳುವಾರು ತಯಾರಿಸಿ] ಕಡ್ಡಾಯವಾಗಿ ಅವಕಾಶ ಕಲ್ಪಿಸಿರುವ ಬಗ್ಗೆ ವಿಮರ್ಶಿಸಿ | ಎಲ್ಲಾ ಠೇವಣಿಗಳ ಮೇಲೆ ಬಡ್ಡಿ ಆಕರಣೆ ಮಾಡಿ ಪಾವತಿಸಲಾಗಿದೆ. |
| 5 | ಸಂಘವು ಬ್ಯಾಂಕಿಂಗ್ ನಿಯಂತ್ರಣಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್, ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿ ಸದಸ್ಯರಿಗೆ ನಗದೀಕರಣ ಒದಗಿಸಿ ಕೊಟ್ಟಿದೆಯೇ ಎಂಬ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ವರ್ಷದಲ್ಲಿ ಜರುಗಿರುವ ಇಂತಹ ವ್ಯವಹಾರಗಳ ಸಂಪೂರ್ಣ ವಿವರವಾದ ಪಟ್ಟಿಯನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು. | ಸಂಘವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 ರ ಕಲಂ 22 ರಂತೆ ಬ್ಯಾಂಕಿಂಗ್ ಲೈಸೆನ್ಸ್ ಪಡೆಯದೇ ಸದಸ್ಯರಿಂದ ಅವರ ಹೆಸರಿನಲ್ಲಿರುವ ಚೆಕ್, ಡಿ.ಡಿ, ಬಿಲ್ಸ್ ಮುಂತಾದವುಗಳನ್ನು ಸ್ವೀಕರಿಸಿ ತಾವು ಹೊಂದಿರುವ ಬ್ಯಾಂಕಿನ ಮುಖಾಂತರ ಅವುಗಳನ್ನು ನಗದೀಕರಿಸಿದ ಪ್ರಕರಣಗಳು ಕಂಡುಬಂದಿರುವುದಿಲ್ಲ. |
| 6 | ಇಂತಹ ಪ್ರಕರಣಗಳು (ಕ್ರ.ಸಂ–8ರಂತೆ) ಇದ್ದಲ್ಲಿ ಸದರಿ ಅನಧಿಕೃತ ವ್ಯವಹಾರವನ್ನು ಗುರ್ತಿಸಿ ಪ್ರತ್ಯೇಕವಾಗಿ ಇಂಡೀಕರಿಸಿ ಸಂಬಂಧಿತ ಶೀರ್ಷಿಕೆಯಿಂದ ಕಡಿತಗೊಳಿಸಿ ಜಮಾ ಖರ್ಚು ತಃಖ್ತೆ ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯ ಎರಡೂ ಬದಿಯ ಆಕ್ಷೇಪಣೆಯಲ್ಲಿ ಕಾಣಿಸಿ ವಿಮರ್ಶಿಸುವುದು. | ಅನ್ವಯಿಸುವುದಿಲ್ಲ. |

## 19) ಠೇವಣಿಗಳಲ್ಲಿ ಆಗಿರುವ ಹೆಚ್ಚಳ/ಕಡಿಮೆಯ ಬಗ್ಗೆ ವಿಮರ್ಶೆ:

ಕಲಂ16 (ಎ1), ಕಲಂ18 (1) ಮತ್ತು ಕಲಂ 98–ಡಿ ಉಲ್ಲಂಘಿಸಿ ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿದೆಯೇ? ಎಷ್ಟು ವ್ಯಕ್ತಿಗಳಿಂದ ಒಟ್ಟು ಎಷ್ಟು ಮೊತ್ತದ ಠೇವು ಪಡೆಯಲಾಗಿದೆ? ಕಲಂ 61 ನಿಯಮ 26ರನ್ವಯ

| ಕ್ರ.ಸಂ | ಠೇವಣಿ | ಸಂಖ್ಯೆ | ಮೊತ್ತ |
|---|---|---|---|
| 01 | ಸದಸ್ಯರಿಂದ | | 184,97,25,553.56 |
| 02 | ಸದಸ್ಯರಲ್ಲದವರಿಂದ | | |
| | **ಒಟ್ಟು ರೂ.** | | **184,97,25,553.56** |

ವಿಮರ್ಶೆ: ಸದಸ್ಯರಲ್ಲದವರಿಂದ ಠೇವಣಿ ಸ್ವೀಕರಿಸಲಾಗಿಲ್ಲ.

| | |
|---|---|
| ಠೇವಣಿ ಮೇಲೆ ಪಾವತಿಸುತ್ತಿರುವ ಬಡ್ಡಿ ದರಗಳು ನಿರ್ಧರಿಸಿರುವ ಆಡಳಿತ ಮಂಡಳಿ ಸಭೆ ದಿನಾಂಕ ಹಾಗೂ ಠರಾವು ಕ್ರಮಾಂಕ ನಮೂದಿಸಿ ವಿಮರ್ಶಿಸುವುದು. | ಆಡಳಿತ ಮಂಡಳಿ ಸಭೆಯ ದಿನಾಂಕ: 28–07–2023<br>ಠರಾವು ಸಂಖ್ಯೆ 07 |
| ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವಣಿಗಳ ಮೇಲೆ ಪಾವತಿಸಿರುವ ಬಡ್ಡಿಯನ್ನು ಸಂಬಂಧಿಸಿದ ಠೇವಣಿ ಖಾತೆಗೆ ಜಮೆ ತೆಗೆದುಕೊಳ್ಳಲಾಗಿರುವ ಬಗ್ಗೆ ವರದಿಯಲ್ಲಿ ವಿಮರ್ಶಿಸುವುದು. | ವರದಿ ಸಾಲಿನಲ್ಲಿ ಕ್ಯಾಶ್ ಸರ್ಟಿಫಿಕೇಟ್ ಹಾಗೂ ದ್ವಿಗುಣ ಠೇವುಗಳನ್ನು ಪಡೆದಿರುವುದಿಲ್ಲ. |
| ಠೇವಣಿದಾರರಿಗೆ ಪಾಸ್ ಪುಸ್ತಕ/ಸರ್ಟಿಫಿಕೇಟ್ ನೀಡಲಾಗಿದೆಯೇ? | ಠೇವಣಿದಾರರಿಗೆ ಪಾಸ್ ಪುಸ್ತಕ / ಸರ್ಟಿಫಿಕೇಟ್ ನೀಡಲಾಗಿದೆ. |
| ಪಿಗ್ಮಿ ಏಜೆಂಟರ ಸಂಖ್ಯೆ ಮತ್ತು ನಿಗದಿಪಡಿಸಿದ ಕಮಿಷನ್ ಬಗ್ಗೆ ವರದಿಯಲ್ಲಿ ವಿವರಿಸುವುದು. | ಅನ್ವಯವಾಗುವುದಿಲ್ಲ. |
| ಪಿಗ್ಮಿ ಕಮಿಷನ್ ಹಾಗೂ ಇತರೆ ವೆಚ್ಚಗಳ ಪಾವತಿಸುವಾಗ ಆದಾಯ ತೆರಿಗೆ ನಿಯಮಗಳಂತೆ ಕ್ರಮ ಇಡಲಾಗಿದೆಯೇ? | ಅನ್ವಯವಾಗುವುದಿಲ್ಲ. |
| ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 28 ರಂತೆ ನಗದು ಮೀಸಲು ಮತ್ತು ಪ್ರವಾಹಿಧನ ಮಿತಿ ಕಾಯ್ದುಕೊಂಡು ರಿಜಿಸ್ಟರ್ ಬರೆದಿಡಲಾಗಿದೆಯೇ? (ಪ್ರವಾಹಿ ಧನ ಲೆಕ್ಕಾಚಾರ ಮಾಡುವಾಗ ಕಲಂ 58 ಕ್ಕೆ ವಿರುದ್ಧವಾಗಿ ಮಾಡಿರುವ ಹೂಡಿಕೆಗಳನ್ನು ಪರಿಗಣಿಸಬಾರದು) | ಅನ್ವಯವಾಗುವುದಿಲ್ಲ. |
| ಪ್ರತಿಯೊಂದು ಠೇವಣಿ ಮತ್ತು ಬಡ್ಡಿ ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ಸಂಪೂರ್ಣ ಗಣಕೀಕೃತಗೊಂಡಿರುತ್ತದೆ. ಕುಳು ವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆಯಿರುತ್ತದೆ. |
| ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಬಗ್ಗೆ ಪರಿಶೀಲಿಸಿ ವಿವೇಚನಾಯುಕ್ತವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |

| | |
|---|---|
| ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲ ನಮೂದುಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ ಮತ್ತು ಹಣ ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು.) | ಅನ್ವಯವಾಗುವುದಿಲ್ಲ. |
| ವರ್ಷಾಂತ್ಯದ ಠೇವಣಿ ಮತ್ತು ಬಡ್ಡಿ ಖಾತೆ ಬಾಕಿ ರಿಜಿಸ್ಟರ್ ಅನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | (see table below) |
| ವರ್ಷಾಂತ್ಯದ ಬಾಕಿ ಯಾದಿಯ ಒಂದು ಪ್ರತಿಯನ್ನು ಮುದ್ರಿತಗೊಳಿಸಿ ಪರಿಶೀಲಿಸಿ ಪುಟವಾರು ಸಂಕ್ಷಿಪ್ತ ವನ್ನು ದೃಢೀಕರಿಸಿ ವರದಿಗೆ ಲಗತ್ತಿಸುವುದು.<br>**ಸಮಜಾಯಿಷಿ: ಲಗತ್ತಿಸಿದೆ.** | |

| ವಿವರ | ಹಿಂದಿನ ಸಾಲಿನ (ರೂ.ಕೋಟಿ) | | ಪ್ರಸಕ್ತ ಸಾಲಿನ (ರೂ.ಕೋಟಿ) | |
|---|---|---|---|---|
| | ಠೇವು | ಬಡ್ಡಿ | ಠೇವು | ಬಡ್ಡಿ |
| ಖಾತೆಗಳ ಸಂಖ್ಯೆ | | | | |
| ಅಢಾವೆ ಮೊತ್ತ | 184.42 | 10.79 | 184.97 | 10.67 |
| ಕುಳುವಾರು ಮೊತ್ತ | 184.42 | 10.79 | 184.97 | 10.67 |
| ಅಂತರ ರೂ. | – | – | – | – |

**ಪ್ರಸಕ್ತ ಸಾಲಿನ ಠೇವಣಿಗಳ/ಬಡ್ಡಿಗಳ ಕಳೆದ 02 ವರ್ಷಗಳ ಅಂಕಿಗಳ ತುಲನಾತ್ಮಕ ವಿವರ ಹಾಗೂ ಠೇವಣಿಗೆ ಹೋಲಿಸಲಾಗಿ ಪಾವತಿಸಿರುವ ಬಡ್ಡಿಯ ಪ್ರತಿಶತ ಪ್ರಮಾಣದ ವಿವರ:**

| ಕ್ರ.ಸಂ | ವಿವರ | 2023–24 ಕ್ಕೆ | 2022–23 ಕ್ಕೆ |
|---|---|---|---|
| 1 | ಒಟ್ಟು ಠೇವಣಿ | 184.97 | 184.42 |
| 2 | ಒಟ್ಟು ಬಡ್ಡಿ ಪಾವತಿ | 10.67 | 10.79 |
| 3 | ಪ್ರತಿಶತ ಪ್ರಮಾಣ | 5.77% | 5.85% |

## 20) ಠೇವಣಾತಿಗಳಲ್ಲಿ ಗಮನಿಸಲಾದ ನ್ಯೂನತೆಗಳು:–

| | |
|---|---|
| [ಠೇವಣಿ ಸಂಗ್ರಹಣೆಯಲ್ಲಿ ಗಮನಿಸಲಾದ ನ್ಯೂನತೆ ಗಳಿದ್ದಲ್ಲಿ ವಿವರಗಳೊಂದಿಗೆ ನಮೂದಿಸಿ ವಿಮರ್ಶಿಸುವುದು] | **ಠೇವಣಿಗಳ ಬಗ್ಗೆ ಟಿಪ್ಪಣಿ:** ಸಂಘದ ಉಪನಿಯಮಗಳ ಪ್ರಕಾರ ಸಂಸ್ಥೆಯು ಸದಸ್ಯರಿಂದ ಠೇವಣಿ ಸಂಗ್ರಹಿಸಲಾಗಿದೆ. ಠೇವಣಿ ಸಂಗ್ರಹಣೆಯಲ್ಲಿ ಗುರುತರವಾದ ನ್ಯೂನ್ಯತೆಗಳು ಯಾವುದೂ ಇರುವುದಿಲ್ಲ. |

**21) ಇತರೆ ಜವಾಬ್ದಾರಿಗಳು :**

{ಇತರೆ ಜವಾಬ್ದಾರಿ ಶೀರ್ಷಿಕೆಯಡಿ ಬರುವ ಎಲ್ಲಾ ಬಾಬ್ತುಗಳ ಕುರಿತು ವಿವರಗಳನ್ನು ಪೂರ್ಣವಾಗಿ ವಿಮರ್ಶಿಸುವುದು}

## 1. ಅಮಾನತ್ ಜವಾಬ್ದಾರಿಗಳು.

| ಕ್ರ.ಸಂ. | ವಿವರ | ಮೊತ್ತ |
|---|---|---|
| 1 | ಕೇಂದ್ರಕಛೇರಿ ಖಾತೆಯಲ್ಲಿ ವರ್ತಕರ ವ್ಯಾಜ್ಯಕ್ಕೆ ಸಂಬಂಧಿಸಿದ ಮೊತ್ತ | 13,78,986.00 |
| 2 | ಇತರೆ ಹೊಂದಾಣಿಕೆಗೆ ಬಾಕಿ-ಕೇಂದ್ರಕಛೇರಿ | 1,27,738.00 |
| 3 | ಇತರೆ ಹೊಂದಾಣಿಕೆಗೆ (ತೀರ್ಥಹಳ್ಳಿ) ಶಾಖೆಗಳಲ್ಲಿ ಬಾಕಿ | 46,700.00 |
| 4 | ತೀರ್ಥಹಳ್ಳಿ (ಸಾಫ್ಟ್‌ವೇರ್ ಮೈಗ್ರೇಷನ್) | 1,09,512.00 |
| 5 | ಸಾಗರ (ಸಾಫ್ಟ್‌ವೇರ್ ಮೈಗ್ರೇಷನ್) | 23,762.18(Dr) |
| | ಒಟ್ಟು ಮೊತ್ತ | 16,39,173.82 |
| | ನಿವ್ವಳ ಮೊತ್ತ | 16,39,173.82 |

ಈ ಮೇಲ್ಕಂಡ ಮೊಬಲಗು ಹೊಂದಾಣಿಕೆ ಬಾಕಿ ಇದ್ದು, ತೀರ್ಥಹಳ್ಳಿ ಮತ್ತು ಸಾಗರ ಶಾಖೆಯಲ್ಲಿ ಸಾಫ್ಟ್‌ವೇರ್ ಮೈಗ್ರೇಷನ್‌ನಲ್ಲಿನ ವ್ಯತ್ಯಾಸದ ಮೊಬಲಗನ್ನು ಹೊಂದಾಣಿಕೆ ಬಾಕಿಗೆ ಅಮಾನತ್ತು ಖಾತೆಯಲ್ಲಿ ಉಳಿಸಿಕೊಳ್ಳಲಾಗಿದೆ. ಈ ಕುರಿತು ಇತರೆ ಬಾಬ್ತುಗಳನ್ನು ಆದಷ್ಟು ಶೀಘ್ರವಾಗಿ ಪರಿಶೀಲನೆ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲು ಸಲಹೆ ನೀಡಲಾಗಿದೆ.

**ಸಮಜಾಯಿಷಿ: ಮುಂದಿನ ದಿನಗಳಲ್ಲಿ ಸರಿಪಡಿಸ ಲಾಗುವುದು.**

## 2. ಸಲ್ಲತಕ್ಕ ಜವಾಬ್ದಾರಿಗಳು.

| ಕ್ರ.ಸಂ. | ವಿವರ | ಮೊತ್ತ |
|---|---|---|
| 1 | ಅಡಿಕೆ ಮಾರಾಟದ ಹಣ | 21,70,403.20 |
| 2 | ಷೇರು ಡಿವಿಡೆಂಡ್ ಕಾಯ್ದಿರಿಸಿದ್ದು | 1,00,39,000.00 |
| 3 | ಪಾವತಿಸಬೇಕಾದದ್ದು | 3,48,26,274.22 |
| 4 | ಜಿ ಎಸ್ ಟಿ ಪಾವತಿಸಬೇಕಾಗಿದ್ದು | 3,60,95,065.00 |
| 5 | ವಿಶೇಷ ಪಾರಿತೋಷಕ ನಿಧಿ | 16,43,727.00 |
| 6 | ಸದಸ್ಯರ ಮರಣೋತ್ತರ ನಿಧಿ | 1,25,97,500.00 |
| 7 | ಸದಸ್ಯರ ಮರಣೋತ್ತರ ನಿಧಿಗೆ ಲಾಭದಿಂದ | 2,14,44,560.29 |
| 8 | ಕಮಿಷನ್ ಪಾವತಿಸಬೇಕಾಗಿದ್ದು | 9,55,120.00 |
| 9 | ಆದಾಯ ಮೂಲ ತೆರಿಗೆ (ಟಿ ಡಿ ಎಸ್) | 41,43,443.00 |

ವರದಿ ಸಾಲಿನ ಅಂತ್ಯಕ್ಕೆ ಕೊಡಬೇಕಾದ ಅಡಿಕೆ ಮಾರಾಟದ ಹಣ ರೂ.21,70,403.20 ಇದ್ದು, ಇದನ್ನು ಕೂಡಲೇ ಪಾವತಿಸಲು ಕ್ರಮವಿಡುವುದು.

**ಸಮಜಾಯಿಷಿ: ಬೇಡಿಕೆ ಸಲ್ಲಿಸಿದವರಿಗೆ ಅವರವರ ಅಗತ್ಯಕ್ಕೆ ಅನುಗುಣವಾಗಿ ಪಾವತಿ ಮಾಡಲಾಗುತ್ತಿದೆ.**

ಷೇರು ಡಿವಿಡೆಂಡ್ ಕೊಡಬೇಕಾಗಿದ್ದು ರೂ.1,00,39,000.00 ಬಾಕಿ ಇದ್ದು, ಸದರಿ ಮೊತ್ತವನ್ನು ಸದಸ್ಯರ ಉಳಿತಾಯ ಖಾತೆಗೆ ಜಮಾ ಮಾಡಬೇಕು ಇಲ್ಲವಾದಲ್ಲಿ ಸದಸ್ಯರಿಗೆ ಪಾವತಿ ಮಾಡಬೇಕು.

**ಸಮಜಾಯಿಷಿ: ಸದಸ್ಯರಿಗೆ ಡಿವಿಡೆಂಡ್ ಪಾವತಿ ಮಾಡಲಾಗುತ್ತಿದ್ದು, ಸಂಘದ ಉಪವಿಧಿ ಅನ್ವಯ ಮೂರು ವರ್ಷ ಮೇಲ್ಪಟ್ಟ ಡಿವಿಡೆಂಡ್ ಮೊತ್ತವನ್ನು ಆಪದ್ಧನ ನಿಧಿಗೆ ವರ್ಗಾಯಿಸ ಲಾಗುವುದು.**

ವರದಿ ಸಾಲಿನ ಅಂತ್ಯಕ್ಕೆ ವಿವಿಧ ರೀತಿಯ ಪಾವತಿಸಬೇಕಾದ ಮೊತ್ತ ರೂ.3,48,26,274.22ಇದ್ದು ಸದರಿ ಹಣದ ಪಾವತಿಗೆ ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಸಂಬಂಧಿಸಿದವರಿಗೆ ಪಾವತಿ ಮಾಡಲಾಗುತ್ತಿದೆ.**

ಸದಸ್ಯರ ಮರಣೋತ್ತರ ನಿಧಿ ವರದಿ ಸಾಲಿನ ಆರಂಭದಲ್ಲಿ ರೂ.1,27,47,500.00 ಇದ್ದು, ಪ್ರಸಕ್ತ ಸಾಲಿನಲ್ಲಿ 5 ಜನ ಸದಸ್ಯರಿಂದ ರೂ.50,000 ಜಮಾ ಆಗಿರುತ್ತದೆ. ಹಾಗೆಯೇ ಈ ಯೋಜನೆಯಲ್ಲಿ 10 ಜನ ಫಲಾನುಭವಿಗಳಿಗೆ ರೂ.8,75,000.00 ಪಾವತಿಸಲಾಗಿದೆ. 15 ಜನ ಸದಸ್ಯರು

| | | | |
|---|---|---|---|
| 10 | ಟ್ರೇಡ್ ಕ್ರೆಡಿಟಾರ್ಸ್ | 3,35,67,983.02 | ಈ ಯೋಜನೆಯ ನಿಯಮವನ್ನು ಪಾಲಿಸದೇ ಇರುವುದರಿಂದ ಅವರ ಕೋರಿಕೆಯಂತೆ ವಂತಿಕೆಯ ಜೊತೆಗೆ ಬಡ್ಡಿ ಸೇರಿದಂತೆ ರೂ.1,68,064.00 ಪಾವತಿಸಲಾಗಿದೆ. ವರದಿ ಸಾಲಿನ ಅಂತ್ಯಕ್ಕೆ ಮರಣೋತ್ತರ ನಿಧಿಯಲ್ಲಿ ರೂ.1,25,97,500.00 ಜಮಾ ಇರುತ್ತದೆ.<br>ವರದಿ ಸಾಲಿನ ಅಂತ್ಯಕ್ಕೆ ಪಾವತಿಸಬೇಕಾದ ಕಮಿಷನ್ ರೂ.9,55,120.00 ಮತ್ತು ಪಾವತಿಸಬೇಕಾದ ಟಿ ಡಿ ಎಸ್ ಮೊತ್ತ ರೂ.41,43,443.00, ಟಿ ಸಿ ಎಸ್ ಮೊತ್ತ ರೂ.2,52,565.00, ಸದಸ್ಯರ ಗುಂಪು ವಿಮೆ ಕ್ಲೈಮ್ ಮೊತ್ತ ರೂ.11,67,210.00, ಸದಸ್ಯರ ಆರೋಗ್ಯ ವಿಮೆ ಕ್ಲೈಮ್ ಮೊತ್ತ ರೂ.21.677.00, ಯಶಸ್ವಿನಿ ಮೊತ್ತ ರೂ.41,900.00, ಸಿಬ್ಬಂದಿ ಅನುಗ್ರಹ ಪೂರ್ವಕ/ ಬೋನಸ್ ಪಾವತಿಗೆ ರೂ.1,03,49,822.70 ಬಾಕಿ ಇರುತ್ತದೆ.<br>**ಸಮಜಾಯಿಷಿ: ನಿಯಮಾನುಸಾರ ಪಾವತಿಸಲಾಗುವುದು.** |
| 11 | ಟಿ ಸಿ ಎಸ್ ಪಾವತಿಸಬೇಕಾಗಿದ್ದು | 2,52,565.00 | |
| 12 | ಸದಸ್ಯರ ಗುಂಪು ವಿಮೆ ಕ್ಲೈಮ್ | 11,67,210.00 | |
| 13 | ಸದಸ್ಯರ ಆರೋಗ್ಯ ವಿಮೆ ಕ್ಲೈಮ್ | 21,677.00 | |
| 14 | ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ | 21,770.22 | |
| 15 | ಯಶಸ್ವಿನಿ | 41,900.00 | |
| 16 | ಸಿಬ್ಬಂದಿ ಅನುಗ್ರಹ ಪೂರ್ವಕ/ಬೋನಸ್ ಪಾವತಿಗೆ | 1,03,49,822.70 | |
| | | | ವರದಿ ಸಾಲಿನ ಅಂತ್ಯಕ್ಕೆ ಟ್ರೇಡ್ ಕ್ರೆಡಿಟಾರ್ಸ್ ರೂ.3,35,67,983.02, ಕ್ರೆಡಿಟಾರ್ಸ್ ಫಾರ್ ಕೆಮಿಕಲ್ಸ್ ರೂ.21,770.22 ಬಾಕಿ ಇದ್ದು ಸದರಿ ಕ್ರೆಡಿಟಾರ್ಸ್‌ಗಳಿಂದ ಧೃಢೀಕರಣ ಪತ್ರ ಪಡೆದಿರುವುದಿಲ್ಲ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br>**ಸಮಜಾಯಿಷಿ: ಕ್ರಮವಿಡಲಾಗಿದೆ.** |

| | |
|---|---|
| 1) ಇತರೆ ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯಕಾರ್ಯನಿರ್ವಾಹಕರಿಗೆ ತಿಳಿಸಲಾಗಿದೆಯೇ? | ಕೊಡತಕ್ಕ ಬಾಬ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ಅಂತರವಿರುವುದಿಲ್ಲ. |
| 2) ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಪ್ರಸಕ್ತ ಸಾಲಿನಲ್ಲಿ ಯಾವುದೇ ಅಂತರ ಕಂಡುಬಂದಿಲ್ಲ. |
| 3) ಅನಾಮಧೇಯ ಕೊಡತಕ್ಕದವುಗಳು ಇದ್ದಲ್ಲಿ ಅಥವಾ ಜವಾಬ್ದಾರಿ ತಃಖ್ತೆಗಿಂತ ಹೆಚ್ಚಿಗೆ ಕೊಡತಕ್ಕ ಬಾಬ್ತುಗಳು ಇದ್ದಲ್ಲಿ ಅವುಗಳನ್ನು ನಿಯಮಾನುಸಾರ ಪರಿಶೀಲಿಸಿ ಆಡಿಟ್ ಆಕ್ಷೇಪಣೆ ವಸೂಲಾತಿಗಿರಿಸುವುದು. ಇವೆಯೇ? | ಶಾಖೆಯಲ್ಲಿ ಇರುವ ಮೈಗ್ರೇಶನ್ ವ್ಯತ್ಯಾಸವನ್ನು ಹೊರತುಪಡಿಸಿ ಅನಾಮಧೇಯ ಕೊಡತಕ್ಕವುಗಳು ಯಾವುದೂ ಇರುವುದಿಲ್ಲ. ಸಾಗರ ಮತ್ತು ತೀರ್ಥಹಳ್ಳಿ ಶಾಖೆಯಲ್ಲಿ ತಂತ್ರಾಂಶ ಬದಲಾವಣೆಯ ಸಮಯದಲ್ಲಿ ಆಗಿರುವ ವ್ಯತ್ಯಾಸಗಳನ್ನು ಕೂಡಲೇ ಪರಿಶೀಲಿಸಿ ಸಮತೋಲನ ಮಾಡಲು ಸೂಚಿಸಲಾಗಿದೆ.<br>**ಸಮಜಾಯಿಷಿ: ಮುಂದಿನ ದಿನಗಳಲ್ಲಿ ಪರಿಶೀಲಿಸಿ, ಸರಿಪಡಿಸಿಕೊಳ್ಳಲಾಗುವುದು.** |

| | |
|---|---|
| 4) ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ದಾಯಿತ್ವಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆ/ ವಸೂಲಾತಿಗಿರಿಸುವುದು. | ಯಾವುದೂ ಇರುವುದಿಲ್ಲ. |

**22) ಡಿವಿಡೆಂಡ್ ವಿತರಣೆ ಕುರಿತು:**

| | |
|---|---|
| 1) ವರದಿ ವರ್ಷದಲ್ಲಿ ಲಾಭ ವಿಂಗಡಣೆಯಿಂದ ಎಷ್ಟು ಲಾಭಾಂಶ ಘೋಷಿಸಲಾಗಿದೆ. | ಹಿಂದಿನ ಸಾಲಿಗೆ (2022-23) ಮಹಾಸಭೆ ಒಪ್ಪಿಗೆ ಪಡೆದು ಪ್ರತಿಶತ 10 ರಂತೆ ಮೊತ್ತ ರೂ.81,14,303.00ಗಳನ್ನು ಲಾಭಾಂಶವಾಗಿ ಘೋಷಿಸಲಾಗಿದೆ. |
| 2) ವರದಿ ವರ್ಷದಲ್ಲಿ ಪಾವತಿಯಾದ ಲಾಭಾಂಶ ಎಷ್ಟು? ಪಾವತಿಯಾಗದೇ ಉಳಿದ ಲಾಭಾಂಶ ಮೊತ್ತ? | ಈ ಹಿಂದಿನ ಸಾಲುಗಳಲ್ಲಿ ಘೋಷಣೆಯಾದ ಲಾಭಾಂಶದಲ್ಲಿ ಮೊತ್ತ ರೂ.91,23,622.00 ಗಳನ್ನು ವರದಿ ಸಾಲಿನಲ್ಲಿ ಪಾವತಿಸಲಾಗಿದೆ. ಈ ಹಿಂದಿನ ಸಾಲುಗಳಲ್ಲಿ ಘೋಷಣೆಯಾದ ಲಾಭಾಂಶದಲ್ಲಿ ಪಾವತಿಯಾಗದೇ ಉಳಿದ ಮೊತ್ತ ರೂ.1,00,39,000.00 |
| 3) ಲಾಭಾಂಶವನ್ನು ಘೋಷಿಸಿ ವಾಸ್ತವವಾಗಿ ವಿತರಿಸದೇ ಬೇರೆ ಉದ್ದೇಶಕ್ಕಾಗಿ ಸಂಘ ಪಡೆದುಕೊಂಡಿದ್ದಲ್ಲಿ ಈ ಬಗ್ಗೆ ವಿವರ ನೀಡಿ ಆಕ್ಷೇಪಿಸುವುದು. | ಯಾವುದೂ ಇರುವುದಿಲ್ಲ. |
| 4) ವರ್ಷಾಂತ್ಯದ ವಿತರಣೆಯಾಗದ ಲಾಭಾಂಶದ ವರ್ಷಾವಾರು ಯಾದಿ ತೆಗೆದು ಮೂರು ವರ್ಷ ಮೀರಿದ ಲಾಭಾಂಶದ ಕುರಿತು ಉಪನಿಯಮದಂತೆ ಕ್ರಮ ಕೈಗೊಳ್ಳಲಾಗಿದೆಯೇ?. | ಮೂರು ವರ್ಷ ಮೀರಿದ ಲಾಭಾಂಶವನ್ನು ಉಪನಿಯಮದಂತೆ ಆಪದ್ಧನ ನಿಧಿಗೆ ವರ್ಗಾಯಿಸಲಾಗಿದೆ. |

**23) ಕೂಡಿಬಿದ್ದ ಲಾಭ :**

| | |
|---|---|
| 1) ವರ್ಷಾಂತ್ಯದ ಹಿಂದಿನ ವರ್ಷಗಳ ಕೂಡಿಬಿದ್ದ ಲಾಭದ ವಿವರ: | ವರ್ಷ 2022-23 ಮತ್ತು ಮೊತ್ತ ರೂ.4,41,57,276.96 |
| 2) ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಹಂಚಿಕೆಯಾಗದ ಕೂಡಿಬಿದ್ದ ಲಾಭವನ್ನು ಆಪದ್ಧನಕ್ಕೆ ವರ್ಗಾಯಿಸಿದ ವಿವರ. | ಮೊತ್ತ ರೂ.72,043.00<br>ವಿಮರ್ಶೆ: ಕಾಯ್ದೆ ಮತ್ತು ನಿಯಮಗಳಿಗೆ ಅನುಗುಣವಾಗಿ ಹಂಚಿಕೆಯಾಗದ ಕೂಡಿಬಿದ್ದ ಲಾಭವನ್ನು ಆಪದ್ಧನ ನಿಧಿಗೆ ನಿಯಮಗಳ ಪ್ರಕಾರ ವರ್ಗಾಯಿಸಲಾಗಿದೆ. |

## 24) ನಗದು ಶಿಲ್ಕು ಪರಿಶೀಲನೆ:

<table>
<tr><td>1) ಸಾಲಾಖೈರಿಗೆ ಸಂಘದಲ್ಲಿನ ನಗದು ಶಿಲ್ಕು</td><td>ಸಾಲಾಖೈರಿಗೆ ಕೇಂದ್ರಕಛೇರಿ ಮತ್ತು ಶಾಖೆಗಳಲ್ಲಿ ರೂ.27,36,706.00 ಮತ್ತು 18 ಏಜೆನ್ಸಿಗಳಲ್ಲಿ ರೂ.4,07,883.34 ನಗದು ಶಿಲ್ಕು ಇರುತ್ತದೆ.</td></tr>
<tr><td>2) ನಗದು ದಿನವಹಿ, ಡಿನಾಮಿನೇಷನ್ ಪುಸ್ತಕ ಹಾಗೂ ನಗದು ಪುಸ್ತಕ ಇವುಗಳನ್ನು ಪೂರ್ಣ ಬರೆದು ದೃಢೀಕರಿಸಿ ಇಟ್ಟಿರುವರೇ? ವಿವರ</td><td>ಅನುಬಂಧ – 5 ರಲ್ಲಿ ವಿವರಿಸಲಾಗಿದೆ.</td></tr>
<tr><td>3) ನಗದು ಪುಸ್ತಕವನ್ನು ತಹಲ್‌ವರೆವಿಗೂ ಬರೆದು ಪ್ರತಿ ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ದೃಢೀಕರಿಸಿರುತ್ತಾರೆಯೇ?<br><br>ನಗದು ಪುಸ್ತಕ ಅಪೂರ್ಣವಿದ್ದಲ್ಲಿ ಕಡ್ಡಾಯವಾಗಿ ಬರೆಸಿ ಪರಿಶೀಲಿಸುವುದು. ಇಲ್ಲವಾದಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಬಳಿ ಇರುವ ಭೌತಿಕ ನಗದು ಶಿಲ್ಕನ್ನು ಪರಿಶೀಲಿಸಿ ನಗದು ಪುಸ್ತಕ ಬರೆದಿರುವ ಕೊನೆಯ ದಿನಾಂಕದಂದು ಸದರಿ ನಗದು ಶಿಲ್ಕಿನ ಮೊತ್ತವನ್ನು ನಮೂದಿಸಿ ಷರಾ ದಾಖಲಿಸುವುದು.</td><td>ವಿಮರ್ಶೆ: ನಗದು ಪುಸ್ತಕವನ್ನು ತಂತ್ರಾಂಶದಲ್ಲಿ ನಿರ್ವಹಣೆ ಮಾಡಲಾಗಿದ್ದು, ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ಧೃಢೀಕರಿಸಿರುತ್ತಾರೆ.</td></tr>
<tr><td>4) ನಗದು ಪುಸ್ತಕವನ್ನು ಅಳಿಸಲಾಗದ ಶಾಯಿಯಲ್ಲಿ ಆರಂಭ ಮತ್ತು ಕೊನೆಯ ಶಿಲ್ಕನ್ನು ಅಂತಿಮಗೊಳಿಸಿ ಅಂಕಿ ಮತ್ತು ಅಕ್ಷರಗಳಲ್ಲಿ ಬರೆಯಲಾಗಿದೆಯೇ? ಮತ್ತು ಆಖೈರು ಶಿಲ್ಕು ಯಾರ ಸ್ವಾಧೀನದಲ್ಲಿದೆ? ಪ್ರತಿ ದಿನದ ನಗದು ಪುಸ್ತಕಕ್ಕೆ ಸಂಬಂಧಪಟ್ಟವರು ಸಹಿ ಮಾಡಿರು ತ್ತಾರೆಯೇ? ಎಂದು ಪರಿಶೀಲಿಸಿ ದೃಢೀಕರಿಸಲಾಗಿದೆಯೇ? (ಇಲ್ಲವಾದಲ್ಲಿ ಕಡ್ಡಾಯ ವಾಗಿ ಪ್ರತಿ ದಿನದ ನಗದು ಪುಸ್ತಕಕ್ಕೆ ಸಂಬಂಧಿಸಿದವರ ಸಹಿ ಮಾಡಿಸಿ ಪರಿಶೀಲಿಸುವುದು)</td><td>ವಿಮರ್ಶೆ: ನಗದು ಪುಸ್ತಕವನ್ನು ತಂತ್ರಾಂಶದಲ್ಲಿ ನಿರ್ವಹಣೆ ಮಾಡಲಾಗಿದ್ದು, ದಿನದ ಅಂತ್ಯಕ್ಕೆ ಸಂಘದ ಸೀಲು ಹಾಕಿ ಧೃಢೀಕರಿಸಿರುತ್ತಾರೆ.</td></tr>
<tr><td>5) ಸಂಘದ ನಗದು ಕೈ ಶಿಲ್ಕಿನ ಮಿತಿ ನಿಗದಿಪಡಿಸಿದ ವಿವರ ಬೈಲಾ ಸಂಖ್ಯೆ: ಆಡಳಿತ ಮಂಡಳಿಯ ಠರಾವು ಸಂಖ್ಯೆ ಮತ್ತು ದಿನಾಂಕ ನಿಗದಿಪಡಿಸಿದ ಮೊತ್ತ ರೂ.</td><td>ಅನುಬಂಧ – 5ರಲ್ಲಿ ವಿವರಿಸಲಾಗಿದೆ.</td></tr>
<tr><td>6) ಲೆಕ್ಕಪರಿಶೋಧನಾ ಅವಧಿಯಲ್ಲಿ ನಗದು ಪರಿಶೀಲನೆ ಮಾಡಿರುವ ವಿವರಗಳು.<br><br>ಒಂದು ವೇಳೆ ಅಧ್ಯಕ್ಷರು ಮತ್ತು ಆಡಳಿತ ಮಂಡಳಿಯವರಿಂದ ಪರಿಶೀಲನೆ ಮಾಡದಿದ್ದಲ್ಲಿ ಈ ಕುರಿತು ಆಕ್ಷೇಪ ವ್ಯಕ್ತಪಡಿಸಿ ವರದಿಯಲ್ಲಿ ಜವಾಬ್ದಾರಿ ನಿಗದಿಪಡಿಸುವುದು.</td><td>
<table>
<tr><th>ಕ್ರ. ಸಂ.</th><th>ಪರಿಶೀಲಿಸಿದವರ ಹೆಸರು ಮತ್ತು ಹುದ್ದೆ</th><th>ಪರಿಶೀಲನೆ ಮಾಡಿದ ದಿನಾಂಕ</th></tr>
<tr><td>1</td><td>ಅಧ್ಯಕ್ಷರು ಮತ್ತು ಆ.ಮಂ. ಯವರಿಂದ</td><td>ಅರ್ಧವಾರ್ಷಿಕ ಮತ್ತು ವಾರ್ಷಿಕ ಪರಿಶೀಲನೆ ಆಗಿರುತ್ತದೆ.</td></tr>
<tr><td>2</td><td>ಬ್ಯಾಂಕ್ ನಿರೀಕ್ಷಕರಿಂದ</td><td>–</td></tr>
<tr><td>3</td><td>ಆಂತರಿಕ ಲೆಕ್ಕ ಪರಿಶೋಧಕರಿಂದ</td><td>ತ್ರೈಮಾಸಿಕ ಪರಿಶೋಧನೆ ಆಗಿರುತ್ತದೆ.</td></tr>
<tr><td>4</td><td>ಸಹಕಾರ ಇಲಾಖೆಯಿಂದ</td><td>–</td></tr>
<tr><td>*</td><td>**ವಿಮರ್ಶೆ**</td><td></td></tr>
</table>
</td></tr>
</table>

<table>
<tr><td>7) ನಗದು ಭದ್ರತೆಗೆ ಭದ್ರತಾ ಕೊಠಡಿ/ ಕ್ಯಾಶ್ ಚೆಸ್ಟ್ ಇದೆಯೇ?</td><td>ನಗದು ಭದ್ರತೆಗೆ ಭದ್ರತಾ ಕೊಠಡಿ/ಕ್ಯಾಷ್ ಚೆಸ್ಟ್ ನಿರ್ವಹಿಸಲಾಗಿದೆ.</td></tr>
<tr><td>8) ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಲಾಗಿದೆಯೇ?</td><td>ಅಗತ್ಯವಿರುವಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸ ಲಾಗಿದೆ.</td></tr>
<tr><td>9) ಲೆಕ್ಕ ಪರಿಶೋಧನಾ ಸಮಯದಲ್ಲಿ ನಗದು ಶಿಲ್ಕು ಪರಿಶೀಲನೆ ವಿವರಗಳು</td><td><table>
<tr><td>ಕ್ರ. ಸಂ.</td><td>ಪರಿಶೀಲನೆ ಮಾಡಿದ ದಿನಾಂಕ</td><td>ನಗದು ಪುಸ್ತಕದಂತೆಇರುವ ಮೊತ್ತ</td><td>ಭೌತಿಕವಾಗಿ ಪರಿಶೀಲಿಸಿದ ಮೊತ್ತ</td></tr>
<tr><td colspan="4">ಅನುಬಂಧ 5 ರಲ್ಲಿ ವಿವರಿಸಲಾಗಿದೆ.</td></tr>
</table></td></tr>
<tr><td>10) ಪರಿಶೀಲನೆಯಲ್ಲಿ ಕೊರತೆ ಕಂಡು ಬಂದಲ್ಲಿ ತಕ್ಷಣ ಇಲಾಖಾ ಅಧಿಕಾರಿಗಳಿಗೆ ವರದಿ ಮಾಡುವುದು.</td><td>ವಿಮರ್ಶೆ: ಪರಿಶೀಲನೆಯಲ್ಲಿ ಯಾವುದೇ ಕೊರತೆ ಕಂಡುಬಂದಿರುವುದಿಲ್ಲ.</td></tr>
<tr><td>11) ನಗದು ಶಿಲ್ಕನ್ನು ಸೂಕ್ತ ವಿಮೆಗೆ ಒಳಪಡಿಸ ಲಾಗಿದೆಯೇ?</td><td>ಅನುಬಂಧ – 6ರಲ್ಲಿ ವಿವರಿಸಲಾಗಿದೆ.</td></tr>
</table>

## 25) ಬ್ಯಾಂಕ್ ಖಾತೆಗಳಲ್ಲಿನ ಶಿಲ್ಕು :

| ಕ್ರ. ಸಂ. | ಬ್ಯಾಂಕಿನ ಹೆಸರು ಮತ್ತು ಶಾಖೆಯ ಹೆಸರು | ಖಾತೆ ವಿಧ | ಖಾತೆ ಸಂಖ್ಯೆ | ಬ್ಯಾಂಕಿನ ಪ್ರಕಾರ ಉಳಿಕೆ ಶಿಲ್ಕು | ಸಂಘದ ಪುಸ್ತಕದ ಪ್ರಕಾರ ಉಳಿಕೆ ಶಿಲ್ಕು | ಅಂತರ | ಸಮನ್ವಯ ಪಟ್ಟಿ ಕಡ್ಡಾಯವಾಗಿ ಲಗತ್ತಿಸುವುದು |
|---|---|---|---|---|---|---|---|

| ಅನುಬಂಧ 7 ರಲ್ಲಿ ವಿವರಿಸಲಾಗಿದೆ. | |
|---|---|
| 1. ವಿವಿಧ ಬ್ಯಾಂಕ್ ಖಾತೆಗಳ ಬಗ್ಗೆ ವರ್ಷಾಂತ್ಯಕ್ಕೆ ಇರುವ ಮೊತ್ತಕ್ಕೆ ಸಂಬಂಧಿಸಿದಂತೆ ಬ್ಯಾಂಕ್/ಸಂಘ ಸಂಸ್ಥೆಗಳಿಂದ ಆ ವರ್ಷದ ಖಾತೆ ವಿವರ (Extract) ಪಡೆದು ಪರಿಶೀಲಿಸಿ ವರ್ಷಾಂತ್ಯಕ್ಕೆ ದೃಢೀಕರಣ ಪತ್ರ ಪಡೆದು ವರದಿಗೆ ಲಗತ್ತಿಸುವುದು. | ಸಂಘವು ಹೊರಗಿನಿಂದ ವಿವಿಧ ಬ್ಯಾಂಕು ಖಾತೆಗಳ ವರ್ಷಾಂತ್ಯಕ್ಕೆ ಇರುವ ಬಾಕಿಗಳಿಗೆ ಹಾಗೂ ಸಂಬಂಧಿಸಿದ ಸಂಘ ಸಂಸ್ಥೆಗಳ ಬಾಕಿ ದೃಢಿಕರಣ ಪತ್ರಗಳಿಗೆ ತಾಳೆಯಾಗಿರುತ್ತದೆ. |
| 2. ಪ್ರತಿ ವರ್ಷಾಂತ್ಯಕ್ಕೆ ಬ್ಯಾಂಕಿನ ಸಮನ್ವಯ ತಃಖ್ತೆಯಂತೆ ಶಿಲ್ಕು ತಾಳೆಯಾಗದಿದ್ದಲ್ಲಿ, ಅದರಲ್ಲಿ ಇರುವ ವ್ಯತ್ಯಾಸವನ್ನು ಹಿಂದಿನ ವ್ಯತ್ಯಾಸಗಳೊಂದಿಗೆ ಪರಿಶೀಲಿಸಿ ಸಂಬಂಧಪಟ್ಟವರ ಮೇಲೆ ಜವಾಬ್ದಾರಿ ನಿಗದಿಪಡಿಸುವುದು, | ವ್ಯತ್ಯಾಸವಿರುವ ಖಾತೆಗಳಿಗೆ ಸಮನ್ವಯ ಪಟ್ಟಿಯನ್ನು ತಯಾರಿಸಿ **ಅನುಬಂಧ 7** ರಲ್ಲಿ ಲಗತ್ತಿಸಲಾಗಿದೆ. |
| 3. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿದ್ದಾರೆಯೇ? ಹೊಂದಿದ್ದಲ್ಲಿ ಆಕ್ಷೇಪಿಸಿ, ಮುಕ್ತಾಯಗೊಳಿಸಲು ಸೂಚಿಸುವುದು. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 58ರ ವ್ಯತಿರಿಕ್ತವಾಗಿ ಬೇರೆ ಸಂಘ ಸಂಸ್ಥೆಗಳಲ್ಲಿ, ಸೌಹಾರ್ದ ಸಹಕಾರಿಗಳಲ್ಲಿ ವ್ಯವಹಾರ ನಡೆಸಲು ಖಾತೆಗಳನ್ನು ಹೊಂದಿರುವುದಿಲ್ಲ. |

| | |
|---|---|
| 4. ಸಂಘವು ವಿವಿಧ ಸಂಘ ಸಂಸ್ಥೆ/ಬ್ಯಾಂಕುಗಳಲ್ಲಿ ಅನಗತ್ಯ ನಿಷ್ಕ್ರಿಯ ಖಾತೆಗಳನ್ನು ಹೊಂದಿದ್ದಲ್ಲಿ ಅವುಗಳನ್ನು ಮುಕ್ತಾಯಗೊಳಿಸಲು ಸೂಚಿಸುವುದು. | ಯಾವುದು ಇರುವುದಿಲ್ಲ. |
| 5. ವರದಿ ಸಾಲಿನಲ್ಲಿ ಬ್ಯಾಂಕು ಖಾತೆಗಳ ಮೇಲೆ ಬಂದಿರುವ ಬಡ್ಡಿ ಆದಾಯ. | ರೂ.22,70,098.00 |
| 6. ಬ್ಯಾಂಕು ಖಾತೆಗಳ ಪೈಕಿ ಒಂದು ವರ್ಷ ಮೇಲ್ಪಟ್ಟ ಬಡ್ಡಿ ಆದಾಯ ಬಾರದೇ ಇರುವ ಖಾತೆಗಳ ವಿವರ ಠೇವಣಿಯ ಮೊತ್ತ ಸಂಘಕ್ಕೆ ಮರಳಿ ಬಾರದೇ ಇರುವ ಶಿಲ್ಕುಗಳ ಬಗ್ಗೆ ವರ್ಷಾಂತ್ಯಕ್ಕೆ ಸಂಪೂರ್ಣ ಅವಕಾಶ ಕಲ್ಪಿಸಲಾಗಿದೆಯೇ? | ಸಂಘಕ್ಕೆ ಮರಳಿ ಬಾರದೇ ಇರುವ ಠೇವಣಿ ಮೊತ್ತ ಯಾವುದೂ ಇರುವುದಿಲ್ಲ. |
| 7. ಬ್ಯಾಂಕಿನಿಂದ ಡ್ರಾ ಮಾಡಿ ನಗದು ಪುಸ್ತಕಕ್ಕೆ ತೀರಾ ವಿಳಂಬವಾಗಿ ಜಮೆ ತೆಗೆದುಕೊಂಡ ಮತ್ತು ನಗದು ಪುಸ್ತಕದಲ್ಲಿ ಖರ್ಚು ಹಾಕಿ ಬ್ಯಾಂಕಿಗೆ ತೀರಾ ವಿಳಂಬವಾಗಿ ಜಮೆ ಮಾಡಿದ ಪ್ರಕರಣಗಳು ಇದ್ದಲ್ಲಿ ವಿವರ ನೀಡಿ. | ಪ್ರಕರಣಗಳ ವಿವರ : ಯಾವುದೂ ಇರುವುದಿಲ್ಲ. |

## 26) ಸದಸ್ಯರ ಸಾಲ ಮತ್ತು ಮುಂಗಡಗಳು:

| | |
|---|---|
| 1. ಸಂಘವು ಸಾಲದ ಒಳ ನಿಯಮಾವಳಿಗಳನ್ನು ರಚಿಸಿಕೊಂಡು ಅನುಮೋದನೆ ಪಡೆಯಲಾಗಿದೆಯೇ? | ಉಪ ನಿಯಮ 66(1)ರ ತಿದ್ದುಪಡಿ ದಿನಾಂಕ: 27-12-2022ರ ಅಪರ ನಿಬಂಧಕರ ಆದೇಶದಂತೆ ದಿನಾಂಕ: 24-03-2023ರ ಆಡಳಿತ ಮಂಡಳಿ ತೀರ್ಮಾನದಂತೆ, ಸಾಲದ ಗರಿಷ್ಠ ಮಿತಿಯನ್ನು ರೂ.2,00,000.00ಕ್ಕೆ ನಿಗದಿಪಡಿಸಿ ದಿನಾಂಕ: 01-04-2023ರಿಂದ ಅನ್ವಯವಾಗುವಂತೆ ಜಾರಿಗೊಳಿಸಲಾಗಿದೆ. |

ಉಪ ನಿಯಮಗಳ ಹಾಗೂ ಸಾಲದ ನಿಯಮಾಳಿಗಳ ಪ್ರಕಾರ ಸದಸ್ಯರಿಗೆ ನೀಡಬಹುದಾದ ವಿವಿಧ ರೀತಿಯ ಸಾಲಗಳ ವಿವರ

| ಕ್ರ. ಸಂ. | ಸಾಲದ ವಿಧ | ನಿಯಮಾವಳಿ ಪ್ರಕಾರ ಸಾಲದ ಗರಿಷ್ಟ ಮಿತಿ | ಅಢಾವೆಯಂತೆ ವರ್ಷಾಂತ್ಯದ ಬಾಕಿ (ರೂಗಳಲ್ಲಿ) | ಕುಳುವಾರದಂತೆ ಬಾಕಿ (ರೂಗಳಲ್ಲಿ) | ಅಂತರ | |
|---|---|---|---|---|---|---|
| | | | | | ಹೆಚ್ಚು | ಕಡಿಮೆ |
| 1 | ಠೇವಣಿ ಆಧಾರಿತ ಸಾಲ | ಠೇವಣಿಯ ಶೇ.80 | 59,67,368 | 59,67,368 | – | – |
| 2 | ಕೊಳೆ ಸಾಲ | ರೂ.50,000.00 | 34,32,731 | 34,32,731 | – | – |
| 3 | ಕಟಾವು ಸಾಲ | ರೂ.1,50,000.00 | 30,58,20,923 | 30,58,20,923 | – | – |
| 4 | ಅಡಿಕೆ ಆಧಾರ ಮುಂಗಡ | – | 116,23,01,394.12 | 116,23,01,394.12 | – | – |

| | |
|---|---|
| 2. ವರದಿ ವರ್ಷದಲ್ಲಿ ಆಡಳಿತ ಮಂಡಳಿ ಸಭೆಯ ಅನುಮೋದನೆ ಪಡೆಯದೇ ನೀಡಿರುವ ಸಾಲಗಳ ವಿವರವಾದ ಅನುಬಂಧ ವರದಿಗೆ ಲಗತ್ತಿಸುವುದು. | ಯಾವುದೂ ಇರುವುದಿಲ್ಲ. |
| 3. ಸದಸ್ಯರಿಗೆ ನೀಡಿರುವ ಸಾಲವು ಉಪನಿಯಮದ ಮಿತಿ ಮೀರಿರುವ ಬಗ್ಗೆ ಹಾಗೂ ಕಾರ್ಯ ವ್ಯಾಪ್ತಿ ಮೀರಿರುವ ಬಗ್ಗೆ ವರದಿಯಲ್ಲಿ ವಿವರಿಸುವುದು. | ಕೆಲವೊಂದು ಸಂದರ್ಭಗಳಲ್ಲಿ ನೀಡಿರುವ ಸಾಲವು ಉಪನಿಯಮದ ಮಿತಿ ಮೀರಿರುವುದನ್ನು ಗಮನಿಸಲಾಗಿದ್ದು, ಈ ಕುರಿತು ಕ್ರಮವಿಡಲು ಸೂಚಿಸಿದೆ. ಕಾರ್ಯವ್ಯಾಪ್ತಿ ಮೀರಿ ಯಾವುದೇ ಸಾಲವನ್ನು ನೀಡಿರುವುದಿಲ್ಲ.<br><br>**ಸಮಜಾಯಿಷಿ: ಕೆಲವೊಂದು ಸಂದರ್ಭಗಳಲ್ಲಿ ಮಾರುಕಟ್ಟೆ ಧಾರಣೆಯನ್ನು ಪರಿಗಣಿಸಿ, ತತ್‌ಕ್ಷಣದ ವ್ಯಾಪಾರಕ್ಕೆ ಬಿಡುವುದನ್ನು ದೃಢಪಡಿಸಿಕೊಂಡು ಅಡಿಕೆ ಆಧಾರ ಸಾಲವನ್ನು ಮಿತಿಗಿಂತ ಹೆಚ್ಚಿಗೆ ಪಾವತಿ ಮಾಡಿದ್ದರೂ, ನಂತರ ಸಲುವಳಿ ಹಣದಲ್ಲಿ ಜಮಾ ಪಡೆಯಲಾಗುತ್ತಿದೆ.** |
| 4. ಸಂಘದ ಪ್ರತಿಯೊಬ್ಬ ಸದಸ್ಯರು ಹೊಂದಿರುವ ಆಸ್ತಿ – ಭೂಮಿಯ ಕುರಿತು ಸಂಘದಲ್ಲಿ ರಿಜಿಸ್ಟರ್ ಬರೆದಿರುವುದರ ಬಗ್ಗೆ ಪರಿಶೀಲಿಸಿ ವರದಿಯಲ್ಲಿ ವಿವರಿಸಲಾಗಿದೆಯೇ? | ಸಂಘದ ಪ್ರತಿಯೊಬ್ಬ ಸದಸ್ಯರು ಹೊಂದಿರುವ ಆಸ್ತಿ/ಭೂಮಿಯ ಸಂಪೂರ್ಣ ವಿವರ ಲಭ್ಯವಿರುವುದಿಲ್ಲ. ಪರಂತು ತಂತ್ರಾಂಶದಲ್ಲಿ ಸದಸ್ಯರು ನೀಡಿರುವ ಪಹಣಿಯ ವಿವರಗಳನ್ನು ನಮೂದಿಸಲಾಗಿದೆ. |
| 5. ವರದಿ ಸಾಲಿನಲ್ಲಿ ಸಂಘವು ನೀಡಿರುವ ಸಾಲಗಳಲ್ಲಿ ಒಂದೇ ವ್ಯಕ್ತಿಗೆ/ಒಂದೇ ವ್ಯಕ್ತಿ ಸಮೂಹಕ್ಕೆ ದೊಡ್ಡ ಪ್ರಮಾಣದ ಸಾಲ ನೀಡಲಾಗಿದೆಯೇ? | ಒಂದೇ ವ್ಯಕ್ತಿಗೆ/ಒಂದೇ ವ್ಯಕ್ತಿ ಸಮೂಹಕ್ಕೆ ದೊಡ್ಡ ಪ್ರಮಾಣದ ಸಾಲ ನೀಡಿರುವುದಿಲ್ಲ. |
| 6. ಪ್ರತಿಯೊಂದು ಸಾಲ ಖಾತೆಯ ವರ್ಷಾಂತ್ಯದ ಬಾಕಿ ತೋರಿಸುವ ಶೆಡ್ಯೂಲ್ ರಿಜಿಸ್ಟರನ್ನು ಸಂಘದಲ್ಲಿ ಇಟ್ಟಿರುವ ಬಗ್ಗೆ ಹಾಗೂ ಅದನ್ನು ಲೆಕ್ಕಪರಿಶೋಧನಾ ಸಮಯದಲ್ಲಿ ಪರಿಶೀಲಿಸಿ ವರದಿಯಲ್ಲಿ ವಿವರಿಸುವುದು. ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆ ಇರುವುದರ ಬಗ್ಗೆ ವಿಮರ್ಶಿಸುವುದು. | ತಂತ್ರಾಂಶದಲ್ಲಿ ಸಾಲದ ಖಾತೆಯನ್ನು ನಿರ್ವಹಿಸ ಲಾಗುತ್ತಿದ್ದು, ಕುಳುವಾರು ಪಟ್ಟಿ ಲಭ್ಯವಿರುತ್ತದೆ. ವರದಿ ಸಾಲಿನ ಅಂತ್ಯಕ್ಕೆ ಕುಳುವಾರು ಪಟ್ಟಿಯ ಮೊತ್ತ ಅಥಾವೆ ಮೊತ್ತಕ್ಕೆ ತಾಳೆಯಿರುತ್ತದೆ. |
| 7. ವರದಿ ಸಾಲಿನಲ್ಲಿ ವಸೂಲಾದ ಸಾಲ ಹಾಗೂ ಬಡ್ಡಿಯ ಮೊತ್ತವನ್ನು ವಾಸ್ತವವಾಗಿ ವಸೂಲಿಸದೇ ಪುನರ್ನವೀಕರಿಸಿದ ಪ್ರಕರಣಗಳಿದ್ದಲ್ಲಿ ಸಂಪೂರ್ಣ ವಿವರ ನೀಡುವುದು | ಅಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ. |

| | |
|---|---|
| 8. ಲೆಕ್ಕಪರಿಶೋಧನಾ ಸಮಯದಲ್ಲಿ ಚಿನ್ನಾಭರಣ ಸಾಲಕ್ಕೆ ಅಡವಿಟ್ಟಿರುವ ಚಿನ್ನಾಭರಣಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ ಬೇರೊಬ್ಬ ಬಂಗಾರ ಪರೀಕ್ಷಕರಿಂದ ಪರಿಶೀಲನೆ ಮಾಡಿಸಿಕೊಂಡು ಅವುಗಳ ಸತ್ಯಾಸತ್ಯತೆ ಬಗ್ಗೆ ಪ್ರತ್ಯೇಕ ವರದಿ ಪಡೆಯಲಾಗಿದೆಯೇ? | ಚಿನ್ನಾಭರಣ ಸಾಲವನ್ನು ನೀಡಿರುವುದಿಲ್ಲ. |
| 9. ಚಿನ್ನಾಭರಣ ಸಾಲಕ್ಕಾಗಿ ಅಡವಿಟ್ಟಿರುವ ಚಿನ್ನಾಭರಣ ಮೌಲ್ಯದ ಮೇಲೆ ವಿಮೆ ಮಾಡಿಸಲಾಗಿದೆಯೇ? | ಅನ್ವಯಿಸುವುದಿಲ್ಲ. |
| 10. ಅಡಮಾನ ಸಾಲ (Mortgage Loan) ಕ್ಕೆ ಅಡವಿಟ್ಟಿರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಮಾನ್ಯತೆ ಪಡೆದ ಮೌಲ್ಯಮಾಪಕರಿಂದ ಮೌಲ್ಯಮಾಪನ ಮಾಡಿಸಿಕೊಳ್ಳ ಲಾಗಿದೆಯೇ? | ಅಡಮಾನ ಸಾಲ ನೀಡಿರುವುದಿಲ್ಲ. |
| 11. ವ್ಯತ್ಯಾಸವಿದ್ದಲ್ಲಿ, ಹಿಂದಿನ ಸಾಲಿನಿಂದ ಮುಂದುವರೆದ ವ್ಯತ್ಯಾಸದ ಮೊತ್ತವನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮವಿಡುವುದು. | ವ್ಯತ್ಯಾಸ ಕಂಡುಬಂದಿರುವುದಿಲ್ಲ. |
| 12. ಲೆಕ್ಕಪರಿಶೋಧನಾ ಅವಧಿಯಲ್ಲಿ ಕಂಡು ಬಂದಿರುವ ವ್ಯತ್ಯಾಸದ ಮೊತ್ತ.<br>(ಈ ಅಂಶದ ಕುರಿತು ನಗದು ಪುಸ್ತಕದಲ್ಲಿ ಇರುವ ಹಾಗೂ ವೈಯಕ್ತಿಕ ಖಾತೆಗಳ ಪ್ರಕಾರ ಇರುವ ಎಲ್ಲಾ ನಮೂದು ಗಳನ್ನು ಪರಿಶೀಲಿಸಿ ವ್ಯತ್ಯಾಸ ಇದ್ದಲ್ಲಿ ಮತ್ತು ಆಸ್ತಿ ತಃಖ್ತೆಗಿಂತ ಸಾಲದ ಕುಳುವಾರು ಕಡಿಮೆ ಇದ್ದು, ದುರುಪಯೋಗ ಎಂದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಇಡುವುದು) | ಯಾವುದೂ ಇರುವುದಿಲ್ಲ. |
| 13. ಕುಳುವಾರು ಪಟ್ಟಿಯಲ್ಲಿ 250ಕ್ಕಿಂತ ಕಡಿಮೆ ಸಾಲ ಖಾತೆಗಳಿದ್ದಲ್ಲಿ ಎಲ್ಲಾ ಖಾತೆಗಳನ್ನು ಒಳಗೊಂಡ ಪ್ರತ್ಯೇಕ ಖಾತೆವಾರು ಪಟ್ಟಿ ವರದಿಗೆ ಲಗತ್ತಿಸಲಾಗಿದೆಯೇ? ಕುಳುವಾರು ಪಟ್ಟಿಯಲ್ಲಿ 250ಕ್ಕಿಂತ ಹೆಚ್ಚಿನ ಸಾಲ ಖಾತೆಗಳಿದ್ದಲ್ಲಿ ವರ್ಷಾಂತ್ಯದ ಸಾಲ ಖಾತೆ ಬಾಕಿ ರಿಜಿಸ್ಟರನ್ನು ಪರಿಶೀಲಿಸಿ, ಅದರ ಸಂಕ್ಷಿಪ್ತವನ್ನು ವರದಿಗೆ ಕಡ್ಡಾಯವಾಗಿ ಲಗತ್ತಿಸುವುದು. | ಕುಳುವಾರು ಪಟ್ಟಿಯ ಸಂಕ್ಷಿಪ್ತ ವಿವರವನ್ನು ವರದಿಗೆ ಲಗತ್ತಿಸಲಾಗಿದೆ. |
| 14. ವರ್ಷಾಂತ್ಯಕ್ಕೆ ಬರತಕ್ಕ ಇರುವ ಸಾಲದ ಪೈಕಿ ಆಧಾರ ಮತ್ತು ಆಧಾರ ರಹಿತ ಸಾಲಗಳ ಮೊತ್ತ ಎಷ್ಟು? ಒಟ್ಟು ಬರತಕ್ಕ ಸಾಲಿಗೆ ಅದರ ಪ್ರತಿಶತ ಪ್ರಮಾಣ ಎಷ್ಟು? | ಸಂಘದಿಂದ ವಿತರಿಸಿರುವ ಎಲ್ಲಾ ಸಾಲಗಳು ಆಧಾರ ಸಹಿತ ಸಾಲಗಳಾಗಿರುತ್ತದೆ. |

| | |
|---|---|
| 15. ಲೆಕ್ಕಪರಿಶೋಧನಾ ನಿರ್ದೇಶನ ಸಂಖ್ಯೆ 17(60) ಹಾಗೂ 19(11) ರಂತೆ ವರದಿ ಸಾಲಿನಲ್ಲಿ ವಿತರಿಸಿದ ಎಲ್ಲಾ ಸಾಲಗಳ ಅರ್ಜಿಗಳನ್ನು ಹಾಗೂ ಅದಕ್ಕೆ ಪಡೆದ ಎಲ್ಲ ದಾಖಲಾತಿಗಳನ್ನು ಅಂದರೆ ಸಾಲದ ಬಾಂಡು. ಭದ್ರತೆ, ಜಾಮೀನು ಮುಂತಾದವುಗಳನ್ನು ನಿಯಮಾನುಸಾರ ಪಡೆದುಕೊಂಡಿರುತ್ತಾರೆಯೇ? ಪರಿಶೀಲಿಸಿ ಗುರುತರ ನ್ಯೂನತೆಗಳನ್ನು ಪ್ರತ್ಯೇಕವಾಗಿ ವಿವರ ನಮೂದಿಸುವುದು. | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ಅಗತ್ಯ ವಿರುವ ದಾಖಲಾತಿಗಳನ್ನು ಪಡೆದುಕೊಂಡಿರು ತ್ತಾರೆ. |
| 16. ಲೆಕ್ಕಪರಿಶೋಧನಾ ನಿರ್ದೇಶನ ಸಂಖ್ಯೆ 18(29) ರಂತೆ ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳಿಗೆ ಇಟ್ಟಿರುವ ಭದ್ರತೆಗಳನ್ನು ಈ ಮುಂದೆ ನಮೂದಿಸಿದ ಪ್ರಮಾಣದಲ್ಲಿ ಭೌತಿಕವಾಗಿ ಪರಿಶೀಲಿಸಿ ವಿವರಿಸುವುದು. | ವರದಿ ಸಾಲಿನಲ್ಲಿ ವಿತರಿಸಿದ ಸಾಲಗಳನ್ನು ಭೌತಿಕವಾಗಿ ಪರಿಶಿಲನೆ ಮಾಡಿದ್ದು, ಸಂಬಂಧಪಟ್ಟ ಭದ್ರತೆಗಳನ್ನು ಸಹ ಪರಿಶಿಲನೆ ಮಾಡಲಾಗಿದೆ. |
| 17. ಲೆಕ್ಕಪರಿಶೋಧನೆಯಲ್ಲಿ ನಿಯಮಾನುಸಾರ ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರ ಪರಿಶೀಲಿಸಿ ಸರಿ/ತಪ್ಪು ಇರುವ ಬಗ್ಗೆ ಅಂಕಿ ಸಂಖ್ಯೆಗಳೊಂದಿಗೆ ಪರಿಶೀಲಿಸಿ ಲೆಕ್ಕಾಚಾರದ ತಃಖ್ತೆಯನ್ನು ವರದಿಗೆ ಲಗತ್ತಿಸುವುದು. | ಬಡ್ಡಿ ಲೆಕ್ಕಾಚಾರವನ್ನು ತಂತ್ರಾಂಶದಲ್ಲಿ ಅಳವಡಿಸಿ ಕೊಂಡಿರುತ್ತಾರೆ. ಆಯ್ದ ಪ್ರಕರಣಗಳಲ್ಲಿ ಸಾಲದ ಮೇಲಿನ ಬಡ್ಡಿ ಲೆಕ್ಕಾಚಾರವನ್ನು ಪರಿಶೀಲಿಸಲಾಗಿದ್ದು ಸರಿ ಇರುವುದನ್ನು ಗಮನಿಸಲಾಗಿದೆ. |
| 18. ಲೆಕ್ಕಪರಿಶೋಧನಾ ಸೂಚನೆ (Audit Instruction No.1) ಸಂಖ್ಯೆ:ಸಿಎಡಿ/ಎಎಫ್ಆರ್-1/ ಎ.1,81-82 ದಿನಾಂಕ : 04-07-1981 ರನ್ವಯ ಆಯ್ದ ಪ್ರಕರಣಗಳಲ್ಲಿ ಲೆಕ್ಕಪರಿಶೋಧನಾ ಕಾಲಕ್ಕೆ ಸಾಲಗಾರರ ಸಾಲದ ಖಾತೆಯಲ್ಲಿರುವ ಬಾಕಿಯನ್ನು ಸಾಲಗಾರರಿಂದ ಖಚಿತ ಪಡಿಸಿಕೊಂಡಿರುವುದರ ಬಗ್ಗೆ ವಿಮರ್ಶಿಸಿ ಅದರ ಪಟ್ಟಿಯನ್ನು ವರದಿಗೆ ಪ್ರತ್ಯೇಕವಾಗಿ ಲಗತ್ತಿಸುವುದು. | ಸಾಲಗಾರರಿಂದ ಧೃಢೀಕರಣ ಪತ್ರವನ್ನು ತೆಗೆದು ಕೊಂಡು ವರದಿಗೆ ಲಗತ್ತಿಸಲಾಗಿದೆ. |
| 19. ಒಟ್ಟು ಸದಸ್ಯರ ಸಂಖ್ಯೆಗೆ ಸಂಘದ ಸಾಲದ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು ಲೆಕ್ಕಾಚಾರ ಹಾಕಿ ವಿಮರ್ಶಿಸುವುದು. | ಸಂಘದ ಒಟ್ಟು 31138 ಸದಸ್ಯರಲ್ಲಿ ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಸಂಖ್ಯೆ 17123 ಇದ್ದು, ವ್ಯವಹಾರದಲ್ಲಿ ಪಾಲ್ಗೊಂಡಿರುವ ಸದಸ್ಯರ ಶೇಕಡಾವಾರು 54.99 ಇರುತ್ತದೆ. |

| | |
|---|---|
| 20. ಸಂಘದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿರುವ ಸದಸ್ಯರ ರಿಜಿಸ್ಟರ್ ಇಡಲಾಗಿದೆಯೇ? ವರದಿ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯರ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಮನಿಸಿ ವಿಶ್ಲೇಷಿಸುವುದು. | ಸಂಘದಲ್ಲಿ ಸಾಲಕ್ಕೆ ಅರ್ಜಿ ಸಲ್ಲಿಸಿದ ಸದಸ್ಯರ ರಿಜಿಸ್ಟರ್ ಇಡಲಾಗಿದ್ದು, ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಸದಸ್ಯ ಸಂಖ್ಯೆ ಹಾಗೂ ಸಾಲ ವಿತರಿಸಿದ ಸದಸ್ಯರ ಸಂಖ್ಯೆಯನ್ನು ಗಣಕಯಂತ್ರದ ತಂತ್ರಾಂಶದಲ್ಲಿ ಅಳವಡಿಸಿದೆ. |
| 21. ಸಾಲದ ವಸೂಲಾತಿಗಾಗಿ ಸಂಘವು ಮಾಡಿರುವ ಎ.ಬಿ.ಎನ್ ಹಾಗೂ ಇ.ಪಿ ವೆಚ್ಚಗಳನ್ನು ಲಾಭ–ನಷ್ಟ ತಃಖ್ತೆಗೆ ಖರ್ಚು ಹಾಕದೇ ಅಥಾವ ತಃಖ್ತೆಯಲ್ಲಿ ಪ್ರತ್ಯೇಕ ಕಾಣಿಸಿರುವ ಬಗ್ಗೆ ವಿಮರ್ಶಿಸಿ. | ಸದರಿ ಸಾಲಿನಲ್ಲಿ ಇ.ಪಿ ವೆಚ್ಚಗಳನ್ನು ಹಾಕಿರುವುದಿಲ್ಲ. |

## 27) ಸಾಲಗಳಲ್ಲಿ ಗಮನಿಸಲಾದ ನ್ಯೂನ್ಯತೆಗಳ ವಿವರ :

ಸಾಲ ವಿತರಣೆಯಲ್ಲಿ ಆಗಿರುವ ಲೋಪದೋಷಗಳ ಮತ್ತು ನ್ಯೂನತೆಗಳು ಲೆಕ್ಕಪರಿಶೋಧನೆ ಕಾಲಕ್ಕೆ ಕಂಡು ಬಂದ ವಿವರಗಳನ್ನು ವಿಮರ್ಶಿಸುವುದು. ಕೆಲವೊಂದು ಸಾಲವನ್ನು ಕೊಡುವಾಗ ಸದಸ್ಯರನ್ನು ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡದೇ ಇರುವುದನ್ನು ಗಮನಿಸಲಾಗಿದ್ದು, ಈ ಕುರಿತು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಸಾಧ್ಯವಾದಷ್ಟು ಎಲ್ಲಾ ಪ್ರಕರಣಗಳಲ್ಲೂ ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡಲಾಗುತ್ತಿದ್ದು, ಕೆಲವೊಮ್ಮೆ ನೆಟ್‌ವರ್ಕ್ ಸಮಸ್ಯೆಯಿಂದ 1–2 ಪ್ರಕರಣಗಳಲ್ಲಿ ಕೈಬಿಟ್ಟಿದ್ದರೂ ಮುಂದಿನ ದಿನಗಳಲ್ಲಿ ಅದನ್ನು ಫ್ರೂಟ್ ಆಪ್‌ನಲ್ಲಿ ನೋಂದಣಿ ಮಾಡಲಾಗುತ್ತಿದೆ.**

**ಸದಸ್ಯರಿಂದ ಬರತಕ್ಕ ಸಾಲಗಳು:** ಸಂಘದ ಉಪನಿಯಮದ ಪ್ರಕಾರ ಆಡಳಿತ ಮಂಡಳಿ ತೀರ್ಮಾನದಂತೆ ತಿದ್ದುಪಡಿ ತಂದಿದ್ದು, ರೈತರಿಗೆ ಕಟಾವು ಸಾಲ ನೀಡುವಾಗ ಪ್ರತಿ ಗುಂಟೆಗೆ ರೂ.2,000.00ರಂತೆ ಗರಿಷ್ಠ ಮಿತಿ ರೂ.1,50,000.00 ಮತ್ತು ಕೊಳೆ ಔಷಧಿ ಸಾಲ ಒಂದು ಗುಂಟೆಗೆ ರೂ.300.00, ಗರಿಷ್ಠ ಮಿತಿ ರೂ.50,000.00 ಒಟ್ಟಾರೆ ಕಟಾವು ಸಾಲ ಮತ್ತು ಕೊಳೆ ಸಾಲ ರೂ.2,00,000.00 ನೀಡಬಹುದಾಗಿರುತ್ತದೆ. ಇದಕ್ಕೆ ಇಲಾಖೆಯ ಅನುಮೋದನೆ ಪಡೆಯಲಾಗಿದೆ. ಸಂಸ್ಥೆಯು ಸದಸ್ಯರಿಗೆ ನೀಡಲಾಗುತ್ತಿರುವ ಕಟಾವು ಸಾಲ ಮತ್ತು ಕೊಳೆ ಸಾಲವನ್ನು ದಿನಾಂಕ:16/08/2006ರಿಂದ ಜಾರಿಗೆ ಬರುವಂತೆ "**ಮಾಮ್‌ಕೋಸ್ ಕ್ರೆಡಿಟ್ ಕಾರ್ಡ್**" ಯೋಜನೆಯ ಅಡಿಯಲ್ಲಿ ಸಾಲ ನೀಡಲಾಗುತ್ತಿದೆ. ಇದರ ಅಡಿಯಲ್ಲಿ ಕೇಂದ್ರ ಕಛೇರಿಯಿಂದ ಸಾಲ ಮಂಜೂರು ಆದ ನಂತರದ 3 ವರ್ಷಗಳಲ್ಲಿ ಸಂಘದ ಶಾಖಾ ಹಂತದಲ್ಲಿ ಶಾಖಾ ವ್ಯವಸ್ಥಾಪಕರೇ ಸಾಲ ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ.

ಕಟಾವು ಸಾಲ ಪಾವತಿಯಲ್ಲಿ ಸಂಘದ ನಿಯಮದ ಪ್ರಕಾರ ಸಾಲ ಮಂಜೂರಾತಿಗೆ ಆರ್.ಟಿ.ಸಿ ಪಡೆದು ಸಾಲ ಪಾವತಿಸುವ ಮೊದಲು ಆರ್.ಟಿ.ಸಿ.ಯಲ್ಲಿ ಮಾತ್ರ ಸಂಘಕ್ಕೆ ಆಧಾರ ಮಾಡಿಕೊಳ್ಳುವ ಕ್ರಮ ಇರುತ್ತದೆ. ಈ ರೀತಿ ನಮೂದಾಗಿರುವ ಪಹಣಿಯನ್ನು ಅಂದರೆ ಆಸ್ತಿಯನ್ನು ಪರಬಾರೆ ಮಾಡುವ ಅವಕಾಶವು ಇದ್ದುದರಿಂದ ಕಟಾವು ಸಾಲ ಮತ್ತು ಕೊಳೆಸಾಲದ ಸುಸ್ತಿ ಸಾಲ ಪ್ರತಿ ಸಾಲಿನಲ್ಲಿಯೂ ಹೆಚ್ಚುತ್ತಾ ಬಂದಿರುತ್ತದೆ. ಅಡಿಕೆ ಆಧಾರ ಮುಂಗಡವನ್ನು ಸಂಸ್ಥೆಯ ಉಪ ನಿಯಮದ ಪ್ರಕಾರ ರೈತರ ಅಡಿಕೆ ದಾಸ್ತಾನಿನ ಮೇಲೆ ಕಾಲಕಾಲಕ್ಕೆ ಆಡಳಿತ ಮಂಡಳಿ ನಿಗದಿಪಡಿಸಿದ ಪರಿಮಿತಿಯಲ್ಲಿ ಅಡಿಕೆ ಆಧಾರ ಸಾಲವಾಗಿ ನೀಡಲು ಅವಕಾಶವಿದೆ.

ಅಡಿಕೆ ಆಧಾರ ಮುಂಗಡದ ಪಾವತಿ ಮತ್ತು ವಸೂಲಿ ಬಗ್ಗೆ ಸಂಘದ ವಹಿವಾಟು ನಿಯಮದ ಪ್ರಕಾರ ಸಾಲ ಪಡೆದ ನಿಗದಿತ ದಿನಾಂಕಕ್ಕೆ ಅಡಿಕೆ ವ್ಯಾಪಾರ ಮಾಡಿ ಸಾಲ ಜಮಾ ಮಾಡದಿದ್ದಲ್ಲಿ ಆಧಾರವಾಗಿಟ್ಟ ದಾಸ್ತಾನನ್ನು ಮಾರಾಟ ಮಾಡಿ ಸಾಲ ಜಮಾ ಪಡೆಯುವ ಷರತ್ತನ್ನು ಸಾಲ ಪಾವತಿಸುವ ಮುನ್ನ ನಿಗದಿತ ನಮೂನೆಯಲ್ಲಿ ಮುಚ್ಚಳಿಕೆಯನ್ನು ಪಡೆಯುವ ಬಗ್ಗೆ ಕ್ರಮದ ಅಗತ್ಯವಿದೆ. ಆದರೆ ಪ್ರಸ್ತುತ ಸದಸ್ಯರಿಗೆ ಅಡಿಕೆ ಮೇಲಿನ ಮುಂಗಡವನ್ನು ಆರ್.ಟಿ.ಜಿ.ಎಸ್ ಮೂಲಕ ಪಾವತಿಸುತ್ತಿದ್ದು ಸದಸ್ಯರಿಂದ ಮುಂಗಡಕ್ಕೆ ಸದಸ್ಯರ ಪತ್ರದ ಆಧಾರದ ಮೇಲೆಯೇ ಸಾಲವನ್ನು ಪಾವತಿಸಲಾಗುತ್ತಿದ್ದು, ಸದಸ್ಯರಿಗೆ ಸೇವೆ ನೀಡುತ್ತಿರುವ ಉದ್ದೇಶ ಇದ್ದರೂ ಸಹ ನಿಯಮವನ್ನು ಪಾಲಿಸುವುದು ಕಡ್ಡಾಯವಾಗಿದೆ. ಪ್ರಸ್ತುತ ಅಡಿಕೆ ಧಾರಣೆ ಅನುಸರಿಸಿ ಶಾಖೆಗಳಲ್ಲಿ ನಿಗದಿಗೊಳಿಸಿದ ಮಿತಿಯಲ್ಲಿಯೇ ಸಾಲ ನೀಡಲಾಗುತ್ತಿರುವುದನ್ನು ಗಮನಿಸಲಾಗಿದೆ. ಕೆಲವೊಂದು ಅಡಿಕೆ ಆಧಾರ ಮುಂಗಡಗಳು ಒಂದು ವರ್ಷಕ್ಕಿಂತ ಹೆಚ್ಚು ಬಾಕಿ ಇದ್ದು, ಸದಸ್ಯರ ಮನವೊಲಿಸಿ ಅಡಿಕೆ ವ್ಯಾಪಾರ ಮಾಡಿಸಿ ಅವುಗಳ ವಸೂಲಿಗೆ ಕ್ರಮವಿಡಲು ಸೂಚಿಸಲಾಗಿದೆ. ಅಡಿಕೆ ಆಧಾರ ಮುಂಗಡಕ್ಕೆ ಮತ್ತು ಕಟಾವು ಸಾಲ ಹಾಗೂ ಕೊಳೆ ಸಾಲಗಳಿಗೆ ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ದಿನಾಂಕ: 01–10–2017ರಿಂದ ಅನ್ವಯವಾಗುವಂತೆ ಸಾಲಗಳ ಮೇಲಿನ ಬಡ್ಡಿಯ ದರವನ್ನು ಪರಿಷ್ಕರಿಸಿ ಈ ಎಲ್ಲಾ ಸಾಲಗಳಿಗೆ ಬಡ್ಡಿ ದರವನ್ನು ಶೇ11.50ಕ್ಕೆ ನಿಗದಿಪಡಿಸಲಾಗಿದೆ. ಅಲ್ಲದೆ ಸದಸ್ಯರು ಸುಸ್ತಿಯಾಗುವ ಮೊದಲು ಸಾಲವನ್ನು ಮರುಪಾವತಿಸಿದಲ್ಲಿ ಅಂತಹ ಸದಸ್ಯರಿಗೆ 1% ಬಡ್ಡಿ ರಿಯಾಯಿತಿ ನೀಡಲಾಗುತ್ತಿದೆ. ದಿನಾಂಕ: 31–03–2024ಕ್ಕೆ ರೂ.147,75,22,416.12 ಗಳು ಸದಸ್ಯರಿಂದ ಸಂಸ್ಥೆಗೆ ಸಾಲ ಬರಲು ಬಾಕಿ ಇರುತ್ತವೆ.

**ಸಮಜಾಯಿಷಿ: ಶಾಖೆಗೆ ನೇರವಾಗಿ ಬಂದು ಅಡಿಕೆ ಆಧಾರ ಸಾಲ ಪಡೆಯುವ ಸದಸ್ಯರಿಂದ ಕಡ್ಡಾಯವಾಗಿ ಮುಚ್ಚಳಿಕೆಯನ್ನು ಪಡೆಯಲಾಗುತ್ತಿದ್ದು, ಆದರೆ, ಆರ್.ಟಿ.ಜಿ.ಎಸ್. ಮೂಲಕ ಆಧಾರ ಸಾಲ ಪಡೆಯುವ ಸದಸ್ಯರಿಂದ ವಾಟ್ಸಪ್ ಅಥವಾ ಇ–ಮೇಲ್ ಮೂಲಕ ಕೋರಿಕೆ ಪತ್ರವನ್ನು ಪಡೆದು ಹಣ ಪಾವತಿಸಲಾಗುತ್ತಿರುತ್ತದೆ. ಒಂದು ವರ್ಷಕ್ಕಿಂತ ಹೆಚ್ಚಿಗೆ ಅಡಿಕೆ ಆಧಾರ ಸಾಲ ಬಾಕಿ ಇರುವ ಪ್ರಕರಣಗಳಲ್ಲಿ ಅಂತಹ ಸದಸ್ಯರ ಮನವೊಲಿಸಿ, ಬಾಕಿ ವಸೂಲಾತಿಗೆ ಕ್ರಮ ವಹಿಸಲಾಗುತ್ತಿದೆ.**

## 28) ಸುಸ್ತಿ ಸಾಲಗಳ ವಿವರ:

| | | | | | | | |
|---|---|---|---|---|---|---|---|
| 1 | ವರ್ಷಾಂತ್ಯಕ್ಕೆ ಸುಸ್ತಿ ಸಾಲದ ಮೊತ್ತ | | | ಕಟಾವು ಸಾಲ–3,76,81,727/–, ಕೊಳೆ ಸಾಲ–5,01,158/– ಆಧಾರ ಸಾಲ – 1,83,38,991/– | | | |
| 2 | ಒಟ್ಟು ತಗಾದೆಗೆ ಸುಸ್ತಿ ಸಾಲದ ಪ್ರತಿಶತ ಪ್ರಮಾಣ | | | ಸುಸ್ತಿ ಸಾಲದ ಪ್ರತಿಶತ ಪ್ರಮಾಣ 3.83 | | | |
| 3 | ವರ್ಷಾಂತ್ಯಕ್ಕೆ ಇರುವ ಸುಸ್ತಿ ಸಾಲದ ವರ್ಷಾವಾರು ವಿವರ ನೀಡುವುದು. | | | | | | |
| | (ಎ) ಪ್ರವರ್ಗವಾರು ಹಾಗೂ ವರ್ಷವಾರು ವಿವರ : **ಅನುಬಂಧ 17ಎ** ರಲ್ಲಿ ಉಲ್ಲೇಖಿಸಲಾಗಿದೆ. | | | | | | |
| | (ಬಿ)ಕಾನೂನು ಕ್ರಮಗಳ ವಿವರ : | | | | | | |
| | ವಿವರ | ಸಂಖ್ಯೆ | 1–6 ವರ್ಷ | ಸಂಖ್ಯೆ | 6 ವರ್ಷ ಮೇಲ್ಪಟ್ಟ | ಸಂಖ್ಯೆ | ಒಟ್ಟು |
| | ಕಟಾವು | 415 | ರೂ.2,58,55,053 | 210 | ರೂ.1,18,26,674 | 625 | ರೂ.3,76,81,727 |
| | ಕೊಳೆ | | ರೂ.3,95,917 | | ರೂ.1,05,241 | | ರೂ.5,01,158 |

| | | |
|---|---|---|
| 4 | ಸುಸ್ತಿ ಸಾಲದ ಪೈಕಿ ದಾವಾ ಹಾಕಿದ ಪ್ರಕರಣಗಳ ಸಂಖ್ಯೆ ಮತ್ತು ಸುಸ್ತಿ ಸಾಲದ ಮೊತ್ತ | ದಾವಾಕ್ಕೆ ಹಾಕಿದ ಪ್ರಕರಣಗಳ ಸಂಖ್ಯೆ 30 ಅದರ ಮೊತ್ತ ರೂ.18,92,677.00 |
| 5 | ದಾವಾ ಪ್ರಕರಣಗಳ ಪೈಕಿ ಡಿಕ್ರಿಯಾದ ಪ್ರಕರಣ ಸಂಖ್ಯೆ ಮತ್ತು ಡಿಕ್ರಿ ಮೊತ್ತ | ಸುಸ್ತಿ ಪ್ರಕರಣಗಳ ಪೈಕಿ ಡಿಕ್ರಿಯಾದ ಪ್ರಕರಣ ಸಂಖ್ಯೆ 113 ಮತ್ತು ಅದರ ಮೊತ್ತ ರೂ.68,56,393.00 |
| 6 | ಡಿಕ್ರಿಯಾದ ಪೈಕಿ ಅಮಲ್ಜಾರಿಗೆ ಕಳುಹಿಸಿದ ಪ್ರಕರಣಗಳ ಸಂಖ್ಯೆ ಮತ್ತು ಮೊತ್ತ. | ಡಿಕ್ರಿಯಾದ ಪ್ರಕರಣಗಳ ಪೈಕಿ ಅಮಲ್ಜಾರಿ/ಸಿವಿಲ್‌ಗೆ ಕಳುಹಿಸಿದ ಪ್ರಕರಣಗಳ ಸಂಖ್ಯೆ 67 ಮತ್ತು ಮೊತ್ತ ರೂ.31,97,726.00 |
| 7 | ಸುಸ್ತಿ ಸಾಲ ವಸೂಲಿಗೆ ಕಾನೂನು ರೀತ್ಯಾ ಕ್ರಮ ಜರುಗಿಸದೇ ಇರುವ ಪ್ರಕರಣಗಳು ಮತ್ತು ಮೊತ್ತ | ಸುಸ್ತಿಸಾಲ ವಸೂಲಿಗೆ ಕಾನೂನು ರೀತ್ಯ ಕ್ರಮ ಜರುಗಿಸದೇ ಇರುವ ಪ್ರಕರಣಗಳ ಮೊತ್ತ ರೂ.2,62,36,089.00 ಮತ್ತು ಸಂಖ್ಯೆ-415 |
| 8 | ಅಮಲ್ಜಾರಿಯಲ್ಲಿ ಖರೀದಿಸಿದ ಆಸ್ತಿಗಳ ಬಗ್ಗೆ ವಿಮರ್ಶಿಸುವುದು. | ಅಮಲ್ಜಾರಿಯಲ್ಲಿ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ. |

## 29) ಸಂಘದ ಸ್ಥಿರಾಸ್ತಿ-ಚರಾಸ್ತಿಗಳ ಪರಿಶೀಲನೆ:

| ಎ | | ಸಂಘವು ಹೊಂದಿರುವ ಸ್ಥಿರಾಸ್ತಿಯ ವಿವರಗಳು | ಸ್ಥಿರಾಸ್ತಿಯ ವಿವರ | ಖರೀದಿ ಮತ್ತು ನೋಂದಣಿ ವಿವರ | ವಿಸ್ತೀರ್ಣ | ಆಸ್ತಿ ಮೌಲ್ಯ ರೂ. |
|---|---|---|---|---|---|---|
| | | ನಿವೇಶನ (ಖರೀದಿಸಿದ ಆಸ್ತಿಯ ನೋಂದಣಿ ಶುಲ್ಕ, ಮುದ್ರಾಂಕ ಶುಲ್ಕ ಮತ್ತು ಪತ್ರಗಳಿಗೆ ಮಾಡಿದ ಖರ್ಚನ್ನು ಬಂಡವಳೀಕರಿಸಬೇಕು. | ಗ್ರಾಮ : ಆಸ್ತಿ ಸಂಖ್ಯೆ : ವಿಳಾಸ : | | ------ ಚದರಡಿ | |
| | | ಕಟ್ಟಡ ಉಗ್ರಾಣಗಳು ಮಳಿಗೆಗಳು | ಗ್ರಾಮ : ಆಸ್ತಿ ಸಂಖ್ಯೆ : ವಿಳಾಸ : | | ------ ಚದರಡಿ | |
| | | **ಅನುಬಂಧ 10 ರಲ್ಲಿ ವಿವರಿಸಲಾಗಿದೆ.** | | | | |

| | | | | | | |
|---|---|---|---|---|---|---|
| | 1 | ಲೆಕ್ಕ ಪರಿಶೋಧನಾ ಕಾಲಕ್ಕೆ ಇವುಗಳ ಸಂಪೂರ್ಣ ದಾಖಲಾತಿಗಳು ಹಾಗೂ ಇ.ಸಿ., ಖಾತಾ ಉತಾರೆ (khatha-Extract) ಪರಿಶೀಲಿಸಿದ ಬಗ್ಗೆ ವಿಮರ್ಶೆ | ಪರಿಶೀಲಿಸಲಾಗಿದೆ. | | | |
| | 2 | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಸ್ಥಿರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ. | | | |
| | 3 | ಎಲ್ಲಾ ಸ್ಥಿರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು | | | |
| | 4 | ಸ್ಥಿರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿ ದೆಯೇ? | ವಿಮೆ ಮಾಡಿಸಲಾಗಿದೆ. ಅನುಬಂಧ-6 | | | |

| | | | |
|---|---|---|---|
| | 5 | ಸ್ಥಿರಾಸ್ತಿಗಳ ಮೇಲೆ ನಿಯಮಾನುಸಾರ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ. | ಆದಾಯಕರ ಕಾಯ್ದೆಯ ಪ್ರಕಾರ ಸವಕಳಿ ತೆಗೆದಿರಿಸಲಾಗಿದೆ. |
| | 6 | ಗೋದಾಮುಗಳಿದ್ದಲ್ಲಿ ಅವುಗಳ ಸಾಮರ್ಥ್ಯ ಹಾಗೂ ಅದರ ಉಪಯುಕ್ತತೆ ಬಗ್ಗೆ ವಿಮರ್ಶೆ | ದಿನಾಂಕ 01-04-2023 ರಿಂದ ಅನ್ವಯವಾಗುವಂತೆ ದಿನಾಂಕ 24.03.2023ರ ಆಡಳಿತ ಮಂಡಳಿ ಸಭೆ ತೀರ್ಮಾನದಂತೆ ವರ್ತಕರು ಮೂರು ತಿಂಗಳಿಂದ ಆರು ತಿಂಗಳವರೆಗೆ ಖರೀದಿಸಿದ ಮಾಲು ಎತ್ತುವಳಿ ಯಾಗದೆ ಉಳಿದ ದಾಸ್ತಾನನ್ನು ಬಿಡುಗಡೆಗೊಳಿಸುವಾಗ ಮೂಟೆ ಒಂದಕ್ಕೆ ರೂ.10.00 ಹಾಗು 6 ತಿಂಗಳ ನಂತರ ರೂ.15.00 ನಿರ್ವಹಣಾ ವೆಚ್ಚವನ್ನು ವಿಧಿಸಲು ತಿರ್ಮಾನಿಸಲಾಗಿದೆ.<br><br>ಅಲ್ಲದೆ ಸದಸ್ಯರ ಅಡಿಕೆ ದಾಸ್ತಾನು ಸಂಬಂಧ ವ್ಯಾಪಾರ ಮಾಡದೆ ದಾಸ್ತಾನು ಇಟ್ಟಲ್ಲಿ 1 ವರ್ಷದ ನಂತರ ಪ್ರತಿ ಮೂಟೆಗೆ ಪ್ರತಿ 1 ತಿಂಗಳಿಗೆ ರೂ.20 ರಂತೆ ನಿರ್ವಹಣೆ ವೆಚ್ಚ ವಿಧಿಸಲು ತೀರ್ಮಾನಿಸಲಾಗಿದೆ. ಸಂಸ್ಥೆಯಲ್ಲಿ ಸದಸ್ಯರ ದಾಸ್ತಾನನ್ನು ಇಟ್ಟುಕೊಳ್ಳಲು ಗೋದಾಮುಗಳನ್ನು ಉಪಯೋಗಿಸಿ ಹೆಚ್ಚುವರಿಯಾಗಿ ಬಾಡಿಗೆಗೆ ಪಡೆದಿದ್ದು ಈ ಸಾಲಿನಲ್ಲಿ, ಒಟ್ಟು ರೂ.43,74,014.00 ಪಾವತಿಸಲಾಗಿದೆ. ಸಂಘದ ಒಟ್ಟು ಸ್ವಂತ ಗೋದಾಮುಗಳ ಸಾಮರ್ಥ್ಯವನ್ನು ಗಮನಿಸಿದಾಗ ಸುಮಾರು 1,30,000 ದಿಂದ 1,40,000ಗಳ ವರೆಗೆ ಮೂಟೆಗಳನ್ನು ದಾಸ್ತಾನು ಮಾಡಲು ಅವಕಾಶ ಇರುತ್ತದೆ. ಆದರೆ ಕೆಲವು ಶಾಖೆಗಳಲ್ಲಿ ಸದಸ್ಯರ ಅಡಿಕೆ ದಾಸ್ತಾನು 3 ರಿಂದ 4 ವರ್ಷದ ಅಡಿಕೆ ದಾಸ್ತಾನು ವ್ಯಾಪಾರವಾಗದೆ ದಾಸ್ತಾನು ಇರುವುದರಿಂದ ಸ್ವಂತ ಗೋದಾಮುಗಳ ಸಾಮರ್ಥ್ಯ ಕಡಿಮೆಯಾಗಿದ್ದರಿಂದ ಗೋದಾಮುಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಆದ್ದರಿಂದ ಈ ಶಾಖೆಗಳಲ್ಲಿ ಅಡಿಕೆಯನ್ನು ವ್ಯಾಪಾರ ಮಾಡಿಸುವ ಬಗ್ಗೆ ಕ್ರಮವಿಡಬೇಕಿದೆ. ಈ ರೀತಿ ಬಾಡಿಗೆ ಗೋದಾಮು ಪಡೆಯುತ್ತಿರುವುದರಿಂದ ಸಂಘಕ್ಕೆ ಪ್ರತಿ ಮಾಹೆಯಲ್ಲಿ ರೂ.3 ಲಕ್ಷದಿಂದ 4 ಲಕ್ಷದವರೆಗೆ ಪಾವತಿ ಮಾಡುತ್ತಿರುವುದರಿಂದ ಸುಮಾರು ರೂ.35ಲಕ್ಷದಿಂದ ರೂ.40ಲಕ್ಷ ದವರೆಗೆ ಹೊರೆಯಾಗುವುದನ್ನು ಗಮನಿಸಿದೆ. ಈ ಮೇಲ್ಕಂಡಂತೆ ಸಂಘವು ಬಾಡಿಗೆ ಗೋದಾಮುಗಳನ್ನು ಪಡೆದು ದಾಸ್ತಾನು ಮಾಡಿ ಇಟ್ಟಿರುವುದರಿಂದ ಈ ಗೋದಾಮಿಗೆ ಕಾವಲು ಮತ್ತು ಭದ್ರತೆಯ ವೆಚ್ಚವೂ ಸಹ ಸಂಘಕ್ಕೆ ಆರ್ಥಿಕ ಹೊರೆಯಾಗುವುದನ್ನು ಗಮನಿಸಿದೆ. |

| | | | | | | |
|---|---|---|---|---|---|---|
| | 7 | ಕಟ್ಟಡಗಳನ್ನು ಬಾಡಿಗೆ ನೀಡಿದ್ದಲ್ಲಿ ಕರಾರು ಪತ್ರ ಮಾಡಿಕೊಳ್ಳಲಾಗಿದೆಯೇ? ಇದ್ದಲ್ಲಿ ವಿವರ | | | | |
| | | ಕರಾರು ಅವಧಿ | ಬಾಡಿಗೆ ದರ | ವಸೂಲಾದ ಬಾಡಿಗೆ | ವರ್ಷಾಂತ್ಯಕ್ಕೆ ವಸೂಲಾಗಬೇಕಿರುವ ಮೊತ್ತ | ಭದ್ರತಾ ಠೇವಣಿ ಮೊತ್ತ |

| | | | |
|---|---|---|---|
| | | **ಅನುಬಂಧ 10ಎ ರಲ್ಲಿ ವಿವರಿಸಲಾಗಿದೆ.** | |
| | | ವಿಮರ್ಶೆ: ಬಾಡಿಗೆ ಸ್ವೀಕೃತಿಯಾಗುತ್ತಿದ್ದು, ಕಾಲ ಕಾಲಕ್ಕೆ ಬಾಡಿಗೆ ಪರಿಷ್ಕರಣೆ ಮಾಡಲಾಗುತ್ತಿದೆ. | |
| | 8 | ವರದಿ ಸಾಲಿನಲ್ಲಿ ನೂತನವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ, ಕಟ್ಟಡ ನಿರ್ಮಿಸಲು ಅಗತ್ಯ ಆರ್ಥಿಕ ಸಂಪನ್ಮೂಲ ಕ್ರೂಢೀಕರಿಸಲಾಗಿದೆಯೇ ಹಾಗೂ ನಿಯಮಾನುಸಾರ ಆಡಳಿತಾತ್ಮಕ ತಾಂತ್ರಿಕ ಅನುಮೋದನೆ ಹಾಗೂ ಮಂಜೂರಾತಿ ಪಡೆಯ ಲಾಗಿದೆಯೇ? ಕಟ್ಟಡ ನಿರ್ಮಾಣದ ವೇಳೆಯಲ್ಲಿ ಆಡಳಿತಾತ್ಮಕ ಮಂಜೂರಾತಿ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಲಾಗಿದೆಯೇ? ಕಟ್ಟಡ ಕಾಮಗಾರಿ ಸಮಯದಲ್ಲಿ ಪಾರದರ್ಶಕ ನಿಯಮಗಳನ್ನು ಪಾಲಿಸಲಾಗಿದೆಯೇ? ಕಟ್ಟಡ ನಿರ್ಮಾಣ ವೆಚ್ಚಗಳ ಬಗ್ಗೆ ನಿಯಮಾನುಸಾರ ಪರಿಶೀಲಿಸುವುದು ಮತ್ತು ವಿವರವಾದ ದಾಖಲೆಗಳನ್ನು ಪರಿಶೀಲಿಸಿ, ಈ ವರದಿಗೆ ಲಗತ್ತಿಸಿರುವ ಅನುಬಂಧದಲ್ಲಿ ವಿವರ ನೀಡುವುದು. | ಯಾವುದೂ ಇರುವುದಿಲ್ಲ. |
| | 9 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಸ್ಥಿರಾಸ್ತಿಗಳ ಕುರಿತು ವಿಮರ್ಶೆ ನೀಡಿ, ಸ್ಥಿರಾಸ್ತಿ ಮಾರಾಟದಿಂದ ಗಳಿಸಿದ ಬಂಡವಾಳ ಲಾಭವನ್ನು ಆದಾಯಕ್ಕೆ ತೆಗೆದುಕೊಳ್ಳದೇ ಕಡ್ಡಾಯವಾಗಿ ಬಂಡವಾಳ ಮೀಸಲು ನಿಧಿ ಖಾತೆಗೆ ಜಮೆ ಕೊಡಬೇಕು. | ಸ್ಥಿರಾಸ್ತಿಗಳ ವಿಲೇವಾರಿ ಆಗಿರುವುದಿಲ್ಲ. |
| | 10 | ಸ್ಥಿರಾಸ್ತಿಯ ತೆರಿಗೆಯನ್ನು ತಹಲ್ ದಿನಾಂಕದವರೆಗೂ ಪಾವತಿಸಲಾಗಿದೆಯೇ ? | ಪಾವತಿಸಲಾಗಿದೆ. |
| | 11 | ಹಳೆಯ ಕಟ್ಟಡ ದುರಸ್ತಿ ಮಾಡಿದಲ್ಲಿ ಪೂರ್ಣ ವಿವರ ನೀಡುವುದು. | **ಅನುಬಂಧ– 11ರಲ್ಲಿ** ವಿವರಿಸಲಾಗಿದೆ. |

| | | | |
|---|---|---|---|
| ಬಿ | | ಚರಾಸ್ತಿ | |
| | 1 | ಸಂಘವು ಹೊಂದಿರುವ ಚರಾಸ್ತಿ ವಿವರಗಳ ಬಗ್ಗೆ ಪ್ರತ್ಯೇಕ ಯಾದಿ ಲಗತ್ತಿಸಲಾಗಿದೆಯೇ? | ಲಗತ್ತಿಸಲಾಗಿದೆ. |
| | 2 | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆಯೇ? | ಚರಾಸ್ತಿ ರಿಜಿಸ್ಟರ್ ಬರೆದಿಡಲಾಗಿದೆ. |
| | 3 | ಎಲ್ಲಾ ಚರಾಸ್ತಿಗಳು ಸಂಘದ ಹೆಸರಿನಲ್ಲಿವೆಯೇ? | ಹೌದು |
| | 4 | ಚರಾಸ್ತಿಗಳ ಮೇಲೆ ವಿಮೆ ಮಾಡಿಸಲಾಗಿದೆಯೇ? | ವಿಮೆ ಮಾಡಿಸಲಾಗಿದೆ |
| | 5 | ಚರಾಸ್ತಿಗಳ ಮೇಲೆ ನಿಯಮಾನುಸಾರ ತೆಗೆದಿರುವ ಸವಕಳಿಯ ಬಗ್ಗೆ ವಿಮರ್ಶೆ (ಅನುಬಂಧ–1ರಲ್ಲಿ ನೀಡಿರುವ ಮಾಹಿತಿಯನ್ನು ವಿವರವಾಗಿ ವಿಮರ್ಶಿಸುವುದು) | ಆದಾಯ ಕರ ಕಾಯ್ದೆಯ ಪ್ರಕಾರ ಸವಕಳಿ ತೆಗೆದಿರಿಸಲಾಗಿದೆ. |

| | | | |
|---|---|---|---|
| | 6 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ಚರಾಸ್ತಿಗಳ ಕುರಿತು ವಿಮರ್ಶೆ ನೀಡಿ, ಚರಾಸ್ತಿ ಮಾರಾಟದಿಂದ ಆಗಿರುವ ಬಂಡವಾಳ ಲಾಭವನ್ನು ಆದಾಯಕ್ಕೆ ಪರಿಗಣಿಸದೇ, ಬಂಡವಾಳ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಿರುವ ಬಗ್ಗೆ ವಿಮರ್ಶಿಸುವುದು. | ವರದಿ ಸಾಲಿನಲ್ಲಿ ಚರಾಸ್ತಿಗಳ ವಿಲೇವಾರಿ ಆಗಿರುವುದಿಲ್ಲ. |
| | 7 | ಅನುಪಯುಕ್ತ ಚರಾಸ್ತಿಗಳ ಬಗ್ಗೆ ಸಂಘವು ಕೈಗೊಂಡಿರುವ ಕ್ರಮಗಳ ಕುರಿತು ವಿಮರ್ಶೆ. | ಅನುಪಯುಕ್ತ ಚರಾಸ್ತಿಗಳ ವಿಲೇವಾರಿಗೆ ಕ್ರಮ ಕೈಗೊಳ್ಳ ಲಾಗಿದೆ. |
| | 8 | ಸಂಘವು ವಾಹನ ಹೊಂದಿದ್ದಲ್ಲಿ ಅದರ ಸಂಪೂರ್ಣ ವಿವರ ಹಾಗೂ ವರದಿ ಸಾಲಿನಲ್ಲಿ ಇವುಗಳ ಕುರಿತು ಆಗಿರುವ ವೆಚ್ಚದ ಕುರಿತು ವಿಮರ್ಶೆ. ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆಯಲಾಗಿದೆಯೇ? ವಾಹನವು ಪ್ರತಿ ಲೀಟರ್ ಇಂಧನಕ್ಕೆ ಕ್ರಮಿಸಿರುವ ಸರಾಸರಿ ದೂರ? | ಸಂಘವು ಜೈಲೋ, ಇನ್ನೋವಾ, ಎರೆಟಿಗಾ ಮತ್ತು ಐಶರ್ ಲಾರಿ ವಾಹನಗಳನ್ನು ಹೊಂದಿದ್ದು, ಅದರ ಬಳಕೆಯ ಕುರಿತು ಲಾಗ್ ಪುಸ್ತಕ ಬರೆದಿಡಲಾಗಿದೆ. |

| ವಿವರ | ಜೈಲೋ 1476 | ಇನ್ನೋವಾ 8452 | ಇನ್ನೋವಾ 2624 | ಎರೆಟಿಗಾ 3851 | ಎರೆಟಿಗಾ 3852 | ಐಶರ್ ಬಿ 3560 |
|---|---|---|---|---|---|---|
| ಚಲಿಸಿದ ದೂರ | 11,558.80 | 25,660.00 | 21,626.00 | 30,052.00 | 44,706.80 | 32,720.00 |
| ಇಂಧನ ಬಳಕೆ (ಲೀ) | 1,385.60 | 2,641.50 | 2,056.00 | 2,186.60 | 3,533.06 | 7,235.00 |
| ಓಡಿದ ಸರಾಸರಿ ದೂರ | 8.50 | 10.00 | 11.00 | 14.00 | 13.00 | 5.00 |
| ರಿಪೇರಿ ವೆಚ್ಚ/ ವಿಮೆ (ರೂ.) | 79,006.00 | 71,669.00 | 25,727.00 | 65,846.00 | 82,693.00 | 99,183.00 |
| ಇಂಧನ ವೆಚ್ಚ (ರೂ.) | 1,14,208.30 | 2,26,298.50 | 2,03,256.84 | 1,67,114.62 | 2,88,405.22 | 5,24,109.00 |

| | | | |
|---|---|---|---|
| | 9 | ವರದಿ ಸಾಲಿನಲ್ಲಿ ವಿಲೇ ಮಾಡಿರುವ ವಾಹನದ ಕುರಿತು ವಿಮರ್ಶೆ ನೀಡಿ, ವಾಹನ ಮಾರಾಟದಿಂದ ಗಳಿಸಿದ ಬಂಡವಾಳ ಲಾಭವನ್ನು ಆದಾಯಕ್ಕೆ ತೆಗೆದುಕೊಳ್ಳದೆ ಕಡ್ಡಾಯವಾಗಿ ಬಂಡವಾಳ ಮೀಸಲು ನಿಧಿ ಖಾತೆಗೆ ಜಮೆ ಕೊಡಬೇಕು. ಅದರಂತೆ ಒಂದುವೇಳೆ ವಾಹನ ಮಾರಾಟದಿಂದ ನಷ್ಟ ಸಂಭವಿಸಿದಲ್ಲಿ ನಷ್ಟದ ಮೊತ್ತದಿಂದ ಸಂಬಂಧಿಸಿದ ವಾಹನಕ್ಕೆ ಕಾಯ್ದಿರಿಸಿದ ಸವಕಳಿ ಮೊತ್ತವನ್ನು ಕಡಿತಗೊಳಿಸುವುದು. ನಂತರ ಬಾಕಿ ಉಳಿದ ಹಾನಿಯನ್ನು ಬಂಡವಾಳ ಕಾಯ್ದಿಟ್ಟ ನಿಧಿಯಿಂದ ಕಳೆಯಬೇಕು. | ವರದಿ ಸಾಲಿನಲ್ಲಿ ಒಂದು ವಾಹನ ವಿಲೇವಾರಿ ಮಾಡಿದ್ದು, ವಾಹನ ಮಾರಾಟದಿಂದ ಗಳಿಸಿದ ಲಾಭ ರೂ.2,10,634.00 ಗಳನ್ನು ಮೀಸಲು ನಿಧಿಗೆ ವರ್ಗಾಯಿಸಿರುತ್ತಾರೆ. ಪರಂತು ಆದಾಯ ತೆರಿಗೆ ಕಾನೂನಿನ ಪ್ರಕಾರ ಸದರಿ ಮೊತ್ತವನ್ನು ಆದಾಯ ಎಂದು ಪರಿಗಣಿಸಬೇಕಾಗಿರುತ್ತದೆ.<br>**ಸಮಜಾಯಿಷಿ: ಲೆಕ್ಕಪರಿಶೋಧನಾ ಕೈಪಿಡಿಯ ಪ್ರಕಾರ ಚರಾಸ್ತಿಯ ಮೌಲ್ಯವು ಮಾರಾಟದ ಮೌಲ್ಯಕ್ಕಿಂತ ಹೆಚ್ಚಾಗಿದ್ದಲ್ಲಿ ಅದನ್ನು 'ಬಂಡವಾಳ ಮೀಸಲು ನಿಧಿ'ಗೆ ಮತ್ತು ಕೊರತೆ ಬಂದರೆ ಅದನ್ನು ನೇರವಾಗಿ ನಷ್ಟದ ಖಾತೆಗೆ ವರ್ಗಾಯಿಸಬೇಕಾಗಿರುತ್ತದೆ. ಆದರೆ, ಸಂಘದಲ್ಲಿ 'ಬಂಡವಾಳ ಮೀಸಲು ನಿಧಿ' ಖಾತೆ ಇಲ್ಲದಿರುವುದರಿಂದ ಇದನ್ನು ಮೀಸಲು ನಿಧಿಗೆ ವರ್ಗಾಯಿಸಲಾಗಿರುತ್ತದೆ. ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಲಾಗಿದೆ. ಹಾಗೆಯೇ ಆದಾಯ ತೆರಿಗೆ ಇಲಾಖೆಗೆ ವರದಿ ಸಲ್ಲಿಸುವಾಗ ಸದರಿ ಮೊತ್ತವನ್ನು 'CAPITAL GAIN' HEADನಲ್ಲಿ ಆದಾಯ ಎಂದು ಪರಿಗಣಿಸಲಾಗುವುದು.** |

| | | | |
|---|---|---|---|
| ಸಿ | | ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮೇಲೆ ಸವಕಳಿಯ ಸಂಕ್ಷಿಪ್ತ ವಿವರ | **ಅನುಬಂಧ 12ರಲ್ಲಿ ಲಗತ್ತಿಸಲಾಗಿದೆ.**<br>ಕೇಂದ್ರ ಕಛೇರಿಯ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಖರೀದಿಸಲಾದ ಹವಾನಿಯಂತ್ರಣ ಯಂತ್ರ, ಸಿ.ಸಿ.ಕ್ಯಾಮೆರಾ, ಮುಂತಾದ ಕಛೇರಿ ಸಲಕರಣೆಗೆ ಸಂಬಂಧಪಟ್ಟ ಚರಾಸ್ತಿಗಳನ್ನು ಪೀಠೋಪಕರಣಗಳಲ್ಲಿ ಸೇರಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಮೊತ್ತವನ್ನು ಪೀಠೋಪಕರಣದಿಂದ ಬೇರ್ಪಡಿಸಿ ಕಛೇರಿ ಸಲಕರಣೆಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ.<br>**ಸಮಜಾಯಿಷಿ: ಸಲಹೆಯಂತೆ ಕ್ರಮವಿಡಲಾಗುವುದು.** |

## 30) ಅಖೈರು ದಾಸ್ತಾನು.

| | |
|---|---|
| ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲ್ಪಟ್ಟಿದೆಯೇ? ಸದರಿ ದಾಸ್ತಾನು ಬೆಲೆಗೆ ಅಥವಾ ಮಾರಾಟ ಬೆಲೆ ಇವುಗಳಲ್ಲಿ ಯಾವುದು ಕಡಿಮೆ ಅದರಂತೆ ದಾಸ್ತಾನು ಮೌಲ್ಯ ನಿರ್ಧರಿಸಿದ್ದಾರೆಯೇ? | ಸಾಲಾಖೈರಿಗೆ ದಾಸ್ತಾನು ಪರಿಶೀಲನೆ ಮಾಡಲಾಗಿದೆ. ದಾಸ್ತಾನು ಮೌಲ್ಯವನ್ನು ಖರೀದಿ ಬೆಲೆಗೆ ಮತ್ತು ಅಡಿಕೆ ಖರೀದಿ ಬೆಲೆಯ ಸರಾಸರಿ ಮೌಲ್ಯದ ಮೇಲೆ ನಿರ್ಧರಿಸಲಾಗಿದೆ. ದಾಸ್ತಾನು ಮೌಲ್ಯ ಮಾರಾಟ ಬೆಲೆಗಿಂತ ಕಡಿಮೆ ಇರುತ್ತದೆ. ವಿವರವನ್ನು ಅನುಬಂಧ – 15 ರಲ್ಲಿ ವಿವರಿಸಲಾಗಿದೆ. |
| ದಾಸ್ತಾನು ಆಗಿಂದಾಗ್ಗೆ ಇಲಾಖಾ ಅಧಿಕಾರಿಗಳು / ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲ್ಪಟ್ಟಿದೆಯೆ? | ಸಂಘದ ಪದಾಧಿಕಾರಿಗಳಿಂದ ಪರಿಶೀಲಿಸಲಾಗಿದೆ. |
| ದಾಸ್ತಾನು ರಿಜಿಸ್ಟರ್ ನಿಗದಿ ಪಡಿಸಿದ ನಮೂನೆಯಲ್ಲಿ ನಿರ್ವಹಿಸಲ್ಪಟ್ಟಿದೆಯೇ? | ದಾಸ್ತಾನು ರಿಜಿಸ್ಟರ್ ನಿರ್ವಹಿಸಲಾಗಿದೆ. |
| ಸಾಲಾಂತ್ಯಕ್ಕೆ ಜಡ್ತಿಯಾದ ದಾಸ್ತಾನು ವಿವರವುಳ್ಳ ಪಟ್ಟಿ / ಸಂಕ್ಷಿಪ್ತ ಪಟ್ಟಿ ವರದಿಗೆ ಲಗತ್ತಿಸಿದೆಯೇ? | ಯಾವುದು ಇರುವುದಿಲ್ಲ. |

## 31) ಇತರೆ ಬರತಕ್ಕವುಗಳು:

| ಕ್ರ. ಸಂ. | ವಿವರ | ಮೊತ್ತ (ರೂ.) |
|---|---|---|
| 1 | ಶಾಖಾ ಉಗ್ರಾಣಗಳ ಬಾಡಿಗೆ ಮುಂಗಡ | 28,57,980.00 |
| 2 | ಸಿಬ್ಬಂದಿ ಹಬ್ಬದ ಮುಂಗಡ | 10,62,500.00 |
| 3 | ಕ್ರೆಡಿಟಾರ್ಸ್ ಫಾರ್ ಎಕ್ಸ್‌ಪೆನ್ಸಸ್ | 8,48,259.00 |
| 4 | ಇತರೆ ಮುಂಗಡ | 4,63,386.00 |
| 5 | ಭದ್ರತಾ ಠೇವಣಿ | 2,33,44,107.00 |
| 6 | ಸಿಬ್ಬಂದಿ ಕುಟುಂಬ ವಿಮೆ ಕಂತು | 2,09,405.00 |
| 7 | ಬರಬೇಕಾದ ಬಾಕಿ | 1,10,30,823.86 |

| | | |
|---|---|---|
| 8 | ಕ್ರೆಡಿಟಾರ್ಸ್ ಫಾರ್ ಕ್ಯಾಪಿಟಲ್ ಗೂಡ್ಸ್ | 28,84,431.00 |
| 9 | ಯಶಸ್ವಿನಿ ಸರ್ಕಾರದಿಂದ ಬಾಕಿ | 1,150.00 |
| 10 | ಯಶಸ್ವಿನಿ ಪ್ರೋತ್ಸಾಹ ಧನ ಸರ್ಕಾರದಿಂದ ಬಾಕಿ | 750.00 |
| | ಒಟ್ಟು ಮೊತ್ತ | 4,27,02,791.86 |

| | |
|---|---|
| ಇತರೆ ಬರತಕ್ಕ ಬಾಬ್ತುಗಳ ಸಂಬಂಧಿಸಿದಂತೆ ಹಿಂದಿನ ಅಂತರ ಇದ್ದಲ್ಲಿ, ಅದನ್ನು ಸರಿ ಪಡಿಸಿಕೊಂಡು ಸಲ್ಲಿಸುವಂತೆ ಸಂಘದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ತಿಳಿವಳಿಕೆ ಪತ್ರ ನೀಡಲಾಗಿದೆಯೇ? | ಹಿಂದಿನ ಅಂತರ ಕಂಡು ಬಂದಿರುವುದಿಲ್ಲ. |
| ಪ್ರಸಕ್ತ ವರ್ಷದಲ್ಲಿ ಬಂದಿರುವ ಅಂತರವನ್ನು ಸಂಘದ ಪ್ರಸಕ್ತ ಸಾಲಿನ ಲೆಕ್ಕಪುಸ್ತಕ ದಾಖಲಾತಿಗಳನ್ನು ಪರಿಶೀಲಿಸಿ ಕಡ್ಡಾಯವಾಗಿ ಸರಿಪಡಿಸಲಾಗಿದೆಯೇ? | ಪ್ರಸಕ್ತ ಸಾಲಿನಲ್ಲಿ ಯಾವುದೇ ಅಂತರ ಕಂಡುಬಂದಿರುವುದಿಲ್ಲ. |
| ಅನಾಮಧೇಯ ಬರತಕ್ಕವುಗಳು ಇವೆಯೇ? ಇದ್ದಲ್ಲಿ ಅವುಗಳನ್ನು ಆಡಿಟ್ ಆಕ್ಷೇಪಣೆಯಲ್ಲಿಟ್ಟು ವಸೂಲಿಗೆ ಸೂಚಿಸುವುದು. | ಯಾವುದೂ ಇರುವುದಿಲ್ಲ. |
| ಕೇವಲ ಪುಸ್ತಕ ಹೊಂದಾಣಿಕೆ ಮೂಲಕ ಬರತಕ್ಕವುಗಳನ್ನು ಸೃಷ್ಟಿಸಿರುವ ಪ್ರಕರಣಗಳು ಇವೆಯೇ? ಇದ್ದಲ್ಲಿ ವಿಮರ್ಶಿಸಿ ಆಡಿಟ್ ಆಕ್ಷೇಪಣೆಯಲ್ಲಿಡುವುದು. | ಯಾವುದೂ ಇರುವುದಿಲ್ಲ. |

5) ಎರಡು ವರ್ಷಕ್ಕೂ ಮೇಲ್ಪಟ್ಟು ಇತ್ಯರ್ಥವಾಗದೇ ಮುಂದುವರೆದ ಬರತಕ್ಕವುಗಳ ವಿವರ.

| ಕ್ರ. ಸಂ. | ವಿವರ | ಯಾವ ದಿನಾಂಕದಿಂದ | ಆಡಳಿತ ಮಂಡಳಿ ತೆಗೆದುಕೊಂಡ ಕ್ರಮ |
|---|---|---|---|
| 1 | ಡಿ.ಪಿ.ಸಿ ಅರೇಕಾನಟ್ ಟ್ರೇಡರ್ಸ್, ಶಿವಮೊಗ್ಗ | 31-03-2022 | ಡಿ.ಪಿ.ಸಿ ಅರೇಕಾನಟ್ ಟ್ರೇಡರ್ಸ್, ಶಿವಮೊಗ್ಗ ಇವರು ಸಂಘದಲ್ಲಿ ನೋಂದಾಯಿತ ವರ್ತಕರಾಗಿದ್ದು, ಸದರಿಯವರಿಂದ ಆರ್ಥಿಕ ವರ್ಷ 2021-22ನೇ ಸಾಲಿಗೆ ಸಂಬಂಧಿಸಿದ ಬಡ್ಡಿಯನ್ನು ಸ್ವೀಕರಿಸಲು ಬಾಕಿ ಇದ್ದು, ಹಂತ ಹಂತವಾಗಿ ಪಾವತಿ ಮಾಡುತ್ತಿದ್ದಾರೆ. ಸದರಿಯವರು ಸಂಘದಲ್ಲಿ ವ್ಯಾಪಾರ ಭದ್ರತಾ ಠೇವಣಿಯನ್ನು ತೊಡಗಿಸಿರುತ್ತಾರೆ. |
| 2 | ಕ್ರಾಮ್, ಶಿವಮೊಗ್ಗ | 31-03-2022 | ಕ್ರಾಮ್, ಶಿವಮೊಗ್ಗ ಇವರು ಸಂಘದಲ್ಲಿ ನೋಂದಾಯಿತ ವರ್ತಕರಾಗಿದ್ದು, ಸದರಿಯವರಿಂದ ಆರ್ಥಿಕ ವರ್ಷ 2021-22ನೇ ಸಾಲಿಗೆ ಸಂಬಂಧಿಸಿದ ಬಡ್ಡಿಯನ್ನು ಸ್ವೀಕರಿಸಲು ಬಾಕಿ ಇದ್ದು, ಹಂತ ಹಂತವಾಗಿ ಪಾವತಿ ಮಾಡುತ್ತಿದ್ದಾರೆ. ಸದರಿಯವರು ಸಂಘದಲ್ಲಿ ವ್ಯಾಪಾರ ಭದ್ರತಾ ಠೇವಣಿಯನ್ನು ತೊಡಗಿಸಿರುತ್ತಾರೆ. |

## 32) ಮೋಸ, ವಂಚನೆ, ಹಣ ದುರುಪಯೋಗದ ವರದಿ:

| | | |
|---|---|---|
| 1. | ನಗದು/ದಾಸ್ತಾನು ದುರುಪಯೋಗ ಪತ್ತೆ ಆದ ಕೂಡಲೇ ಸಹಕಾರ ಹಾಗೂ ಲೆಕ್ಕಪರಿಶೋಧನಾ ಇಲಾಖಾ ಮೇಲಧಿಕಾರಿಗಳಿಗೆ ಮಧ್ಯಂತರ ವರದಿ ಸಲ್ಲಿಸಲಾಗಿದೆಯೇ? | ವರದಿ ಸಾಲಿನಲ್ಲಿ ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲ. |

| | | |
|---|---|---|
| 2. | ಸಂಘದಲ್ಲಿ ಜರುಗಿರುವ ಹಣ/ದಾಸ್ತಾನು ದುರುಪಯೋಗದ ಪ್ರತಿಯೊಂದು ಅಂಶದ ಸ್ವರೂಪವನ್ನು ದಿನಾಂಕವಾರು, ಹಣ ದುರುಪಯೋಗ ಮಾಡಿದ ರೀತಿ, ಉದ್ದೇಶ, ಅದರಿಂದ ಸಂಘದ ಆ ದಿನದ ನಗದು ಶಿಲ್ಕುಗಳ ಮೇಲೆ ಅಥವಾ ಆಸ್ತಿಗಳಲ್ಲಿ ಆಗಿರುವ ಕೊರತೆಯ ಬಗ್ಗೆ ವಿವರವಾಗಿ ವಿಮರ್ಷಿಸುವುದು. | ಅನ್ವಯವಾಗುವುದಿಲ್ಲ. |
| 3. | ಸದರಿ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಮತ್ತು ಹಣ ದುರುಪಯೋಗ ಸಾಬೀತಾದಲ್ಲಿ ಅದಕ್ಕೆ ಸೂಕ್ತ ಜವಾಬ್ದಾರಿಯನ್ನು ನಿಗದಿಪಡಿಸಿ, ಫೌಜದಾರಿ ಮತ್ತು ದಿವಾಣಿ (Criminal & Civil) ಕ್ರಮಕ್ಕೆ ಏಕೆ ಕ್ರಮ ಕೈಗೊಳ್ಳಬಾರದೆಂಬ ಬಗ್ಗೆ ಆಪಾದಿತರಿಗೆ ವಿವರಣೆ ನೀಡುವಂತೆ ಸೂಚಿಸಿ ನೋಂದಾಯಿತ ಅಂಚೆಯ ಮೂಲಕ ಜ್ಞಾಪನಾ ಪತ್ರ/ನೋಟೀಸ್/ ಸಮನ್ಸ್‌ಗಳನ್ನು ನೀಡಲಾಗಿದೆಯೇ? | ಅನ್ವಯವಾಗುವುದಿಲ್ಲ. |
| 4. | ಸದರಿ ನೋಟೀಸುಗಳಿಗೆ ಆಪಾದಿತರು ನೀಡಲಾದ ಸಮಜಾಯಿಷಿ/ವಿವರಣೆಯನ್ನು ಪರಿಗಣಿಸಿರುವ ಬಗ್ಗೆ ಅಂದರೆ ಲೆಕ್ಕಪರಿಶೋಧಕರು ಒಪ್ಪದೇ ಇರುವ ಬಗ್ಗೆ/ ಒಪ್ಪಿರುವ ಬಗ್ಗೆ ಸ್ಪಷ್ಟವಾಗಿ ಮತ್ತು ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 5. | ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಪೂರಕ ದಾಖಲಾತಿಗಳ ದೃಢೀಕೃತ ಪ್ರತಿಗಳನ್ನು ಪಡೆದು ಅನುಬಂಧಗಳ ರೂಪದಲ್ಲಿ ವರದಿಗೆ ಲಗತ್ತಿಸಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 6. | ಹಣ ದುರುಪಯೋಗದ ಪ್ರತಿಯೊಂದು ಅಂಶಗಳ ಕುರಿತು ಸಂಘದ ಆರ್ಥಿಕ ತಃಖ್ತೆಗಳಲ್ಲಿ ಜವಾಬ್ದಾರಿ ಗೊತ್ತುಪಡಿಸಿ, ಸದರಿ ಮೊಬಲಗಿಗೆ ಸೂಕ್ತ ಅವಕಾಶ ಕಲ್ಪಿಸಿರುವುದರ ಬಗ್ಗೆ ಹಾಗೂ ಹಣ ದುರುಪಯೋಗದ ಮೊಬಲಗನ್ನು ವಸೂಲಿಸುವ ಕುರಿತು ಕೈಗೊಳ್ಳಬಹುದಾದ ಕ್ರಮಗಳ ಕುರಿತು ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |
| 7. | ಹಣ ದುರುಪಯೋಗದ ಮೊಬಲಗನ್ನು ವಸೂಲಿಸಲು ಸಂಘವು ತೆಗೆದುಕೊಂಡಿರುವ ಕ್ರಮಗಳ ಕುರಿತು ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |

| | | |
|---|---|---|
| 8. | ಮಾನ್ಯ ನಿರ್ದೇಶಕರವರ ಸುತ್ತೋಲೆ ಸಂಖ್ಯೆ: ಲೆಪಶಾ–1/ ಇತರೆ/ಲೆಪನೆ/16/2016–17, ದಿ:23.02.2017ರ ಹಾಗೂ ನಿರ್ದೇಶನಗಳಂತೆ ಹಣ ದುರುಪಯೋಗವುಳ್ಳ ವರದಿಗಳನ್ನು ಲೆಕ್ಕಪರಿಶೋಧನಾ ಇಲಾಖೆಯ ಮೇಲಾಧಿಕಾರಿಗಳಿಂದ ಮೇಲ್ವಿಚಾರಣೆ ಕೈಗೊಂಡು, ಅವರು ಸೂಚಿಸಿರುವ ಎಲ್ಲಾ ಅಂಶಗಳನ್ನು ಹಾಗೂ ಸೂಚನೆಗಳನ್ನು ವರದಿಯಲ್ಲಿ ಅಳವಡಿಸಿಕೊಂಡಿರುವ ಬಗ್ಗೆ ವಿವರವಾಗಿ ವಿಮರ್ಶಿಸುವುದು. | ಅನ್ವಯವಾಗುವುದಿಲ್ಲ. |

## 33) ನಿಬಂಧಕರ ಆದೇಶಗಳ ಆನುಪಾಲನೆ

| | |
|---|---|
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 64 ರ ಅನ್ವಯ ಯಾವುದಾದರೂ ವಿಚಾರಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| ಪ್ರಸಕ್ತ ಸಾಲು ಅಥವಾ ಹಿಂದಿನ ಸಾಲುಗಳಲ್ಲಿ ಸಂಘದ ಮೇಲೆ ಕಲಂ 65ರ ಅನ್ವಯ ಯಾವುದಾದರೂ ಪರಿವೀಕ್ಷಣೆ ನಡೆದಿದೆಯೇ? | ಯಾವುದು ಇರುವುದಿಲ್ಲ. |
| ಮೇಲ್ಕಂಡ ಸಂದರ್ಭಗಳಲ್ಲಿ ಕಂಡು ಬಂದ ನ್ಯೂನತೆಗಳನ್ನು ನಿವಾರಿಸಲು ನಿಬಂಧಕರಿಂದ ಕಲಂ 68 ರ ಅಡಿ ಆದೇಶ ಜಾರಿಯಾಗಿದೆಯೇ? | ಅನ್ವಯವಾಗುವುದಿಲ್ಲ. |
| ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ಮತ್ತು ಆರ್ಥಿಕ ತಃಖ್ತೆಗಳಲ್ಲಿ ನಿಬಂಧಕರ ಕಲಂ 68 ರ ಅಡಿ ಆಗಿರುವ ಆದೇಶವನ್ನು ಪರಿಗಣಿಸಿ ಸೂಕ್ತವಾಗಿ ಅಳವಡಿಕೆ ಮಾಡಿಕೊಂಡಿದ್ದಾರೆಯೇ? | ಅನ್ವಯವಾಗುವುದಿಲ್ಲ. |

## 34) ಆಡಳಿತ ಮಂಡಳಿ ಮತ್ತು ಸಿಬ್ಬಂದಿಗಳ ವಿವರಗಳು:

(ಶೆಡ್ಯೂಲ್ ಇ ನಲ್ಲಿರುವ ವಿವರಗಳ ಬಗ್ಗೆ ಟಿಪ್ಪಣಿ)

| | | |
|---|---|---|
| ಸಂಘದ ಉಪನಿಯಮದ ಪ್ರಕಾರ ನಿರ್ದೇಶಕರ ಸಂಖ್ಯೆ | ಚುನಾಯಿತ ಪ್ರತಿನಿಧಿಗಳು | 19 |
| | ಪದ ನಿಮಿತ್ತ ಅಧ್ಯಕ್ಷರು | 01 |
| | ಪದ ನಿಮಿತ್ತ ನಿರ್ದೇಶಕರು | 01 |
| | ಒಟ್ಟು | 21 |
| ಮೀಸಲಾತಿ ಮತ್ತು ಅವುಗಳ ಭರ್ತಿ ಬಗ್ಗೆ ವಿವರ | ಸಂಘದ ಉಪ ವಿಧಿ ಭಾಗ–6, ಕಂಡಿಕೆ ಸಂಖ್ಯೆ 44(3)(ಎ) ರಂತೆ ಪರಿಶಿಷ್ಟ ಜಾತಿ–1 ಪರಿಶಿಷ್ಟ ವರ್ಗದ–1, ಮಹಿಳಾ ಸದಸ್ಯರ–2 ಹಾಗೂ ಹಿಂದುಳಿದ ವರ್ಗದ–2, ಸಾಮಾನ್ಯ ವರ್ಗ– 13 | |
| ಪ್ರಸಕ್ತ ಮಂಡಳಿಯು ಅಧಿಕಾರ ವಹಿಸಿಕೊಂಡ ದಿನಾಂಕ | 23/02/2020 | |
| ಮಂಡಳಿಯ ಅವಧಿ | 5 ವರ್ಷ | |

| | | |
|---|---|---|
| ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಅವಧಿ | ಯಾವುದು ಇರುವುದಿಲ್ಲ. | |
| ಪ್ರಸಕ್ತ ಸಾಲಿನಲ್ಲಿ ನಡೆದ ಮಂಡಳಿಯ ಸಭೆಗಳ ಸಂಖ್ಯೆ | ಅಡಳಿತ ಮಂಡಳಿ ಸಭೆ | 13 |
| | ಕಾರ್ಯನಿರ್ವಾಹಕ ಸಮಿತಿ ಸಭೆ | 12 |
| | ಲೆಕ್ಕಪರಿಶೋದನೆ ಮತ್ತು ಹಣಕಾಸು ಸಮಿತಿ ಸಭೆ | 10 |
| | ಕಟ್ಟಡ ನಿರ್ಮಾಣ ಮತ್ತು ನಿರ್ವಹಣಾ ಸಮಿತಿ ಸಭೆ | 10 |
| | ಅಡಿಕೆ ಖರೀದಿ ವ್ಯವಹಾರ ಸಮಿತಿ | 11 |
| ಮಂಡಳಿಯ ಸಭೆಗಳಿಗಾಗಿ ಆದ ವೆಚ್ಚ | ಈ ಮೇಲ್ಕಂಡ ಸಭೆಗಳಿಗೆ ಆದ ವೆಚ್ಚ ರೂ. 3,25,288.00 | |
| ನಿರ್ದೇಶಕರ ತರಬೇತಿ / ಅಧ್ಯಯನ ಪ್ರವಾಸ ಕಾರ್ಯಕ್ರಮಗಳ ವಿವರ:– | ಆಡಳಿತ ಮಂಡಳಿ ಸದಸ್ಯರು ಭುವನೇಶ್ವರ, ಕೋಲ್ಕತ್ತಾ, ಗ್ಯಾಂಗ್‌ಟಕ್ ಮುಂತಾದ ಪ್ರದೇಶಗಳಿಗೆ ಅಧ್ಯಯನ ಪ್ರವಾಸ ತೆರಳಿದ್ದು, ಈ ಸಮಯದಲ್ಲಿ ಹೊಸಗೋಣಿ ಚೀಲ ಸರಬರಾಜು ಮಾಡುವ ಕೆ.ಎಲ್. ಜ್ಯೂಟ್ ಸಂಸ್ಥೆಗೆ ಭೇಟಿ ನೀಡಿರುತ್ತಾರೆ. ಅಡಿಕೆಯ ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಕುರಿತು ಅಧ್ಯಯನ ನಡೆಸಲಾಗಿರುತ್ತದೆ ಮತ್ತು ಅಲ್ಲಿನ ಸಹಕಾರ ಸಂಸ್ಥೆಗಳಿಗೆ ಭೇಟಿ ನೀಡಲಾಗಿರುತ್ತದೆ. | |
| ನಿರ್ದೇಶಕರ ತರಬೇತಿ / ಅಧ್ಯಯನ ಕಾರ್ಯಕ್ರಮಗಳಿಗೆ ಆದ ವೆಚ್ಚ | ರೂ. 11,45,076.00 | |
| ವರದಿ ಸಾಲಿನಲ್ಲಿ ಆಡಳಿತ ಮಂಡಳಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ವಿವರ. | ವರದಿ ಸಾಲಿನಲ್ಲಿ 13 ಆಡಳಿತ ಮಂಡಳಿ ಸಭೆಗಳು ಜರುಗಿದ್ದು, ಸಭೆಯಲ್ಲಿ ಸಂಘದ ಕಾರ್ಯಚಟುವಟಿಕೆ, ಹಣಕಾಸು ನಿರ್ವಹಣೆ, ಸಂಘದ ಸದಸ್ಯತ್ವಕ್ಕೆ ಸೇರ್ಪಡೆ, ಸಂಘದ ಸಿಬ್ಬಂದಿ ನೇಮಕಾತಿ ಬಗ್ಗೆ, ಸುಸ್ತಿ ಸಾಲದ ವಸೂಲಾತಿ ಬಗ್ಗೆ, ಅಡಿಕೆ ಆವಕ–ಜಾವಕ ಹಾಗೂ ಇನ್ನಿತರ ಅಂಶಗಳ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ತೀರ್ಮಾನ ಕೈಗೊಂಡಿರುತ್ತಾರೆ. | |

**35) ಸಂಘದ ಆಡಳಿತ :**

ನಿರ್ದೇಶಕರ ಸಭಾ ಹಾಜರಾತಿ

| ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳ ಸಂಖ್ಯೆ | ಸಂಭಾವನೆ |
|---|---|---|---|
| ಅನುಬಂಧ– 19 | | | |

**ಮಂಡಳಿ, ಸಮಿತಿಗಳು, ಕಾರ್ಯನಿರ್ವಹಣೆ ಬಗ್ಗೆ ಟಿಪ್ಪಣಿ**

| | |
|---|---|
| ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತ ವಾಗಿ ನಡೆಸುತ್ತಿದ್ದಾರೆಯೇ? | ಮಂಡಳಿಯ/ಸಮಿತಿಗಳ ಸಭೆಗಳನ್ನು ನಿಯಮಿತ ವಾಗಿ ನಡೆಸುತ್ತಿದ್ದಾರೆ |
| ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆಯೆ? | ಸಂಘದ ಬೈಲಾ ಮತ್ತು ಕಾಯ್ದೆಗೆ ಅನುಗುಣವಾಗಿದೆ |
| ಮಂಡಳಿಯ/ಸಮಿತಿಗಳ ಸಭೆಗಳ ನಡಾವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವರದಿ ಸಾಲಿನಲ್ಲಿ ಜರುಗಿದ ಸಭೆಗಳ ನಡವಳಿ ಮತ್ತು ನಿರ್ಣಯಗಳನ್ನು ಯಥಾವತ್ತಾಗಿ ವಿಷಯ ಸೂಚಿಯಂತೆ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಸಭೆಯ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿರುತ್ತದೆ. |

**ನಿರ್ದೇಶಕರ, ಅವರ ಕುಟುಂಬ ವರ್ಗದವರ, ಅವರ ಆಸಕ್ತ ಸಂಸ್ಥೆಗಳ ಸಾಲಗಳ ಬಗ್ಗೆ ಟಿಪ್ಪಣಿ**

| | |
|---|---|
| ನಿರ್ದೇಶಕರಿಗೆ ನೀಡಿರುವ ಸಾಲಗಳು ಬೈಲಾ ಮತ್ತು ಇಲಾಖೆಯು ನೀಡಿದ ಮಾರ್ಗಸೂಚಿಗಳಿಗೆ ಅನ್ವಯವಾಗಿದೆಯೆ? | ಹೌದು |
| ಎಲ್ಲ ನಿರ್ದೇಶಕರು ಬೈಲಾದನ್ವಯ ಕನಿಷ್ಟ ವ್ಯವಹಾರ ನಡೆಸಿದ್ದಾರೆಯೆ? | ಹೌದು |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಸಾಲ ಪಡೆದಿದ್ದರೆ ಅವುಗಳ ವಿವರ | ಅನುಬಂಧ 18ರಲ್ಲಿ ವಿವರಿಸಿದ್ದು, ವಿವರವನ್ನು ವರದಿಗೆ ಲಗತ್ತಿಸಲಾಗಿದೆ. |
| ನಿರ್ದೇಶಕರು ಅಥವಾ ಅವರ ಕುಟುಂಬದವರು ಜಾಮೀನು ನೀಡಿದ್ದರೆ ಅವುಗಳ ವಿವರ | ಅನ್ವಯಿಸುವುದಿಲ್ಲ. |
| ಒಂದು ವರ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಹಾಗೂ ಮುದ್ದತ್ತು ಮೀರಿರುವ ನಿರ್ದೇಶಕರು ಅಥವಾ ಅವರ ಕುಟುಂಬದವರು ಪಡೆದಿರುವ ಸಾಲ. | ಮುದ್ದತ್ತು ಮೀರಿರುವ ನಿರ್ದೇಶಕರ ಮತ್ತು ಕುಟುಂಬದವರ ಸಾಲ ಇರುವುದಿಲ್ಲ. ಅನುಬಂಧ 18 ಲಗತ್ತಿಸಿದೆ. |

## 36) ವಾರ್ಷಿಕ ಸಾಮಾನ್ಯ ಸಭೆ:

| | |
|---|---|
| 1. ಹಿಂದಿನ ಸಾಲಿನ ವಾರ್ಷಿಕ ಸಭೆ ನಡೆದ ದಿನಾಂಕ | 20.09.2023 |
| 2. ಸಂಘದ ಉಪನಿಯಮದ ಪ್ರಕಾರ ಸಭೆಗೆ ಅಗತ್ಯವಿರುವ ಕೋರಂ | 1567 |
| 3. ಹಾಜರಾತಿ ಪುಸ್ತಕದ ಪ್ರಕಾರ ಹಾಜರಿದ್ದ ಸದಸ್ಯರ ಸಂಖ್ಯೆ | 5813 |
| 4. ಸಭೆಯ ವಿಷಯ ಪಟ್ಟಿಯನ್ನು ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆ ರಲ್ಲಿ ನಿಗದಿಪಡಿಸಿದಂತೆ ವಾರ್ಷಿಕ ಮಹಾಸಭೆಯಲ್ಲಿ ಅವಶ್ಯವಿರುವ ವಿಷಯಗಳನ್ನು ಒಳಗೊಂಡಿರುವುದೆ? ವಿವರಿಸುವುದು. | ಸಂಘದ ವಾರ್ಷಿಕ ಸಭೆಯಲ್ಲಿ ಕಾಯ್ದೆ ಕಲಂ 27 ಹಾಗೂ ನಿಯಮ 14–ಎಜೆಯಲ್ಲಿ ನಿಗದಿಪಡಿಸಿದಂತೆ ಅಗತ್ಯವಿರುವ ವಿಷಯಗಳನ್ನೊಳಗೊಂಡಂತೆ ಒಟ್ಟು 35 ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ ನಡೆದಿರುವುದನ್ನು ಗಮನಿಸಲಾಗಿದೆ. |
| 5. ಈ ಮೇಲಿನ ನಿಯಮಗಳಲ್ಲಿ ನಿಗದಿಪಡಿಸಿದ ಎಲ್ಲಾ ವಿಷಯಗಳ ಕುರಿತು ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಂಡಿರುವ ಬಗ್ಗೆ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆಯೇ? | ಸಂಘದ ವಾರ್ಷಿಕ ಸಭೆಯಲ್ಲಿ ಮಂಡನೆ ಮಾಡಿರುವ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ತೆಗೆದುಕೊಂಡಿರುವ ತೀರ್ಮಾನಗಳನ್ನು ಯಥಾವತ್ತಾಗಿ ನಡವಳಿ ಪುಸ್ತಕದಲ್ಲಿ ದಾಖಲಿಸಲಾಗಿದೆ. |
| 6. ಅವಶ್ಯವಿರುವ ವಿಷಯಗಳ ಪೈಕಿ ಕೈಬಿಟ್ಟು ಹೋದ ವಿಷಯಗಳ ಕುರಿತು ವಿಮರ್ಶಿಸುವುದು. | ಯಾವುದು ಇರುವುದಿಲ್ಲ. |
| 7. ಕಾಯ್ದೆ ಕಲಂ 28ರಂತೆ ಸಂಘದಲ್ಲಿ ವರದಿ ಸಾಲಿನಲ್ಲಿ ವಿಶೇಷ ಮಹಾಸಭೆ ಜರುಗಿದ್ದಲ್ಲಿ | (see table below) |
| 8. ವಾರ್ಷಿಕ ಮಹಾಸಭೆಯ/ವಿಶೇಷ ಮಹಾ ಸಭೆಯ ನಡವಳಿಗಳ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ | ವಾರ್ಷಿಕ ಮಹಾಸಭೆ ನಿಯಮಾನುಸಾರ ನಡೆದಿದ್ದು, ಅಗತ್ಯವಿರುವ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆದಿರುತ್ತದೆ. ಮತ್ತು ಸದಸ್ಯರ ಪ್ರಶ್ನೆಗಳಿಗೆ ಸಮರ್ಪಕವಾಗಿ ಸಮಜಾಯಿಷಿ ನೀಡಿರುವುದನ್ನು ಮತ್ತು ಅಗತ್ಯವಿರುವ ಹಾಗೂ ಪ್ರಾಮುಖ್ಯವಿರುವ ವಿಷಯಗಳ ಕುರಿತು ನಿರ್ಧಾರಗಳನ್ನು ತೆಗೆದುಕೊಂಡಿರುವುದನ್ನು ಗಮನಿಸ ಲಾಗಿದೆ. |

| ಸಭೆ ದಿನಾಂಕ | ವಿಷಯ | ನಿಬಂಧಕರ ಮಂಜೂರಿ ಇದ್ದಲ್ಲಿ |
|---|---|---|
| – | – | ವಿಶೇಷ ಮಹಾಸಭೆ ಜರುಗಿರುವುದಿಲ್ಲ. |
| | | |

## 37) ಸಿಬ್ಬಂದಿ ವರ್ಗ

| | | |
|---|---|---|
| 1 | ಸಂಘದಲ್ಲಿ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ. | ಸಂಘದಲ್ಲಿ ಮಂಜೂರಾದ ಸಿಬ್ಬಂದಿಗಳ ಸಂಖ್ಯೆ–175, ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ–115 |
| 2 | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಿರುವ ಬಗ್ಗೆ. | ಸಿಬ್ಬಂದಿ ವೇತನ ಶ್ರೇಣಿ, ಸೇವಾ ನಿಯಮ ರಚಿಸಿಕೊಂಡಿರುವ ಬಗ್ಗೆ ಹಾಗೂ ಸಿಬ್ಬಂದಿ ಸೇವಾ ಪುಸ್ತಕಗಳನ್ನು ನಿರ್ವಹಿಸಲಾಗಿದೆ. |

| | | |
|---|---|---|
| 3 | ಎಲ್ಲಾ ಸಿಬ್ಬಂದಿಗಳ ನೇಮಕಾತಿ ಆದೇಶದ ಪ್ರತಿ ಲಭ್ಯವಿರುವ ಬಗ್ಗೆ. | ನೇಮಕಾತಿ ಆದೇಶದ ಪ್ರತಿ ಲಭ್ಯವಿರುತ್ತದೆ. |
| 4 | ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರಗಳನ್ನು ಹುದ್ದೆ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ವೇತನ ಶ್ರೇಣಿ, ಮೂಲ ವೇತನ, ವಿದ್ಯಾರ್ಹತೆ ಇತ್ಯಾದಿ ವಿವರಗಳೊಂದಿಗೆ ನೀಡುವುದು. | ಅನುಬಂಧ –20 |
| 5 | ಸಿಬ್ಬಂದಿಯಿಂದ ನಿಬಂಧಕರ ಸುತ್ತೋಲೆಯಂತೆ ಭದ್ರತೆ ಪಡೆದಿರುವ ಬಗ್ಗೆ: | ಅನುಬಂಧ– 20 |
| 6 | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು | ವರದಿ ಸಾಲಿನಲ್ಲಿ ಸಿಬ್ಬಂದಿಗೆ ಪಾವತಿಸಿರುವ ಒಟ್ಟು ವೇತನ ಹಾಗೂ ಭತ್ಯೆಗಳು ರೂ. 8,05,77,010.51 |
| 7 | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ | ದುಡಿಯುವ ಬಂಡವಾಳಕ್ಕೆ ಹೋಲಿಸಿದಾಗ ಶೇಕಡಾ ವೆಚ್ಚ 1.91% |
| 8 | ವರದಿ ಸಾಲಿನಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಂಡಿದ್ದಲ್ಲಿ ಅದರ ವಿವರ ಹಾಗೂ ನೇಮಕಾತಿಯಲ್ಲಿ ಏನಾದರೂ ಕಾಯ್ದೆ / ಸುತ್ತೋಲೆ ಉಲ್ಲಂಘನೆ ಇದ್ದಲ್ಲಿ ನಮೂದಿಸುವುದು. | ವರದಿ ಸಾಲಿನಲ್ಲಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ನೇಮಕಾತಿ ಮಾಡಿಕೊಂಡಿದ್ದು, ಈ ನೇಮಕಾತಿಯು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 18ರಂತೆ ಇರುತ್ತದೆ. |
| 9 | ಸಿಬ್ಬಂದಿ ಬೋನಸ್ ಪಾವತಿ ಸಹಕಾರ ಕಾಯ್ದೆ ರೀತಿ ಅಥವಾ ಬೋನಸ್ ಕಾಯ್ದೆ ರೀತಿ ಮಾಡಲಾಗಿದೆಯೇ? ಇದು ಸರಿ ಇರುವ ಬಗ್ಗೆ ದೃಢೀಕರಿಸುವುದು. | ಸಿಬ್ಬಂದಿ ಬೋನಸ್ ಪಾವತಿ ಸಂಬಂಧ ಈ ಸಾಲಿನಲ್ಲಿ ಲಾಭ ನಷ್ಟ ತಃಖ್ತೆಯಲ್ಲಿ ಅನುಗ್ರಹ ಪೂರ್ವಕ ಕೊಡಿಗೆ / ಬೋನಸ್ ಎಂದು ಸಂಬಳದ ಶೇ.20% ಖರ್ಚು ಬರೆದಿದ್ದು ಪಾವತಿಗೆ ವಾರ್ಷಿಕ ಮಹಾ ಸಭೆಯ ಅನುಮೋದನೆ ಅಗತ್ಯವಿದೆ. |
| 10 | ಶೆಡ್ಯೂಲ್ ಇ ನಲ್ಲಿರುವ ಸಿಬ್ಬಂದಿ ವಿವರಗಳು ಸಂಘದ ದಾಖಲೆಗಳಿಗೆ ತಾಳೆಯಾಗುತ್ತವೆಯೇ? | ತಾಳೆಯಾಗಿರುತ್ತದೆ. |
| 11 | ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ನಿಬಂಧಕರು ವಿಧಿಸಿದ ಮಿತಿಯೊಳಗಿದೆಯೆ? | ಸಿಬ್ಬಂದಿಗಾಗಿ ಖರ್ಚು ಮಾಡಿದ ಮೊತ್ತವು ದುಡಿಯುವ ಬಂಡವಾಳದ ಮೊತ್ತಕ್ಕೆ ಹೋಲಿಸಿದಲ್ಲಿ ಮೇಲ್ಕಂಡಂತೆ 1.91% ಇರುತ್ತದೆ. |

| | | |
|---|---|---|
| 12 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ಸಿಬ್ಬಂದಿ ತರಬೇತಿಗೆ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳ ನಿ., ಬೆಂಗಳೂರು, ಜಿಲ್ಲಾ ಸಹಕಾರ ಯೂನಿಯನ್ ಶಿವಮೊಗ್ಗ, ಮಾಮ್‌ಕೋಸ್ ಶಿವಮೊಗ್ಗ ಮತ್ತು ಸಹಕಾರ ಇಲಾಖೆ ಇವರುಗಳ ಆಶ್ರಯದಲ್ಲಿ ಒಂದು ದಿನದ ತರಬೇತಿ ಶಿಬಿರ ಮಾಮ್‌ಕೋಸ್ ನೌಕರರಿಗೆ ಆಯೋಜಿಸಲಾಗಿದೆ. ಈ ತರಬೇತಿ ಯಲ್ಲಿ ವ್ಯಾಪಾರ ಅಭಿವೃದ್ಧಿ ಕಾರ್ಯಕ್ರಮ, ಸಹಕಾರ ಸಂಘಗಳಿಗೆ ಅನ್ವಯವಾಗುವ ತೆರಿಗೆ ವಿಧಾನ ಮತ್ತು ಅನ್ವಯತೆ, ಕಛೇರಿ ಶಿಷ್ಟಾಚಾರಗಳು ಮತ್ತು ಒತ್ತಡ ನಿರ್ವಹಣೆ ಹಾಗೂ ಸಮಯ ನಿರ್ವಹಣೆ ಈ ರೀತಿಯ ವಿಷಯಗಳನ್ನು ತರಬೇತಿ ರೂಪದಲ್ಲಿ ನೀಡಲಾಗಿದೆ. |
| 13 | ಸಿಬ್ಬಂದಿಗಳಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | – |
| 14 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳ ವಿವರ | ತರಬೇತಿ ಕಾರ್ಯಕ್ರಮ ನಡೆದಿರುವುದಿಲ್ಲ, ಸದಸ್ಯರಿಗೆ ನಿಯಮಿತವಾಗಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮ ನಡೆಸುವುದು ಸೂಕ್ತ. **ಸಮಜಾಯಿಷಿ: ಪ್ರತಿ ವರ್ಷ ತಾಲ್ಲೂಕು ಮಟ್ಟದಲ್ಲಿ ಷೇರುದಾರರ ಸಮಾಲೋಚನಾ ಸಭೆಯನ್ನು ನಡೆಸಿ ಸದಸ್ಯರ ಹಕ್ಕು, ಕರ್ತವ್ಯ ಮತ್ತು ಕನಿಷ್ಠ ವ್ಯವಹಾರ ಇತ್ಯಾದಿಗಳ ಬಗ್ಗೆ ತಿದ್ದುಪಡಿಯಾದ ಸಹಕಾರ ಕಾಯ್ದೆ, ನಿಯಮ ಮತ್ತು ಸಂಘದ ಉಪವಿಧಿಗಳ ಕುರಿತು ಹಾಗೂ ಸಂಘದಿಂದ ನೀಡುತ್ತಿರುವ ಸೌಲಭ್ಯ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ನೀಡುವ ಕುರಿತು ತರಬೇತಿ ಹಮ್ಮಿಕೊಳ್ಳಲಾಗುತ್ತಿದೆ.** |
| 15 | ಸದಸ್ಯರಿಗೆ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಆದ ವೆಚ್ಚ | ಅನ್ವಯಿಸುವುದಿಲ್ಲ |

## 38) ಸಂಘದ ಆರ್ಥಿಕ ಫಲಿತಾಂಶಗಳ ವಿವರಗಳು :

### ಹಣಕಾಸಿನ ವರದಿಯ ವಿಶ್ಲೇಷಣೆ

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ಸಂಘದ ಒಟ್ಟು ವಹಿವಾಟು | 1244,42,81,566.50 | 1243,00,76,813.94 |
| ಸಂಘದ ಒಟ್ಟು ದುಡಿಯುವ ಬಂಡವಾಳ | 420,79,61,717.09 | 388,02,56,600.00 |
| ಸಂಘದ ಲಾಭ ಅಥವಾ ನಷ್ಟ | 5,25,35,835.64 | 4,41,57,276.96 |
| ಲಾಭಾಂಶ ಹಂಚಲು ಲಭ್ಯವಿರುವ ನಿವ್ವಳ ಲಾಭದ ಮೊತ್ತ | 5,25,35,835.64 | 4,41,57,276.96 |

## 39) ತಲಾ ಷೇರಿನ ಗಳಿಕೆ

| ವಿವರ | ಪ್ರಸಕ್ತ ಸಾಲು | ಹಿಂದಿನ ಸಾಲು |
|---|---|---|
| ನಿವ್ವಳ ಲಾಭ | 5,25,35,835.64 | 4,41,57,276.96 |
| ಒಟ್ಟು ಷೇರುಗಳು | 8,76,152 | 8,11,403 |
| | ಒಟ್ಟು ಷೇರು ಬಂಡವಾಳವನ್ನು ಪ್ರಸಕ್ತ ಸಾಲಿನ ಷೇರಿನ ಮುಖಬೆಲೆ ರೂ.100/– ರಿಂದ ಭಾಗಿಸಲಾಗಿದೆ. | |
| ತಲಾ ಷೇರಿನ ಗಳಿಕೆ | 59.96 | 54.42 |

## 40) ಆರ್ಥಿಕ ತ:ಖ್ತೆಗಳ ಬಗ್ಗೆ ವಿಮರ್ಶೆ:

| | | |
|---|---|---|
| | ರೂಪಾಂತರ / ಸಂಸ್ಕರಣ ಘಟಕ ಹಾಗೂ ಯಂತ್ರೋಪಕರಣಗಳು: | |
| 1. | ಸಂಘವು ರೂಪಾಂತರ / ಸಂಸ್ಕರಣ ಘಟಕಗಳನ್ನು ಹೊಂದಿದೆಯೇ? ಹೊಂದಿದ್ದರೆ ವಿವರಗಳನ್ನು ಕೊಡುವುದು. (ಅಕ್ಕಿ ಗಿರಣಿ, ಜಿನ್ನಿಂಗ್, ಪ್ರಸ್ಸಿಂಗ್, ಶೈತ್ಯಾಗಾರ ಇತ್ಯಾದಿ) | ಸಂಘವು ರೂಪಾಂತರ / ಸಂಸ್ಕರಣ ಘಟಕಗಳನ್ನು ಹೊಂದಿರುವುದಿಲ್ಲ. |
| 2. | ಈ ಘಟಕಗಳಿಗೆ ಬಂಡವಳೀಕರಿಸಿದ ಯಂತ್ರೋಪಕರಣಗಳ ವಿವರ. | ಅನ್ವಯವಾಗುವುದಿಲ್ಲ. |

| ಕ್ರಮ ಸಂಖ್ಯೆ. | ಘಟಕ | ಮೊತ್ತ |
|---|---|---|
| 1 | | |
| 2 | | |

| | | |
|---|---|---|
| 3. | ಈ ಯಂತ್ರೋಪಕರಣಗಳ ರಿಜಿಸ್ಟರ್ ಬರೆಯ ಲಾಗಿದೆಯೇ? ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ? | ಅನ್ವಯವಾಗುವುದಿಲ್ಲ. |
| 4. | ವರದಿ ವರ್ಷದಲ್ಲಿ ಹೊಸ ಯಂತ್ರೋಪಕರಣಗಳನ್ನು ಖರೀದಿಸಲಾಗಿದೆಯೇ? ಈ ಬಗ್ಗೆ ಅನುಸರಿಸಿದ ವಿಧಿ–ವಿಧಾನಗಳು ಸಮರ್ಪಕವಾಗಿವೆಯೇ? | ಅನ್ವಯವಾಗುವುದಿಲ್ಲ. |
| 5. | ವರ್ಷಾಂತ್ಯಕ್ಕೆ ಯಂತ್ರೋಪಕರಣಗಳ ಮೇಲೆ ನಿಗದಿತ ದರದಲ್ಲಿ ಸವಕಳಿ ತೆಗೆಯಲಾಗಿದೆಯೇ? ಸವಕಳಿ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 6 | ಯಂತ್ರೋಪಕರಣಗಳ ಬಿಡಿ ಭಾಗಗಳ (ಉಪಕರಣ) ಖರೀದಿ, ಉಪಯೋಗ ಹಾಗೂ ದಾಸ್ತಾನು ಸಂಬಂಧಿಸಿದಂತೆ ಸಮರ್ಪಕ ರೀತಿಯಲ್ಲಿ ಲೆಕ್ಕಪತ್ರ ಇಡಲಾಗಿದೆಯೇ? | ಅನ್ವಯವಾಗುವುದಿಲ್ಲ. |
| 7 | ವರ್ಷಾಂತ್ಯಕ್ಕೆ ಇದ್ದ ಬಿಡಿ ಭಾಗಗಳ ಯಾದಿ ಲಗತ್ತಿಸಲಾಗಿದೆಯೇ? ತಾಳೆ ಇದೆಯೇ ? | ಅನ್ವಯವಾಗುವುದಿಲ್ಲ. |
| 8 | ಯಂತ್ರೋಪಕರಣಗಳಿಗೆ ಸಮರ್ಪಕವಾದ ವಿಮೆ ಮಾಡಿಸ ಲಾಗಿದೆಯೇ? ವಿಮೆ ಮೊತ್ತವೆಷ್ಟು? | ಅನ್ವಯವಾಗುವುದಿಲ್ಲ. |
| 9 | ವರದಿ ವರ್ಷದಲ್ಲಿ ಯಂತ್ರೋಪಕರಣಗಳು ಪೂರ್ತಿ ಸಾಮರ್ಥ್ಯದಷ್ಟು ಉಪಯೋಗವಾಗಿವೆಯೇ? ಇಲ್ಲದಿದ್ದಲ್ಲಿ ಉಪಯೋಗವಾದ ಪ್ರತಿಶತ ಪ್ರಮಾಣವೆಷ್ಟು? | ಅನ್ವಯವಾಗುವುದಿಲ್ಲ. |

| * | ಕಮಿಷನ್ ವ್ಯವಹಾರ: | |
|---|---|---|
| 1. | ಸಂಘವು ಕೃಷಿ ಉತ್ಪನ್ನಗಳನ್ನು ದಲ್ಲಾಳಿಗಳ ಮುಖಾಂತರ ಕಮಿಷನ್ ಆಧಾರದ ಮೇಲೆ ಮಾರಾಟ ಮಾಡುವ ವ್ಯವಹಾರ ಮಾಡಿದೆಯೇ? | ಸಂಘವು ಅಡಿಕೆ ದಲ್ಲಾಳಿ ವ್ಯವಹಾರ ಮಾಡಿದೆ. |
| 2. | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸ ಲಾಗಿದೆಯೇ? | ಈ ವ್ಯವಹಾರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಲೆಕ್ಕ ಪುಸ್ತಕ ಹಾಗೂ ಇನ್ನಿತರ ಸಬ್‌ಸಿಡಿಯರಿ ಪುಸ್ತಕಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗಿದೆ. |
| 3. | ಕಮೀಷನ್ ಆಧಾರದ ಮೇಲೆ ಇನ್ನಿತರ ಕೃಷಿಯೇತರ ಉತ್ಪನ್ನಗಳ ಮಾರಾಟ ವ್ಯವಹಾರ ಮಾಡಿದೆಯೇ? ಇದ್ದರೆ ವಿವರಗಳು. | ಯಾವುದೇ ರೀತಿಯ ವ್ಯವಹಾರ ಮಾಡಿರುವುದಿಲ್ಲ. |
| 4. | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳ ಲಾಗಿದೆಯೇ ? | ಈ ಎಲ್ಲಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ನಿಯಮಾವಳಿಗಳನ್ನು ರಚಿಸಿಕೊಳ್ಳಲಾಗಿದೆ. |

5. ಕಮೀಷನ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಸಂಕ್ಷಿಪ್ತ ವಿವರಗಳನ್ನು ನೀಡುವುದು.

**ಪ್ರಸಕ್ತ ಸಾಲಿನಲ್ಲಿ ವರ್ತಕರಿಂದ ಬಂದ ದಲ್ಲಾಳಿ ವಿವರ:** ಕ್ಯಾಂಪ್ಕೋ, ಹಾಸನ ಅಡಿಕೆ ಬೆಳೆಗಾರರ ಸಹಕಾರ ಸಂಘದಿಂದ (ಹಾಪ್ಸ್‌ಕೋಸ್) ಹಾಗೂ ಕ್ರಾಮ್ಕೋರವರ ಅಡಿಕೆ ಖರೀದಿಗೆ ಶೇ.1.50, ಮತ್ತು ಖಾಸಗಿ ವರ್ತಕರಿಂದ ಶೇ.2ರ ದರದಲ್ಲಿ ದಲ್ಲಾಳಿ ಪಡೆಯುತ್ತಿದ್ದು, ಖಾಸಗಿ ವರ್ತಕರು ಸಂಘದಲ್ಲಿ ರೂ.40 ಕೋಟಿಗೂ ಹೆಚ್ಚು ಖರೀದಿಸಿದಲ್ಲಿ ಶೇ.0.50% ರಿಯಾಯಿತಿ ನೀಡಲಾಗುತ್ತಿದೆ. 2023–24ನೇ ಸಾಲಿನಲ್ಲಿ ಪಡೆದ ದಲ್ಲಾಲಿ ವಿವರ ಕೆಳಕಂಡಂತಿರುತ್ತದೆ.

| ವಿವರ | ಟ್ರೇಡರ್ಸ್ ಮೊತ್ತ | ಪಡೆದ ದಲ್ಲಾಳಿ | ಮೂಟೆ | ತೂಕ | ಶೇಕಡ ವಹಿವಾಟು |
|---|---|---|---|---|---|
| ಕ್ಯಾಂಪ್ಕೋ | 1,82,32,15,222.00 | 2,50,90,666.00 | 56,322.00 | 37,77,312.70 | 23.19 |
| ಹಾಪ್‌ಕೋಸ್ | 30,12,73,660.00 | 43,77,117.00 | 9,289.00 | 6,30,303.70 | 3.83 |
| ಕ್ರಾಮ್‌ಕೋ | 2,61,34,701.00 | 3,92,022.00 | 770.00 | 51,951.00 | 0.33 |
| ಖಾಸಗಿ ವರ್ತಕರು | 3,64,86,18,749.00 | 6,46,88,348.00 | 1,42,070.00 | 82,66,174.07 | 46.42 |
| ದಲ್ಲಾಳಿ ವಹಿವಾಟು ಒಟ್ಟು | 5,79,92,42,332.00 | 9,45,48,153.00 | 2,08,451.00 | 1,27,25,741.47 | 73.77 |
| ಮಾಮ್‌ಕೋಸ್ ಖರೀದಿ | 2,06,20,67,803.00 | – | 64,958.00 | 42,76,433.60 | 26.23 |
| **ಒಟ್ಟು** | **786,13,10,135.00** | **9,45,48,153.00** | **2,73,409.00** | **1,70,02,175.07** | **100.00** |

ಮೇಲ್ಕಂಡಂತೆ ನಿಗದಿತ ದರಕ್ಕನುಗುಣವಾಗಿ ದಲ್ಲಾಳಿ ಪಡೆದಿದ್ದು, ನಿಯಮಾನುಸಾರ ವರ್ತಕರು ಟಿ.ಡಿ.ಎಸ್. ಕಟಾಯಿಸಿಕೊಂಡಿರುತ್ತಾರೆ. ಸಂಘದಲ್ಲಿ ಹಿಂದಿನ ಸಾಲಿಗೆ ಹೋಲಿಸಿದಾಗ ಅಡಿಕೆ ವಹಿವಾಟು ಪ್ರಮಾಣದಲ್ಲಿ ಹೆಚ್ಚಾಗಿರುತ್ತದೆ. ಮೇಲ್ಕಂಡ ದಲ್ಲಾಳಿ ವ್ಯವಹಾರದಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ.27.36ರಷ್ಟು ಖರೀದಿ ವ್ಯವಹಾರವು ಸಹಕಾರ ಸಂಸ್ಥೆಗಳಿಂದ ಆಗಿದ್ದು ಶೇ.46.42ರಷ್ಟು ವ್ಯವಹಾರವು ಖಾಸಗಿ ವರ್ತಕರಿಂದ ನಡೆದಿರುವುದು ಕಂಡು ಬಂದಿರುತ್ತದೆ. ಒಟ್ಟು ಅಡಿಕೆ ವಹಿವಾಟಿನಲ್ಲಿ ಮಾಮ್‌ಕೋಸ್ ಸಂಸ್ಥೆಯ ಖರೀದಿ ಪ್ರಮಾಣ 26.23% ರಷ್ಟಿರುತ್ತದೆ.

| ಕ್ರ. ಸಂ. | ಮಾರಾಟ ಮಾಡಿದ ಮಾಲಿನ ವಿವರ | ಪ್ರಮಾಣ | ಮೌಲ್ಯ | ಕಮೀಷನ್ ರೂಪದಲ್ಲಿ ಆದಾಯ. |
|---|---|---|---|---|
| 1. | ಅಡಿಕೆ | 127,25,741.47 | 579,92,42,332.00 | 9,45,48,153.00 |

**41) (1)ಆದಾಯ ತೆರಿಗೆ ಸಲ್ಲಿಕೆ (IT return) ವಿವರಗಳು:**

| | | |
|---|---|---|
| 1 | ಸಂಘದ ಪ್ಯಾನ್ | AAAJM0788P |
| 2 | ಹಿಂದಿನ ಆರ್ಥಿಕ ವರ್ಷದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲಾಗಿದೆಯೇ? | ಸಲ್ಲಿಸಲಾಗಿದೆ. |
| | ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ ದಿನಾಂಕ | 27–09–2023 |
| | ITR - V Acknowledgement Number | 321447541270923 |
| 3 | ITR - V ಪ್ರತಿಯನ್ನು ಕಡ್ಡಾಯವಾಗಿ ವರದಿಗೆ ಲಗತ್ತಿಸುವುದು. | ಲಗತ್ತಿಸಿದೆ. |

**41) (2)ಜಿ.ಎಸ್.ಟಿ. ವಿವರಗಳು:**

| | | |
|---|---|---|
| 1 | ಜಿ.ಎಸ್.ಟಿ. ನೋಂದಣಿ ಸಂಖ್ಯೆ (ನೋಂದಣಿ ಹೊಂದಿದ್ದಲ್ಲಿ) | 29AAAJM0788P1ZD |
| 2 | ಸಂಘದಿಂದ ಜಿ.ಎಸ್.ಟಿ. ಕಾನೂನಿನಡಿ ಬಡ್ಡಿ ಮತ್ತು ದಂಡಗಳು ಪಾವತಿಯಾಗಿದ್ದಲ್ಲಿ ವಿವರಗಳನ್ನು ನೀಡುವುದು. | ಯಾವುದೂ ಇರುವುದಿಲ್ಲ. |

**42) (1) ಸಹಕಾರ ಸಂಘವು ಹೊಂದಿರುವ ನೌಕರರ ಭವಿಷ್ಯ ನಿಧಿ ನೋಂದಣಿ ಮತ್ತು ರಿಟರ್ನ್ಸ್‌ಗಳ ಬಗ್ಗೆ ವಿವರಗಳು:**

| | | |
|---|---|---|
| 1 | ಸಹಕಾರ ಸಂಘ ಹೊಂದಿರುವ ನೌಕರರ ಭವಿಷ್ಯ ನಿಧಿ ಕಛೇರಿಯಲ್ಲಿನ ನೋಂದಣಿ ವಿವರ | KNSHG0002619000 |
| 2 | ಮಾಸಿಕ ರಿಟರ್ನ್ಸ್, ತ್ರೈಮಾಸಿಕ ರಿಟರ್ನ್ಸ್‌ಗಳನ್ನು ಮತ್ತು ವಾರ್ಷಿಕ ರಿಟರ್ನ್ಸ್‌ಗಳನ್ನು ಕಾಲಕಾಲಕ್ಕೆ ಸಲ್ಲಿಸಲಾಗುತ್ತಿದೆಯೇ. | ಸಲ್ಲಿಸಲಾಗಿದೆ. |
| 3 | ನಿಗದಿತ ಸಮಯಕ್ಕೆ ಕಂತುಗಳನ್ನು ಪಾವತಿಸದಿರುವುದಕ್ಕೆ ಮತ್ತು ಇತರೆ ಯಾವುದಾದರೂ ದಂಡ ವಿಧಿಸಲಾಗಿದೆಯೇ, ದಂಡದ ಮೊತ್ತ ಮತ್ತು ದಂಡಕ್ಕೆ ಕಾರಣಗಳು. ಸದರಿ ದಂಡಕ್ಕೆ ಸಂಬಂಧಿಸಿದವರುಗಳ ಜವಾಬ್ದಾರಿ ಗುರುತಿಸಿ ಆರ್ಥಿಕ ತಃಖ್ತೆಯಲ್ಲಿ ವಸೂಲಾತಿಗೆ ತೋರಿಸಿರುವ ಬಗ್ಗೆ ವಿವರ. | ಯಾವುದೂ ಇರುವುದಿಲ್ಲ. |
| 4 | ಇತರೆ ವಿವರಗಳು | – |

**42) (2) ಸಹಕಾರ ಸಂಘವು ವೃತ್ತಿ ತೆರಿಗೆ, ಹೊಂದಿದ ವಿವಿಧ ಲೈಸೆನ್ಸ್‌ಗಳ ರಿನಿವಲ್ ಮಾಡಿರುವ ಬಗ್ಗೆ ವಿವರಗಳು :**

| | | |
|---|---|---|
| 1 | ಸಹಕಾರ ಸಂಘದ ವೃತ್ತಿ ತೆರಿಗೆ ಪಾವತಿ ಮತ್ತು ಬಾಕಿ ಇತ್ಯಾದಿಗಳ ಬಗ್ಗೆ ವಿವರ. | ಪಾವತಿಸಲಾಗಿದೆ. |
| 2 | ಸಹಕಾರ ಸಂಘದ ನಿಯಂತ್ರಿತ ಆಹಾರ ಧಾನ್ಯ ಮಾರಾಟ ಲೈಸೆನ್ಸ್ ನಂ. ಆಹಾರ ಸಂರಕ್ಷಣೆ ಕಾಯ್ದೆಯಂತಿನ ಲೈಸೆನ್ಸ್, ರಾಸಾಯನಿಕ ಗೊಬ್ಬರ ಮಾರಾಟ ಲೈಸೆನ್ಸ್ ನಂ. ಇತ್ಯಾದಿಗಳ ರಿನಿವಲ್ ದಿನಾಂಕ ಮುಂತಾದವುಗಳ ಬಗ್ಗೆ ವಿವರ. | ಲೈಸೆನ್ಸ್ ನಂ. 10020043002994 FSSAI ಪರವಾನಗಿ ದಿನಾಂಕ:19/01/2025 ರವರೆಗೆ ಚಾಲ್ತಿಯಲ್ಲಿರುತ್ತದೆ. ರಾಸಾಯನಿಕ ಗೊಬ್ಬರ ಮಾರಾಟ ಇರುವುದಿಲ್ಲ. |

| | | |
|---|---|---|
| 3 | ಸಹಕಾರ ಸಂಘದ ತೂಕ ಮತ್ತು ಅಳತೆಯ ಲೈಸೆನ್ಸ್ ನಂ. ಮತ್ತು ರಿನಿವಲ್ ದಿನಾಂಕ ಮುಂತಾದವುಗಳ ಬಗ್ಗೆ ವಿವರ. | ಕಾಲಕಾಲಕ್ಕೆ ತೂಕ ಮತ್ತು ಅಳತೆಯ ಲೈಸೆನ್ಸ್ ನವೀಕರಣ ಆಗಿರುವುದನ್ನು ಗಮನಿಸಿದೆ. |
| 4 | ಇತರೆ ವಿವರಗಳು | – |

## 43) ಸಂಘದ ಲಾಭ ಅಥವಾ ನಷ್ಟದ ಬಗ್ಗೆ ಲೆಕ್ಕಪರಿಶೋಧಕರ ಟಿಪ್ಪಣಿ/ವಿಶ್ಲೇಷಣೆ:

ಸಂಘದ ವ್ಯಾಪಾರ ತ:ಖ್ತೆ: (ರೂ. ಲಕ್ಷಗಳಲ್ಲಿ)

| ವಿವರ | ಪ್ರಾರಂಭದ ದಾಸ್ತಾನು | ವರದಿ ಸಾಲಿನಲ್ಲಿ ಖರೀದಿ | ಅಖೈರು ದಾಸ್ತಾನು | ವರದಿ ಸಾಲಿನಲ್ಲಿ ಮಾರಾಟ | ಮಾರಾಟ ಲಾಭ | ಮಾರಾಟ ಲಾಭ ಪ್ರತಿಶತ |
|---|---|---|---|---|---|---|
| ಅಡಿಕೆ | 7,665.26 | 40,392.87 | 9,809 | 38,243.51 | –5.62 | –0.01 |
| ಮೈಲುತುತ | 83.05 | 591.54 | 159.76 | 565.74 | 50.91 | 9.00 |
| ಹೊಸ ಗೋಣಿಚೀಲ | 244.70 | 243.97 | 218.66 | 345.01 | 75.0 | 21.74 |
| ಗಟಾರ್ ಸ್ಪ್ರೇಯರ್ | 2.69 | 0 | 2.04 | 0.65 | 0 | 0 |
| ಸುಣ್ಣ | 4.31 | 60.19 | 5.25 | 67.90 | 8.65 | 12.74 |
| ರಾಳ | 0.13 | 32.33 | 0 | 37.90 | 5.44 | 14.35 |
| ಸಾವಯವ ಗೊಬ್ಬರ | 4.06 | 187.21 | 6.29 | 214.91 | 29.93 | 13.93 |
| ಪವರ್ ಸ್ಪೇಯರ್ | 0.30 | 0 | 0.20 | 0.12 | 0.02 | 16.67 |
| ಪ್ಲಾಸ್ಟಿಕ್ ಪ್ರೊಡಕ್ಟ್ | 1.61 | 0 | 0.60 | 1.15 | 0.14 | 12.17 |
| **ಒಟ್ಟು** | **8,006.11** | **41,508.11** | **10,201.8** | **39,476.92** | **164.50** | **0.42** |

| ವಿವರ | ಚೀಲ | ತೂಕ (ಕ್ವಿಂಟಾಲ್) | ಅಡಿಕೆ ಖರೀದಿ ಮೌಲ್ಯ | ಒಟ್ಟು ಖರೀದಿ ಮೌಲ್ಯದ ಪ್ರಮಾಣ |
|---|---|---|---|---|
| ಇತರೆ ಸಹಕಾರಿ ಸಂಸ್ಥೆಗಳಿಂದ | 33,335 | 22,265.850 | 107,37,29,900.00 | 26.58 |
| ಸದಸ್ಯರಿಂದ ನೇರವಾಗಿ | 31,200 | 21,036.557 | 89,33,93,479.00 | 22.11 |
| ಸಂಘದ ಶಾಖೆಗಳಿಂದ | 64,958 | 42,764.336 | 207,21,63,692.00 | 51.31 |
| ಒಟ್ಟು | 1,29,493 | 86,066.743 | 403,92,87,071.00 | 100 |

**ಸಂಘದ ಪ್ರಸಕ್ತ ಸಾಲಿನ ವ್ಯಾಪಾರ ವಹಿವಾಟು ಕಳೆದ ಸಾಲಿನ ಹೋಲಿಕೆಯೊಂದಿಗೆ ಪ್ರಗತಿ ಸಂಕ್ಷಿಪ್ತ ಇಂತಿದೆ.**

| ಕ್ರ.ಸಂ. | ವಿವರ | ಹಿಂದಿನ ಸಾಲಿನಲ್ಲಿ | ಪ್ರಸಕ್ತ ಸಾಲಿನಲ್ಲಿ | ಶೇಕಡಾವಾರು ಪ್ರಗತಿ |
|---|---|---|---|---|
| | ಆರಂಭಿಕ ದಾಸ್ತಾನು | 132,06,87,637.00 | 80,06,11,478.00 | –39.38 |
| 1 | ಇತರೆ ಖರೀದಿ | 13,84,84,644.00 | 11,15,24,367.90 | –19.47 |
| 2 | ಅಡಿಕೆ ಖರೀದಿ | 333,38,69,440.00 | 403,92,87,071.20 | 21.16 |
| 3 | ಇತರೆ ಮಾರಾಟ | 14,21,39,608.00 | 12,33,40,773.42 | –13.23 |
| 4 | ಅಡಿಕೆ ಮಾರಾಟ | 397,00,06,727.00 | 382,43,51,501.00 | –3.67 |
| 5 | ಅಖೈರು ದಾಸ್ತಾನು | 80,06,11,478.00 | 102,01,81,748.12 | 27.43 |
| 6 | ಖರೀದಿ ವೆಚ್ಚ | – | – | – |
| 7 | ವ್ಯಾಪಾರ ಲಾಭ | 11,97,16,092.00 | 1,64,51,105.44 | –86.26 |

| | | |
|---|---|---|
| 2 | ವ್ಯಾಪಾರ ಲಾಭದ ಪ್ರಮಾಣವು ಸಾಮಾನ್ಯವಾಗಿ ಸರಿಯಿರುವ ಬಗ್ಗೆ. | ವರದಿ ಸಾಲಿನಲ್ಲಿ ಅಡಿಕೆ ಮಾರಾಟದ ಪ್ರಮಾಣದಲ್ಲಿ ಇಳಿಕೆಯಾಗಿದ್ದು ಮತ್ತು ನಿವ್ವಳ ಮಾರ್ಜಿನ್‌ನಲ್ಲಿ ಗಣನೀಯ ಇಳಿಕೆಯಾಗಿದ್ದು ವ್ಯಾಪಾರ ಲಾಭದಲ್ಲಿ ಹೆಚ್ಚಿನ ಇಳಿಕೆಯನ್ನು ಗಮನಿಸಲಾಗಿದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.<br>**ಸಮಜಾಯಿಷಿ: (1) ಅಡಿಕೆ ಮಾರಾಟದಲ್ಲಿ ಇಳಿಕೆಗೆ ಕಾರಣ: ಉತ್ತರ ಭಾರತದ ವ್ಯಾಪಾರಿಗಳಿಂದ ಸಂಘಕ್ಕೆ ಬರಬೇಕಾದ ಹಣವನ್ನು (ಮಾರಾಟವಾದ ಹಣ) ಗಮನದಲ್ಲಿಟ್ಟುಕೊಂಡು ಸಂಸ್ಥೆಯ ಹಿತದೃಷ್ಟಿ ಯಿಂದ ವ್ಯಾಪಾರವಾದ ಮೂಟೆಯನ್ನು ಬಿಡುಗಡೆ ಮಾಡಲಾಗುವುದು. ವರದಿ ಸಾಲಿನ ಅಂತ್ಯದಲ್ಲಿ ಮಾರಾಟ ಒಪ್ಪಂದವಾದ ದಾಸ್ತಾನುಗಳನ್ನು 2024ರ ಏಪ್ರಿಲ್-ಮೇ ತಿಂಗಳುಗಳಲ್ಲಿ ಬಿಡುಗಡೆ ಮಾಡಲಾಗಿದೆ. ಆದಕಾರಣ 2022-23ನೇ ಸಾಲಿಗೆ ಹೋಲಿಸಿದಾಗ ರೂ.15 ಕೋಟಿಗಳಷ್ಟು ಮಾರಾಟದಲ್ಲಿ ಇಳಿಕೆಯಾಗಿದೆ.**<br>**(2) ಲಾಭದಲ್ಲಿ ಇಳಿಕೆಗೆ ಕಾರಣ: ಅಡಿಕೆ ಬೆಲೆಯಲ್ಲಿ ತೀವ್ರ ಏರಿಳಿತವಾದ ಕಾರಣ ಮಾರಾಟದ ದರದಲ್ಲಿ ಹೆಚ್ಚಿನ ಅಂತರವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಆದರೆ, ವ್ಯಾಪಾರ ಲಾಭದ ಜೊತೆಗೆ ರೂ.7.96 ಕೋಟಿಗಳಷ್ಟು ಹ್ಯಾಂಡ್ಲಿಂಗ್ ಚಾರ್ಜಸ್ ರೂಪದಲ್ಲಿ ಸಂಘಕ್ಕೆ ಜಮಾ ಬಂದಿರುತ್ತದೆ.** |
| 3 | ವ್ಯಾಪಾರ ನಷ್ಟವಿದ್ದಲ್ಲಿ ಕಾರಣಗಳೊಂದಿಗೆ ವಿವರಿಸುವುದು. | ಅನ್ವಯವಾಗುವುದಿಲ್ಲ |
| 4 | ವರದಿ ಸಾಲಿನಂತ್ಯಕ್ಕೆ ಇರುವ ಆಖೈರು ದಾಸ್ತಾನು ಯಾರಿಂದಲಾದರೂ ಪರಿಶೀಲನೆಯಾಗಿ ದೃಢೀಕರಿಸಲಾಗಿದೆಯೇ? ದಾಸ್ತಾನು ಮೌಲ್ಯ ನಿಖರವಾಗಿದೆಯೇ? ದಾಸ್ತಾನಿನ ಮೇಲೆ ವಿಮೆ ಮಾಡಿಸಲಾಗಿದೆಯೇ? | ವರದಿ ಸಾಲಿನಂತ್ಯಕ್ಕೆ ಇರುವ ಆಖೈರು ದಾಸ್ತಾನು ಆಡಳಿತ ಮಂಡಳಿಯ ಸದಸ್ಯರಿಂದ ಪರಿಶೀಲನೆಯಾಗಿ ದೃಢೀಕರಿಸಲಾಗಿದ್ದು, ದಾಸ್ತಾನು ಮೌಲ್ಯವನ್ನು ಖರೀದಿ ಬೆಲೆಯಲ್ಲಿ ಮತ್ತು ಅಡಿಕೆ ದಾಸ್ತಾನು ಮೌಲ್ಯವನ್ನು ಖರೀದಿ, ಮಾರಾಟದ ಸರಾಸರಿ ದರವನ್ನು ಪರಿಗಣಿಸಿ ಮೌಲ್ಯವನ್ನು ನಿಗದಿಗೊಳಿಸಲಾಗಿದೆ. ದಾಸ್ತಾನಿನ ಮೇಲೆ ವಿಮೆ ಮಾಡಿಸಲಾಗಿದೆ. |

## ಪ್ರಸಕ್ತ ಸಾಲಿನ ವಹಿವಾಟನ್ನು ಹಿಂದಿನ ಸಾಲಿನ ವಹಿವಾಟಿಗೆ ಹೋಲಿಕೆ ಹಾಗೂ ಗಳಿಸಿದ ಲಾಭ/ನಷ್ಟದ ಬಗ್ಗೆ ವಿಮರ್ಷೆ

| ಕ್ರ. ಸಂ | ವಿವರ | | | | ಪ್ರತಿಶತ ಪ್ರಮಾಣ | | ಹೆಚ್ಚು | ಕಡಿಮೆ |
|---|---|---|---|---|---|---|---|---|
| | ವಿವರ | ಪ್ರಸಕ್ತ ಸಾಲಿನ ಮೊತ್ತ | ಹಿಂದಿನ ಸಾಲಿನ ಮೊತ್ತ | ಪ್ರತಿಶತ ಪ್ರಮಾಣದ ಆಧಾರ | ಪ್ರಸಕ್ತ ಸಾಲಿನ | ಹಿಂದಿನ ಸಾಲಿನ | | |
| 1 | ಒಟ್ಟು ಮಾರಾಟ | 394,76,92,274.42 | 411,21,46,335 | – | 3.50 | 5.47 | – | 1.97 |
| | ವ್ಯಾಪಾರ ಮತ್ತು ದಲ್ಲಾಳಿ ಮಾರಾಟ ಲಾಭ | 13,82,18,123.04 | 22,51,41,313 | ಒಟ್ಟು ಮಾರಾಟ | | | | |
| | ವ್ಯಾಪಾರಿ ನಷ್ಟ | | | | | | | |

| | | | | | | | | |
|---|---|---|---|---|---|---|---|---|
| 2 | ಒಟ್ಟು ಗುಂತಾವಣಿಗಳು | 20,33,79,023 | 23,53,69,023 | – | | | | |
| | ಗುಂತಾವಣಿಗಳ ಮೇಲೆ ಸ್ವೀಕರಿಸಿದ ಬಡ್ಡಿ | 2,28,31,226 | 3,10,96,922 | ಒಟ್ಟು ಗುಂತಾವಣಿಗಳು | 6.00 | 6.60 | | 0.60 |
| 3 | ಒಟ್ಟು ನೀಡಿದ ಸಾಲ | 262,20,26,039 | 236,36,60,210 | – | | | | |
| | ಸಾಲಗಳ ಮೇಲೆ ಸ್ವೀಕರಿಸಿದ ಬಡ್ಡಿ | 21,37,29,603 | 19,16,11,404 | ಒಟ್ಟು ನೀಡಿದ ಸಾಲ | 8.15 | 8.10 | 0.05 | |
| 4 | ದುಡಿಯುವ ಬಂಡವಾಳ | 420,79,61,717.09 | 388,02,56,600 | – | | | | |
| | ಇತರೆ ಆದಾಯ | 40,62,098 | 41,18,186 | ದುಡಿಯುವ ಬಂಡವಾಳ | 0.09 | 0.10 | | 0.01 |
| 5 | ಒಟ್ಟು ಪಡೆದ ಸಾಲ | 109,94,88,948 | 97,64,,97,770 | | | | | |
| | ಸಾಲಗಳ ಮೇಲೆ ಪಾವತಿಸಿದ ಬಡ್ಡಿ | 3,57,50,720 | 2,63,29,996 | ಒಟ್ಟು ಪಡೆದ ಸಾಲ | 3.25 | 2.69 | 0.56 | |
| 6 | ಒಟ್ಟು ಠೇವಣಿ | 207,37,02,286 | 203,73,89,228 | – | | | | |
| | ಠೇವುಗಳ ಪಾವತಿಸಿದ ಬಡ್ಡಿ | 12,39,51,357 | 12,29,19,582 | ಒಟ್ಟು ಠೇವಣಿ | 5.97 | 6.03 | | 0.06 |
| | ದುಡಿಯುವ ಬಂಡವಾಳ | 420,79,61,717.09 | 388,02,56,600 | | | – | | |
| 7 | ಸಿಬ್ಬಂದಿ ವೆಚ್ಚ | 8,05,77,010 | 6,46,20,198 | | 1.91 | 1.66 | 0.25 | |
| 8 | ಆಡಳಿತ ವೆಚ್ಚ | 5,93,05,931 | 5,07,84,564 | | 1.41 | 1.30 | 0.11 | |
| 9 | ಇತರೆ ವೆಚ್ಚ | | | | – | | | |
| 10 | ಸವಕಳಿಗಳು | 2,27,20,196 | 2,07,01,245 | ದುಡಿಯುವ ಬಂಡವಾಳ | 0.54 | 0.53 | 0.01 | |
| 11 | ಅವಕಾಶಗಳು | 40,00,000 | 12,24,54,964 | | 0.10 | 3.15 | | 3.05 |
| 12 | ನಿವ್ವಳ ಲಾಭ | 5,25,35,835 | 4,41,57,277 | | 1.25 | 1.13 | 0.12 | |
| | ನಿವ್ವಳ ನಷ್ಟ | – | – | | | | | |

| | | |
|---|---|---|
| | ಈ ಮೇಲಿನ ತುಲನಾತ್ಮಕ ಅಂಕಿ ಸಂಖ್ಯೆಗಳ ಬಗ್ಗೆ ವಿಮರ್ಶೆ : | |
| | ಲಾಭ-ನಷ್ಟದ ತ:ಖ್ತೆ: ವರದಿ ಸಾಲಾಂತ್ಯಕ್ಕೆ ಗಳಿಸಿದ ನಿವ್ವಳ ಲಾಭ: | ರೂ. 5,25,35,835.64 |
| 1 | ಸಂಘವು ಪ್ರಸಕ್ತ 2023-2024 ನೇ ಸಾಲಿನಲ್ಲಿ ಗಳಿಸಿರುವ ಲಾಭವು ಪ್ರಮಾಣಿಕರಿಸುವ ಮುನ್ನ ಕರ್ನಾಟಕ ಸಹಕಾರಿ ಸಂಘಗಳ ಕಾಯ್ದೆ ನಿಯಮ 22 ರಲ್ಲಿ ವಿವರಿಸಿದ ಎಲ್ಲ ಅವಕಾಶಗಳನ್ನು ಮಾಡಿರುವುದರ ಬಗ್ಗೆ ವಿಮರ್ಷೆ. | ಅವಕಾಶಗಳನ್ನು ಕಲ್ಪಿಸಲಾಗಿದೆ. |
| 2 | ವರ್ಷಾಂತ್ಯಕ್ಕೆ ಬರತಕ್ಕ ಇರುವ ಬಡ್ಡಿ ವರದಿ ಸಾಲಿನ ಲಾಭವೆಂದು ಪರಿಗಣಿಸಿದಿದ್ದಲ್ಲಿ ಈ ಕುರಿತು ಕರ್ನಾಟಕ ಸಹಕಾರಿ ಸಂಘಗಳ ನಿಯಮ 22(ಎ) ರನ್ವಯ ನಿಬಂಧಕರ ಮಂಜೂರಿ ಪಡೆಯಲಾಗಿದೆಯೇ ? | ವರದಿ ಸಾಲಿನಲ್ಲಿ ಬರತಕ್ಕ ಬಡ್ಡಿಯನ್ನು ಲಾಭವೆಂದು ಪರಿಗಣಿಸಿರುವುದಿಲ್ಲ. |
| 3 | ಸಂಘವು ಗಳಿಸಿರುವ ಲಾಭ ಕಳೆದ ಸಾಲಿನ ಹೋಲಿಕೆಯೊಂದಿಗೆ ಹೆಚ್ಚು / ಕಡಿಮೆ ಇರುವುದರ ಬಗ್ಗೆ ವಿಮರ್ಶೆ | ನಿವ್ವಳ ಲಾಭ ಕಳೆದ ಸಾಲಿಗೆ ಹೋಲಿಸಿದಾಗ ಶೇಕಡ 18.97ರಷ್ಟು ಹೆಚ್ಚಾಗಿರುತ್ತದೆ. |
| 4 | ಕಳೆದ ಸಾಲುಗಳ ಲಾಭ ವಿಲೇವಾರಿ ಆಗದೆ ಮುಂದುವರೆದಿರುವ ವಿವರ ಹಾಗೂ ಈ ಸಂಬಂದ ಲೆಕ್ಕಪರಿಶೋಧಕರು ನೀಡಬೇಕಾಗಿರುವ ಸಲಹೆಯೊಂದಿಗೆ ವಿಮರ್ಷೆ | ಲಾಭ ವಿಲೇವಾರಿ ಆಗಿರುತ್ತದೆ. |
| 5 | ನಷ್ಟವಾಗಿದ್ದಲ್ಲಿ ಕಾರಣಗಳು : | ಅನ್ವಯವಾಗುವುದಿಲ್ಲ. |

**ಇತರೆ ಷರಾ ಹಾಗೂ ಬಾಬ್ತುಗಳು:**

**ವರ್ತಕರ ಖಾತೆ:–** ಮೇಲ್ಕಂಡ ಮೊತ್ತದಲ್ಲಿ ದಾವಾ ಡಿಕ್ರಿ ಮತ್ತು ಇ.ಪಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಕಛೇರಿಯಲ್ಲಿ ಒಂದು ಪ್ರಕರಣದಿಂದ ರೂ.11,55,888–65 ಹಾಗೂ ಶಾಖೆಗಳಲ್ಲಿ 4 ಪ್ರಕರಣಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಒಂದು ಪ್ರಕರಣದಲ್ಲಿ ವರದಿ ಅಂತ್ಯಕ್ಕೆ ರೂ.4,81,29,774.1 ಒಟ್ಟು ರೂ.4,92,85,662.75 ವಸೂಲಾಗತಕ್ಕದ್ದಿರುತ್ತದೆ. ಮೇಲ್ಕಂಡ ಖಾತೆ ಬಾಕಿಗಳ ಸಂಬಂಧ ಕುಳುವಾರು ಮಾಹಿತಿ ಲಭ್ಯವಿದ್ದು, ಈ ಮೊಬಲಗು ವರ್ತಕರಿಂದ ಬರಬೇಕಾದ ಬಾಕಿ ಕುಳವಾರಿನಲ್ಲಿ ಸೇರಿರುತ್ತದೆ. ಕುಳುವಾರು ತಾಳೆ ಇರುತ್ತದೆ.

**ಸಮಜಾಯಿಷಿ: ದಾವಾ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶಾನುಸಾರ ಕ್ರಮ ಕೈಗೊಳ್ಳಲಾಗುವುದು**.

ಶಾಖೆಗಳಲ್ಲಿ ದಾವಾ ಪ್ರಕರಣಗಳನ್ನು ಹೊರತುಪಡಿಸಿ ವರದಿ ಅಂತ್ಯಕ್ಕೆ ಕೆಲವು ವರ್ತಕರಗಳಿಂದ ದಾಸ್ತಾನು ಇಲ್ಲದೆ, ಸಾಲ ಬಾಕಿ ನಿಂತಂತಹ ಪ್ರಕರಣಗಳು ಕಂಡುಬಂದಿದ್ದು, ಕೆಲವು ಪ್ರಕರಣಗಳಲ್ಲಿ ವಸೂಲಿಯಾಗಿದ್ದರೂ ಸಹಾ ಉಳಿದ ಪ್ರಕರಣಗಳನ್ನು ಆದ್ಯತೆ ಮೇರೆಗೆ ತಕ್ಷಣ ವಸೂಲಿ ಕ್ರಮವಿಡುವುದು ಸೂಕ್ತವಾಗಿರುತ್ತದೆ. ಹಾಗೂ ಕೆಲವು ಪ್ರಕರಣಗಳಲ್ಲಿ ದಾಸ್ತಾನು ಮೌಲ್ಯ ಕಡಿಮೆ ಇದ್ದು, ಅಸಲು ಮತ್ತು ಬಡ್ಡಿ ಬಾಕಿಯು ದಾಸ್ತಾನು ಮೌಲ್ಯಕ್ಕಿಂತ ಹೆಚ್ಚಿರುವುದು ಕಂಡು ಬಂದಿರುತ್ತದೆ. ಈ ಪ್ರಕರಣಗಳ ವಸೂಲಿಗೆ ಸೂಕ್ತ ಕ್ರಮವಿಡಬೇಕಿರುವ ಜೊತೆಗೆ ದಾಸ್ತಾನು ಬಿಡುಗಡೆ ಸಂದರ್ಭದಲ್ಲಿ ಬಡ್ಡಿ ಬಾಕಿ ಮೊತ್ತವನ್ನು ಪಡೆದ ನಂತರವೇ ದಾಸ್ತಾನು ಬಿಡುಗಡೆಯಾಗುವಂತೆ ಗಣಕೀಕರಣದಲ್ಲಿ ಅಳವಡಿಸಲಾಗಿದೆ ಇದೇ ರೀತಿ ಅಸಲು ಖಾತೆಗೆ ಜಮಾ ಬಂದ ನಂತರವೇ ದಾಸ್ತಾನು ಬಿಡುಗಡೆಯಾಗುವಂತೆ ಗಣಕೀಕರಣದಲ್ಲಿ ಅಳವಡಿಸುವ ಪ್ರಕ್ರಿಯೆಯಾಗಬೇಕಿದೆ. ದಾಸ್ತಾನುಗಳನ್ನು ವರ್ತಕರಿಗೆ ಬಿಟ್ಟುಕೊಡುವ ನಿರ್ಧಾರಗಳನ್ನು ಶಾಖಾ ವ್ಯವಸ್ಥಾಪಕರು ತೆಗೆದುಕೊಳ್ಳತ್ತಿರುವುದನ್ನು ಗಮನಿಸಿದ್ದು, ಇದು ಸಂಘಕ್ಕೆ ನಷ್ಟ ಉಂಟಾಗುವ ಸಂಭವ ಇರುವುದರಿಂದ ಈ ಕುರಿತು ಗರಿಷ್ಟ ಮಿತಿ ನಿರ್ಧರಿಸುವ ಅವಶ್ಯಕತೆಯಿರುತ್ತದೆ. ಈ ಕುರಿತು ಸೂಕ್ತ ನಿರ್ಧಾರ ಆಡಳಿತ ಮಂಡಳಿ ತೆಗೆದುಕೊಳ್ಳುವುದು ಅವಶ್ಯಕವಿರುತ್ತದೆ.

**ಸಮಜಾಯಿಷಿ: ಸಂಘದ ವ್ಯಾಪಾರಾಭಿವೃದ್ಧಿಗೆ ಧಕ್ಕೆಯಾಗದಂತೆ ಲೆಕ್ಕಪರಿಶೋಧಕರ ಸಲಹೆಯನ್ನು ಪಡೆದು ಸಾಧಕ–ಬಾಧಕ ಗಮನಿಸಿಕೊಂಡು ಕ್ರಮವಿಡಲಾಗುವುದು**.

ಸಂಸ್ಥೆಯ ವ್ಯಾಪಾರ ನಿಯಮಗಳ ರೀತ್ಯಾ, ವರ್ತಕರು ಕೊಡಬೇಕಾದ ಹಣಕ್ಕೆ ಆಯಾ ಸಮಯಕ್ಕನುಸಾರವಾಗಿ ಬಡ್ಡಿದರ ವಿಧಿಸುತ್ತಿದ್ದು, ಪ್ರಥಮ ಆದ್ಯತೆಯಲ್ಲಿ ಬಡ್ಡಿ ಜಮಾ ಬರುತ್ತಿರುವುದನ್ನು ಪರಿಶೀಲಿಸಿದೆ.

ವರ್ತಕರಿಂದ ದಿನಾಂಕ 31.03.2024 ಕ್ಕೆ ದಾವಾ ಪ್ರಕರಣದಲ್ಲಿ ಬಡ್ಡಿ ರೂ.260.46 ಲಕ್ಷ ಬರಲು ಬಾಕಿ ಇರುತ್ತದೆ. ಉಳಿದಂತೆ ವರ್ತಕರ ಬಡ್ಡಿಯನ್ನು ಸಾಲಾಂತ್ಯಕ್ಕೆ ವಸೂಲಿ ಮಾಡಲಾಗಿರುತ್ತದೆ. ವರ್ತಕರು ದಾಸ್ತಾನು ಬಿಡುಗಡೆಗೆ ಬಾಕಿ ಇರುವ ದಾಸ್ತಾನು ಮೌಲ್ಯದ ಬಡ್ಡಿ ಹೊರತುಪಡಿಸಿ ಉಳಿದಂತೆ ಬಡ್ಡಿ ವಸೂಲಿಯಾಗಿರುತ್ತದೆ.

ಖರೀದಿ ಮಿತಿ ನಿಗದಿಪಡಿಸಿದ ವರ್ತಕರಿಂದ ಸರಿಸಮನಾದ ಭದ್ರತಾ ಠೇವಣಿ ಕೆಲವು ವರ್ತಕರಿಂದ ಪಡೆಯಲಾಗಿದ್ದು, ಉಳಿದ ವರ್ತಕರಿಂದ ಪ್ರತಿ ಖರೀದಿಗೆ ಪಡೆದ ಭದ್ರತಾ ಠೇವಣಿಯ 100:20 ಅನುಪಾತದಲ್ಲಿ ಇರುವಂತೆ ನೋಡಿಕೊಳ್ಳಬೇಕಾಗಿರುತ್ತದೆ. ಈ ಕುರಿತು ಕ್ರಮವಿಡಲು ಸೂಚಿಸಿದೆ.

**ಸಮಜಾಯಿಷಿ: ಸಲಹೆಯನ್ನು ಗಮನಿಸಿದೆ**.

ವಸೂಲಾಗದ ಬಾಕಿಗಳ ಮತ್ತು ಬಡ್ಡಿ ವಸೂಲಿಗೆ ಪೂರ್ಣ ಪ್ರಮಾಣದಲ್ಲಿ ಕಾನೂನು ಕ್ರಮ ಜಾರಿಗೊಳಿಸಲಾಗಿದ್ದು ವಸೂಲಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಪ್ರತಿ ಬಾರಿ ವರ್ತಕರಿಗೆ ಬಿಟ್ಟುಕೊಟ್ಟ ಅಡಿಕೆ ಮೂಟೆಗಳಿಗೆ, ಸಂಬಂಧಿಸಿದ ವರ್ತಕರಿಂದ/ವರ್ತಕ ಸಂಸ್ಥೆಯಿಂದ ಮೂಟೆಗಳನ್ನು ಪಡೆದಿರುವ ಬಗ್ಗೆ ಕಡ್ಡಾಯವಾಗಿ ಅಧಿಕೃತ ದೃಢೀಕರಣ ಪಡೆಯುವಂತೆ ಕ್ರಮವಿಡುವುದು ಅಗತ್ಯವಾಗಿರುತ್ತದೆ.

**ಸಮಜಾಯಿಷಿ: ಕ್ರಮವಿಡಲಾಗಿದೆ.**

ವರದಿ ಸಾಲಿನಲ್ಲಿ ಮೆ.ಯು. ಬಸಪ್ಪ ಅಂಡ್ ಸನ್ಸ್, ಅಡಿಕೆ ವ್ಯಾಪಾರಿಗಳು, ಸಾಗರ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗೌ.ಸರ್ವೋಚ್ಚ ನ್ಯಾಯಾಲಯವು ಸಂಘದ ವಿರುದ್ಧ ತೀರ್ಪು ನೀಡಿದ್ದು, ಸದರಿ ವ್ಯಾಪಾರಿಗಳಿಂದ ಬರಬೇಕಾದ ಅಸಲು ರೂ.13,58,426.00 ಮೊಬಲಗನ್ನು ದಿನಾಂಕ:30–01–2024 ರಂದು ನಡೆದ ಆಡಳಿತ ಮಂಡಳಿ ವಿಷಯ 16(3) ರ ತೀರ್ಮಾನದಂತೆ ಹೋಕುಬಾಕಿ ಕಾಯ್ದಿರಿಸಿದ ಅವಕಾಶಕ್ಕೆ ಖರ್ಚು ಹಾಕಿ ಈ ಪ್ರಕರಣವನ್ನು ಮುಕ್ತಾಯಗೊಳಿಸಿರುತ್ತಾರೆ. ಸಂಘವು ವ್ಯಾಜ್ಯಗಳನ್ನು ಸೂಕ್ತವಾಗಿ ಬಗೆಹರಿಸಿಕೊಂಡು ಸಂಘಕ್ಕೆ ಆಗಬಹುದಾದ ನಷ್ಟವನ್ನು ತಪ್ಪಿಸಲು ಕ್ರಮವಿಡುವಂತೆ ಸಲಹೆ ನೀಡಲಾಗಿದೆ.

**ಸಮಜಾಯಿಷಿ: ಸಲಹೆಯನ್ನು ಗಮನಿಸಿದೆ.**

**<u>ಅಡಿಕೆ ಖರೀದಿ ಮತ್ತು ಮಾರಾಟದ ಬಗ್ಗೆ:</u>**

ಶಿವಮೊಗ್ಗ ನೇರ ಖರೀದಿ ಕೇಂದ್ರದಲ್ಲಿ ಅಡಿಕೆ ಖರೀದಿ ಮಾಡುವಾಗ ಇರುವ ಆಂತರಿಕ ನಿಯಂತ್ರಣ ಇನ್ನಷ್ಟು ಬಲಪಡಿಸಿಕೊಳ್ಳಬೇಕು. ಅಡಿಕೆ ಖರೀದಿ ಮಾಡುವ ಸಂದರ್ಭದಲ್ಲಿ ಬೇಡಿಕೆಯ ಮೇಲೆ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಅವಶ್ಯಕತೆಗೆ ಮೀರಿ ಖರೀದಿ ಮಾಡುವುದರಿಂದ ಮತ್ತು ಹೆಚ್ಚಿನ ಅಂತಿಮ ದಾಸ್ತಾನು ಇಡುವುದರಿಂದ ಸಂಘಕ್ಕೆ ಆರ್ಥಿಕ ಹೊರೆ ಬೀಳುವ ಸಂಭವವಿರುತ್ತದೆ ಮತ್ತು ದಾಸ್ತಾನು ಶೇಖರಣೆಗೆ ಅಗತ್ಯವಿರುವ ಬಂಡವಾಳಕ್ಕೆ ಸಾಲ ತೆಗೆದುಕೊಂಡು ಬಡ್ಡಿ ಪಾವತಿ ಮಾಡಬೇಕಾಗಿರುತ್ತದೆ. ಅಗತ್ಯಕ್ಕಿಂತ ಹೆಚ್ಚಿನ ದಾಸ್ತಾನು ಇಡುವುದರಿಂದ ಮುಂದೆ ದರ ಇಳಿಕೆಯಾದರೆ ಅದು ಸಂಘಕ್ಕೆ ನಷ್ಟ ಉಂಟು ಮಾಡುವ ಸಾಧ್ಯತೆಯಿರುತ್ತದೆ. ಈ ಕುರಿತು ಆಡಳಿತ ಮಂಡಳಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದು ಅವಶ್ಯವಾಗಿರುತ್ತದೆ.

**ಸಮಜಾಯಿಷಿ: ಅಗತ್ಯ ಕ್ರಮವಿಡಲಾಗುವುದು.**

ವರದಿ ಸಾಲಿನ ಅಂತ್ಯಕ್ಕೆ ಸಂಡ್ರಿ ಡೆಟಾರ್ಸ್, ವರ್ತಕರ ಬಾಕಿ, ಸಂಡ್ರಿ ಕ್ರೆಡಿಟಾರ್ಸ್‌ಗಳಿಗೆ ಸಂಬಂಧಪಟ್ಟವರಿಂದ ಧೃಢೀಕರಣ ಪಡೆದುಕೊಂಡಿರುವುದಿಲ್ಲ. ಈ ಕುರಿತು ಕ್ರಮವಿಡಲು ಸೂಚಿಸಲಾಗಿದೆ.

**ಸಮಜಾಯಿಷಿ: ಸಂಡ್ರಿ ಡೆಟಾರ್ಸ್, ವರ್ತಕರ ಬಾಕಿ, ಸಂಡ್ರಿ ಕ್ರೆಡಿಟಾರ್ಸ್‌ಗಳಿಗೆ ಸಂಬಂಧಪಟ್ಟವರಿಂದ ದೃಢೀಕರಣ ಪಡೆದುಕೊಳ್ಳಲು ಕ್ರಮವಿಡಲಾಗಿರುತ್ತದೆ.**

**45) ಲೆಕ್ಕಪರಿಶೋಧಕರ ಸಲಹೆ ಹಾಗೂ ಸೂಚನೆಗಳು:- (ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮುಕ್ತಾಯಗೊಳಿಸಿದ ನಂತರ ಸಂಘದ ಲೆಕ್ಕಪುಸ್ತಕಗಳ ನಿರ್ವಹಣೆ, ಹಿಂದಿರುಗಿಸುವಿಕೆ, ಸಂಘವು ಹೊಂದಿರುವ ಲಾಭ/ನಷ್ಟ ಹಾಗೂ ಸಂಘವು ಆರ್ಥಿಕ ಅಭಿವೃದ್ಧಿ ಹೊಂದಲು ಕೈಗೊಳ್ಳಬೇಕಾದ ಕ್ರಮಗಳ ಹಿನ್ನೆಲೆಯಲ್ಲಿ ನೀಡುವುದು)**

1. ಏಜೆನ್ಸಿಗಳಿಗೆ ಶಾಖೆಗಳಿಂದ ಏಜೆನ್ಸಿಯ ಬ್ಯಾಂಕ್ ಖಾತೆಗಳಿಗೆ ಹಣ ರವಾನೆ ಮಾಡುತ್ತಿದ್ದು, ಸದಸ್ಯರಿಗೆ ಪಾವತಿಸುವ ಹಣವನ್ನು ನೇರವಾಗಿ ಸದಸ್ಯರ ಬ್ಯಾಂಕ್ ಖಾತೆಗಳಿಗೆ ಶಾಖೆಗಳಿಂದ ಹಣ ವರ್ಗಾವಣೆ ಮಾಡಿದಲ್ಲಿ ಸದಸ್ಯರಿಗೆ ಶೀಘ್ರವಾಗಿ ಹಣ ತಲುಪುತ್ತದೆ.

   **ಸಮಜಾಯಿಷಿ: ಈಗಾಗಲೇ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ಸದಸ್ಯರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಾಗುತ್ತಿದೆ.**

2. ಸಾಲದ ಮೊತ್ತವನ್ನು ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಿ ನಗದು ಪಾವತಿ ಮಾಡಲಾಗುತ್ತಿದೆ. ರೂ.20,000.00 ಪಾವತಿ ಮೇಲಿನ ಮೊಬಲಗನ್ನು ಕಡ್ಡಾಯವಾಗಿ ಬ್ಯಾಂಕ್ ಖಾತೆಯ ಮೂಲಕ ಪಾವತಿಸುವ ಕ್ರಮ ಅಗತ್ಯವಿದೆ.

   **ಸಮಜಾಯಿಷಿ: ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್ ಖಾತೆಯ ಮೂಲಕ ಹಣವನ್ನು ಪಾವತಿಸಲಾಗುತ್ತಿದೆ. ಹಂತ ಹಂತವಾಗಿ ಪೂರ್ಣ ಪ್ರಮಾಣದಲ್ಲಿ ಈ ಬಗೆಗೆ ಕ್ರಮ ಕೈಗೊಳ್ಳಲಾಗುವುದು.**

3. ಕಟಾವು ಸಾಲ ಪಾವತಿಸುವಾಗ ಪಹಣಿಯಲ್ಲಿ ಇತರೆ ಸಂಘ ಸಂಸ್ಥೆಗೆ ಆಧಾರವಾಗಿದ್ದು ಇಸಿಯಲ್ಲಿ ನಮೂದಿಸದಿರುವುದು ಕಂಡು ಬಂದಿದ್ದು, ಇದರ ಬಗ್ಗೆ ಗಮನಿಸಿ ಕ್ರಮ ಕೈಗೊಳ್ಳಬೇಕಾಗಿರುತ್ತದೆ ಮತ್ತು ಇಸಿ ರಿಜಿಸ್ಟರ್ ನಿರ್ವಹಿಸಲೂ ಸೂಚಿಸಲಾಗಿದೆ.

   **ಸಮಜಾಯಿಷಿ: ಕಟಾವು ಸಾಲ ಪಾವತಿಸುವಾಗ ಸದಸ್ಯರ ಹಿಡುವಳಿಯನ್ನು ಹಾಗೂ ಅವರು ಸಂಘದೊಂದಿಗೆ ನಡೆಸಿದ ವ್ಯವಹಾರವನ್ನು ಗಣನೆಗೆ ತೆಗೆದುಕೊಂಡು ಇತರೆ ಸಂಘ ಸಂಸ್ಥೆಗಳ ಆಧಾರವನ್ನು ಪರಿಶೀಲಿಸಿ, ಪಾವತಿಸಲಾಗುತ್ತಿದೆ ಮತ್ತು ಫ್ರೂಟ್ ಆ್ಯಪ್ ತಂತ್ರಾಂಶದ ಮೂಲಕ ಸಾಲ ಪಡೆಯುವ ಸದಸ್ಯರ ಪಹಣಿಯ ವಿವರಗಳನ್ನು ಫಾರಂ-ಠರಲ್ಲಿ ಭರ್ತಿ ಮಾಡಲಾಗುತ್ತಿದೆ.**

4. ಸಾಲಾಖೈರಿಗೆ ಕೊಡಬೇಕಾದ ಮತ್ತು ಬರಬೇಕಾದ ಖಾತೆಗಳ ಈ ವಿವರವನ್ನು ಲಗತ್ತಿಸಿದೆ. ಆಗಿಂದಾಗ್ಗೆ ಈ ಖಾತೆಯ ಮೊಬಲಗನ್ನು ಪರಿಶೀಲಿಸಿ ನಿಖರವಾದ ಖಾತೆಗೆ ವರ್ಗಾವಣೆ ಮಾಡುವ, ಬರಬೇಕಾದ ಮೊಬಲಗನ್ನು ಕರಾರುವಕ್ಕಾಗಿ ವಸೂಲಿ ಮಾಡುವ ಮತ್ತು ಪ್ರಕರಣವಾರು ಗುರುತಿಸಿ ಪಾವತಿಗೆ ಕ್ರಮವಿಡುವ ಪ್ರಕ್ರಿಯೆಯನ್ನು ನಿರಂತರವಾಗಿ ಪಾಲಿಸಬೇಕಾಗಿರುತ್ತದೆ.

   **ಸಮಜಾಯಿಷಿ: ಸಲಹೆಯಂತೆ ಕ್ರಮವಿಡಲಾಗುವುದು.**

5. **ಆಪದ್ಧನ ನಿಧಿ:** ಪ್ರಸಕ್ತ ಸಾಲಿನಲ್ಲಿ ರೂ.20,00,000 ಮೊತ್ತವನ್ನು ಲಾಭ-ನಷ್ಟ ತಃಖ್ತೆಯಿಂದ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗಿದೆ. ಇದು ಹಿಂದಿನ ಸಾಲುಗಳಲ್ಲಿ ಆಪದ್ಧನ ನಿಧಿಯಿಂದ ಕಟ್ಟಡ ನಿಧಿಗೆ ವರ್ಗಾಯಿಸಲಾದ ಮೊತ್ತದ ಪುನಃಭರಣವಾಗಿರುತ್ತದೆ.

6. ಅಡಿಕೆ ಮಾರಾಟದ ಕರಾರು ಮಾಡಿಕೊಳ್ಳುವಾಗ ಕಡಿಮೆ ಬೆಲೆಗೆ ಮಾರಾಟದ ಕರಾರು ಮಾಡಿಕೊಳ್ಳುವುದು ಸೂಕ್ತವಲ್ಲ. ಈ ವಹಿವಾಟಿನಲ್ಲಿ ಖರೀದಿ ಮತ್ತು ಮಾರಾಟದ ಬಗ್ಗೆ ನಿಗಾವಹಿಸುವುದು ಮತ್ತು ಈ ಪ್ರಕ್ರಿಯೆಯ ಬಗ್ಗೆ ಪ್ರತಿ ಸಾಲಿನಲ್ಲಿಯೂ ಯೋಜನೆಯನ್ನು ರೂಪಿಸುವುದು ಅದರಂತೆ ವಹಿವಾಟು ನಡೆಸುವುದು ಸೂಕ್ತವಾಗಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ.

**ಸಮಜಾಯಿಷಿ: ಮಾರುಕಟ್ಟೆ ಪರಿಸ್ಥಿತಿಯನ್ನಾಧರಿಸಿ ನಿರ್ಣಯಿಸಲಾಗುತ್ತದೆ. ಆದಾಗ್ಯೂ ಮಾರುಕಟ್ಟೆಯ ಪ್ರತಿಕೂಲ ಪರಿಸ್ಥಿತಿಯನ್ನು ಹೊರತುಪಡಿಸಿ ಉಳಿದ ಸಂದರ್ಭಗಳಲ್ಲಿ ಉತ್ತಮ ಬೆಲೆಗೆ ಮಾರಾಟದ ಕರಾರು ಮಾಡಿಕೊಳ್ಳಲಾಗುತ್ತಿದೆ.**

7. ಸದಸ್ಯರಿಗೆ ಷೇರು ಬಂಡವಾಳದ ಮೇಲಿನ ಲಾಭಾಂಶವನ್ನು ಸದಸ್ಯರ ಉಳಿತಾಯ ಖಾತೆಗೆ ವರ್ಗಾಯಿಸಲು ಸೂಚಿಸಿದೆ.

**ಸಮಜಾಯಿಷಿ: ಸಾಧಕ-ಬಾಧಕಗಳನ್ನು ಗಮನಿಸಿ ಅಗತ್ಯ ಕ್ರಮವಿಡಲಾಗುವುದು.**

8. ಸಂಘವು ಈ ಮೇಲೆ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ.

**ಸಮಜಾಯಿಷಿ: ಲಾಭಾಂಶ ಪಾವತಿಯಾಗಿರದಿದ್ದರೂ ಸಹ ಸಂಘದ ವ್ಯವಹಾರದ ಹಿತದೃಷ್ಟಿಯಿಂದ ಅಂತಹ ಸಂಸ್ಥೆಗಳ ಶೇರುಗಳನ್ನು ಹೊಂದುವುದು ಅಪೇಕ್ಷಣೀಯವಾದ ಕಾರಣ ಮುಂದುವರೆಸಲಾಗಿರುತ್ತದೆ. ಕೆಲವು ಸಂಸ್ಥೆಗಳು ನಷ್ಟದಲ್ಲಿರುವ ಕಾರಣ ಲಾಭಾಂಶ ಪಾವತಿಯಾಗಿರುವುದಿಲ್ಲ. ಆದಾಗ್ಯೂ ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿಕೊಂಡು ಸಾಧಕ-ಬಾಧಕ ಪರಿಶೀಲಿಸಿ ಅಗತ್ಯ ಕ್ರಮವಿಡಲಾಗುವುದು.**

9. ಅಗತ್ಯಕ್ಕಿಂತ ಹೆಚ್ಚಿನ ದಾಸ್ತಾನು ಇಡುವುದರಿಂದ ಮುಂದೆ ದರ ಇಳಿಕೆಯಾದರೆ ಅದು ಸಂಘಕ್ಕೆ ನಷ್ಟ ಉಂಟು ಮಾಡುವ ಸಾಧ್ಯತೆಯಿರುತ್ತದೆ. ಈ ಕುರಿತು ಕ್ರಮವಿಡುವಂತೆ ಸೂಚಿಸಲಾಗಿದೆ.

**ಸಮಜಾಯಿಷಿ: ಸಂಘದ ಸದಸ್ಯರ ಹಿತದೃಷ್ಟಿಯಿಂದ ಮತ್ತು ಮಾರುಕಟ್ಟೆ ಸ್ಥಿರತೆ ಕಾಪಾಡುವ ದೃಷ್ಟಿಯಿಂದ ಖರೀದಿಸಿದ್ದು, ಇದರಿಂದಾಗಿ ಅಗತ್ಯಕ್ಕಿಂತ ಹೆಚ್ಚಿನ ಖರೀದಿ ಮಾಡಿದಂತಾಗಿರುತ್ತದೆ. ಆದಾಗ್ಯೂ ಲೆಕ್ಕಪರಿಶೋಧಕರ ಸಲಹೆಯನ್ನು ಗಮನಿಸಿಕೊಂಡು ಮುಂಜಾಗ್ರತಾ ಕ್ರಮವಿಡಲಾಗುವುದು.**

10. ಸದಸ್ಯರಿಗೆ ಹಿಂದಿನ ಸಾಲಿನಲ್ಲಿ ಶಾಖೆಗಳಲ್ಲಿ ಆಯಾ ಭಾಗದ ಸದಸ್ಯರನ್ನು ಸೇರಿಸಿ ಸಂಸ್ಥೆಯ ವ್ಯವಹಾರದ ಬಗ್ಗೆ ಹಾಗೂ ಸಂಸ್ಥೆಯಲ್ಲಿ ಸದಸ್ಯರು ವ್ಯವಹಾರದಲ್ಲಿ ಪಾಲ್ಗೊಳ್ಳುವ ಬಗ್ಗೆ ಮಾಹಿತಿಯನ್ನು ನೀಡಲಾಗುತ್ತಿದ್ದು, ಸದಸ್ಯರಿಗೆ ಸಂಘದ ಚಟುವಟಿಕೆಗಳು ಮತ್ತು ನೀಡುತ್ತಿರುವ ಸೌಲಭ್ಯಗಳು ಹಾಗೂ ಸಹಕಾರ ಸಂಘದ ಪ್ರಸ್ತುತ ಕಾಯ್ದೆ ಮತ್ತು ನಿಯಮಗಳ ಬಗ್ಗೆ ಮಾಹಿತಿಯನ್ನು ನುರಿತ ವ್ಯಕ್ತಿಗಳಿಂದ ನೀಡುವುದು ಉತ್ತಮವೆಂದು ನಮ್ಮ ಅಭಿಪ್ರಾಯವಾಗಿದೆ.

**ಸಮಜಾಯಿಷಿ: ಪ್ರತಿ ವರ್ಷ ತಾಲ್ಲೂಕು ಮಟ್ಟದಲ್ಲಿ ಷೇರುದಾರರ ಸಂಪರ್ಕ ಸಭೆಯನ್ನು ನಡೆಸಿ, ಸಂಘದ ಚಟುವಟಿಕೆಗಳು, ನೀಡುತ್ತಿರುವ ಸೌಲಭ್ಯಗಳು ಹಾಗೂ ಸಹಕಾರ ಕಾಯ್ದೆ ಮತ್ತು ನಿಯಮಗಳ ಬಗೆಗೆ ಮಾಹಿತಿ ನೀಡಲಾಗುತ್ತಿದೆ.**

## 46) ಲೆಕ್ಕಪರಿಶೋಧನಾ ಫಲಿತಾಂಶ ಮತ್ತು ಕ್ರಮವಿಡಬೇಕಾದ ಕಂಡಿಕೆಗಳು:

| ಕ್ರ.ಸಂ. | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ | ನ್ಯೂನತೆಯ ಸಂಕ್ಷಿಪ್ತ ವಿವರ |
|---|---|---|---|
| 1 | 12(2) | 13 | 1. ಸಹಕಾರಿ ಕಾಯ್ದೆಯ ಪ್ರಕಾರ ಆಪದ್ಧನ ನಿಧಿಯನ್ನು ನಿಗದಿತ ಠೇವಣಿಯಲ್ಲಿ ಗುಂತಾಯಿಸಿದ್ದು, ಪ್ರಮಾಣ ಕಡಿಮೆಯಿರುತ್ತದೆ.<br>2. ಬೈಲಾ ಕ್ರಮ ಸಂಖ್ಯೆ 16ರ ಪ್ರಕಾರ ಒಟ್ಟು ಸದಸ್ಯರಲ್ಲಿ ಶೇ.45.05 ರಷ್ಟು ಸದಸ್ಯರು ಕನಿಷ್ಟ ವ್ಯವಹಾರ ನಡೆಸಿರುವುದಿಲ್ಲ.<br>3. ಸಂಘದ ಬೈಲಾ ಸಂಖ್ಯೆ 29 ರ ಪ್ರಕಾರ ನಾಮಮಾತ್ರ ಸದಸ್ಯತ್ವವು ಸಂಘದೊಂದಿಗೆ ಹೊಂದಿದ ನಿರ್ದಿಷ್ಟ ಕೆಲಸ ಅಥವಾ ವ್ಯವಹಾರ ಕೊನೆಗೊಂಡ ತಕ್ಷಣ ಕೊನೆಗೊಳ್ಳತಕ್ಕದ್ದು. |
| 2 | 13ಎ(3) | 14 | ಸಂಘದ ಎಲ್ಲಾ ಸದಸ್ಯರಿಂದ ಕೆವೈಸಿ ದಾಖಲಾತಿಗಳನ್ನು ಪಡೆಯಲು ಸೂಚಿಸಿದೆ. |
| 3 | 15(2) | 17 | ಸವಕಳಿ ನಿಧಿಯಲ್ಲಿ ರೂ.1,43,022.31 ಹೆಚ್ಚಿರುವುದು ಕಂಡುಬರುತ್ತದೆ. |
| 4 | 15(3) | 18 | ಆಪದ್ಧನ ನಿಧಿಯಿಂದ ಕಟ್ಟಡ ನಿಧಿಗೆ ವರ್ಗಾಯಿಸಿದ ಮೊತ್ತ ರೂ.4,05,50,000.00 ಆದಷ್ಟು ಶೀಘ್ರ ಮರುಪೂರಣ ಮಾಡಲು ಸೂಚಿಸಲಾಗಿದೆ. |
| 5 | 16(7) | 20 | ಸಂಘವು ಈ ಮೇಲೆ ಮಾಡಿದ ಹೂಡಿಕೆಗಳಲ್ಲಿ ಬಹಳಷ್ಟು ಹೂಡಿಕೆಗಳ ಮೇಲೆ ಯಾವುದೇ ಲಾಭಾಂಶ ಪಾವತಿ ಆಗದಿರುವುದನ್ನು ಗಮನಿಸಲಾಗಿದ್ದು, ಅಂತಹ ಹೂಡಿಕೆಗಳನ್ನು ಅವಶ್ಯಕತೆಯಿರುವಷ್ಟನ್ನು ಹೊರತುಪಡಿಸಿ ಉಳಿದ ಹೂಡಿಕೆಗಳನ್ನು ಹಿಂಪಡೆಯಲು ಕೂಡಲೇ ಕ್ರಮವಿಡುವಂತೆ ಸೂಚಿಸಲಾಗಿದೆ. |

| | | | |
|---|---|---|---|
| 6 | 17ಎ(2) | 21 | ಯೂನಿಯನ್ ಬ್ಯಾಂಕಿಗೆ ಪಾವತಿಸಿದ ಬಡ್ಡಿಯು ನಿಗದಿತ ಬಡ್ಡಿಗಿಂತ ಹೆಚ್ಚಾಗಿರುತ್ತದೆ. |
| 7 | 21(1) | 25 | ಇತರೆ ಬಾಬ್ತುಗಳನ್ನು ಆದಷ್ಟು ಶೀಘ್ರವಾಗಿ ಪರಿಶೀಲನೆ ಮಾಡಿ ಹೊಂದಾಣಿಕೆ ಮಾಡಿಕೊಳ್ಳಲು ಸಲಹೆ ನೀಡಲಾಗಿದೆ. |
| 8 | 21(2) | 25 | ಇತರೆ ಜವಾಬ್ದಾರಿಗಳನ್ನು ಪಾವತಿಸಲು ಸೂಚಿಸಲಾಗಿದೆ. |
| 9 | 29(ಸಿ) | 35 | ಕೇಂದ್ರಕಛೇರಿಯ ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಖರೀದಿಸಲಾದ ಹವಾ ನಿಯಂತ್ರಣ ಯಂತ್ರ, ಸಿ.ಸಿ.ಕ್ಯಾಮೆರಾ, ಮುಂತಾದ ಕಛೇರಿ ಸಲಕರಣೆಗೆ ಸಂಬಂಧಪಟ್ಟ ಚರಾಸ್ತಿಗಳನ್ನು ಪೀಠೋಪಕರಣಗಳಲ್ಲಿ ಸೇರಿಸಿರುವುದನ್ನು ಗಮನಿಸಲಾಗಿದ್ದು, ಸದರಿ ಮೊತ್ತವನ್ನು ಪೀಠೋಪಕರಣದಿಂದ ಬೇರ್ಪಡಿಸಿ ಕಛೇರಿ ಸಲಕರಣೆಗೆ ವರ್ಗಾಯಿಸಲು ಕ್ರಮವಿಡಲು ಸೂಚಿಸಿದೆ. |
| 10 | 43(2) | 46 | ಕಳೆದ ಸಾಲಿಗೆ ಹೋಲಿಸಿದಲ್ಲಿ ಅಡಿಕೆ ಮಾರಾಟದಲ್ಲಿ ಇಳಿಕೆ ಕಂಡುಬಂದಿರುತ್ತದೆ. |
| | | | **ಸಮಜಾಯಿಷಿ: ಸಲಹೆಗಳನ್ನು ಗಮನಿಸಿದೆ. ಸಂಬಂಧಿಸಿದ ಕಂಡಿಕವಾರುಗಳಲ್ಲಿ ಸಮಜಾಯಿಷಿ ನೀಡಲಾಗಿದೆ.** |

## ಲೆಕ್ಕಪರಿಶೋಧಕರ ಧೃಡೀಕರಣ ಪತ್ರ
## (ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 63(16)ರಂತೆ)

**ನಾವು, ಮೆ. ಮಧುಕರ ಹೆಗಡೆ ಅಂಡ್ ಕೋ., ಬೆಂಗಳೂರು**
**ಈ ಮೂಲಕ ಧೃಡೀಕರಿಸುವುದೇನೆಂದರೆ,**

1. ನಮ್ಮ ತಿಳುವಳಿಕೆ ಅಭಿಪ್ರಾಯ ಹಾಗು ಲೆಕ್ಕಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ವಿವರಣೆಗಳಂತೆ, ಸಂಘದ ಲೆಕ್ಕಪತ್ರಗಳು, ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಕರ್ನಾಟಕ ಸಹಕಾರಿ ಸಂಘಗಳ ಕಾಯಿದೆ 1959 ಅಧಿನಿಯಮದಲ್ಲಿ ಅಗತ್ಯಪಡಿಸಿದ ರೀತಿಯಂತೆ ಮಾಹಿತಿ ನೀಡುತ್ತೇವೆ.

2. ದಿನಾಂಕ 31.03.2024 ರ ಅಂತ್ಯಕ್ಕೆ ಇದ್ದ ಅಡಾವೆ ಪತ್ರಿಕೆ ಹಾಗು ಸನ್ 2023–24 ನೇ ಸಾಲಿನ ಲಾಭ ಹಾನಿ ಪತ್ರಿಕೆಯು ಸಂಘದ ನಿಜವಾದ ಹಾಗು ನ್ಯಾಯ ಸಮ್ಮತವಾದ ಆರ್ಥಿಕ ಸ್ಥಿತಿ ಮತ್ತು ಲಾಭ ಹಾನಿಯನ್ನು ಪ್ರತಿಬಿಂಭಿಸುತ್ತದೆ ಎಂದು ಅಭಿಪ್ರಾಯ ಪಡುತ್ತೇವೆ.

3. ನಮ್ಮ ಜ್ಞಾನ ಹಾಗು ನಂಬಿಕೆ ಪ್ರಕಾರ ಲೆಕ್ಕಪರಿಶೋಧನೆಗೆ ಅವಶ್ಯವಾದ ಮಾಹಿತಿ ಹಾಗು ವಿವರಣೆಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇವೆ.

4. ಸಂಘದ ಲೆಕ್ಕಪರಿಶೋಧನಾ ಕಾಲಕ್ಕೆ ಕಂಡುಬಂದಂತೆ ಸಂಘದಲ್ಲಿ ಸರಿಯಾದ ಲೆಕ್ಕಪತ್ರಗಳನ್ನು ಇಡಲಾಗಿದೆ ಎಂದು ಅಭಿಪ್ರಾಯ ಪಡುತ್ತೇವೆ.

5. ವರದಿಗೆ ಲಗತ್ತಿಸಿದ ಅಡಾವೆ ಪತ್ರಿಕೆ ಹಾಗು ಇತರೆ ಆರ್ಥಿಕ ತ:ಖ್ತೆಗಳು ಸಂಘದಲ್ಲಿ ನಿರ್ವಹಿಸಿದ ಲೆಕ್ಕಪತ್ರಗಳಿಗೆ ತಾಳೆ ಇರುತ್ತವೆ.

**ಕಡ್ಡಾಯ ಲಗತ್ತುಗಳು:**

| | |
|---|---|
| 1. ಜಮಾ ಖರ್ಚು ತಃಖ್ತೆ | ಲಗತ್ತಿಸಲಾಗಿದೆ. |
| 2. ವ್ಯಾಪಾರ ತಃಖ್ತೆ | ಲಗತ್ತಿಸಲಾಗಿದೆ. |
| 3. ಲಾಭ–ಹಾನಿ ತಃಖ್ತೆ | ಲಗತ್ತಿಸಲಾಗಿದೆ. |
| 4. ಆಸ್ತಿ–ಜವಾಬ್ದಾರಿ ತಃಖ್ತೆ | ಲಗತ್ತಿಸಲಾಗಿದೆ. |

| | |
|---|---|
| 5. ಆಸ್ತಿ–ಜವಾಬ್ದಾರಿ ತಃಖ್ತೆಯಲ್ಲಿರುವ ಎಲ್ಲಾ ಅಂಶಗಳಿಗೆ ಕುಳುವಾರು/ ದೃಢೀಕರಣ ತಃಖ್ತೆಯನ್ನು **ಮತ್ತು ಬ್ಯಾಂಕ್ ಸಮನ್ವಯ** ತಃಖ್ತೆಯನ್ನು ಲಗತ್ತಿಸುವುದು. | **ಲ**ಗತ್ತಿಸಲಾಗಿದೆ. |
| 6. ಹಿಂದಿನ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆಯ ಛಾಯಾ **ಪ್ರತಿಯನ್ನು ಲೆಕ್ಕಪರಿಶೋಧಕರು ದೃಢೀ**ಕರಿಸಿ ಕಡ್ಡಾಯವಾಗಿ **ವರದಿಗೆ** ಲಗತ್ತಿಸತಕ್ಕದ್ದು. | **ಲ**ಗತ್ತಿಸಲಾಗಿದೆ. |

ಸಹಿ/–
ಮಧುಕರ ಹೆಗಡೆ & ಕಂ
ಸನ್ನದು ಲೆಕ್ಕಪರಿಶೋಧಕರು
ಎಫ್.ಆರ್ ನಂ:007954ಎಸ್

ಸಹಿ/–
**ಮಧುಕರ ಜಿ ಹೆಗಡೆ**
ಮಾಲೀಕರು ಎಂ.ಸಂ.206777
UDIN NO: 24206777BKEZQY4743

ದಿನಾಂಕ: 25/07/2024
ಸ್ಥಳ: ಬೆಂಗಳೂರು

ಮುದ್ರಿತ ಪ್ರತಿ

ತೆರೆದ– ಅಂಚೆ

ಇವರಿಗೆ

............................................................

............................................................

............................................................

............................................................

ಇಂದ:

**ಮಲೆನಾಡು ಅಡಿಕೆ ಮಾರಾಟದ ಸಹಕಾರ ಸಂಘ ನಿಯಮಿತ**

ಎ.ಪಿ.ಎಂ.ಸಿ. ಪ್ರಾಂಗಣ, ಸಾಗರ ರಸ್ತೆ

ಶಿವಮೊಗ್ಗ – 577 204

Printed at Manipal Technologies Limited, Manipal